ಜನಶಕ್ತಿ

ಮಿಡಿವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

Blog: janashakthi.wordpress.com e-mail : js_weekly@yahoo.com

ಸಂಪುಟ 5 ಸಂಚಿಕೆ 36 ಸೆಪ್ಟೆಂಬರ್ 4, 2011 ರೂ. 5/- ಪುಟ 16







ಟೀಂ ಅಣ್ಣಾ ಮತ್ತು ಭ್ರಷ್ಟಾಚಾರ ವಿರೋಧಿ ಆಂದೋಲನದ ರೂಪ - ಸ್ವರೂಪ - ವಿರೂಪ

ಲೋಕಪಾಲ ಮಸೂದೆ : ಕೊನೆಗೊಳ್ಳಲಿ ಈ ಇಕ್ಕಟ್ಟು



ಅಕ್ರಮಗಳ ಸಕ್ರಮಗೊಳಿಸುವ ಕಸರತ್ತಿನಲ್ಲಿ



ಲಿಬಿಯಾ : ಇರಾಕ್‌ನಂತೆ ಜಾರು ಹಾದಿಯಲ್ಲಿ

ಗ್ರಾಮ ಪಂಚಾಯತ್‌ಗಳಿಗೆ ಹೆಚ್ಚಿನ ಅನುದಾನ'

ಚುನಾಯಿತ ಗ್ರಾಮ ಪಂಚಾಯಿತಿ ಸದಸ್ಯರ ರಾಜ್ಯಮಟ್ಟದ ರ್‍ಯಾಲಿಯಲ್ಲಿ ಆಗ್ರಹ

■ ನಾರಾಯಣ ಕಾಳೆ



ನೈಜ ಅಧಿಕಾರ ವಿಕೇಂದ್ರೀಕರಣಕ್ಕಾಗಿ ಗ್ರಾಮ ಪಂಚಾಯತ್‌ಗಳಿಗೆ ಹೆಚ್ಚಿನ ಅನುದಾನಕ್ಕಾಗಿ, ಗ್ರಾಮ ಪಂಚಾಯತ್ ಸದಸ್ಯರ ವೇತನ ಹೆಚ್ಚಳ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ **'ಕರ್ನಾಟಕ ರಾಜ್ಯ ಗ್ರಾಮ ಪಂಚಾಯತ್ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರ ಒಕ್ಕೂಟ'**ದ ನೇತೃತ್ವದಲ್ಲಿ ಆಗಸ್ಟ್ 9, 2011ರಂದು ಗ್ರಾಮ ಪಂಚಾಯತ್ ಜನಪ್ರತಿನಿಧಿಗಳಿಗೆ ರಾಜ್ಯಮಟ್ಟದ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಬೆಂಗಳೂರು ನಗರ ರೈಲ್ವೆ ನಿಲ್ದಾಣದಿಂದ ರಾಜ್ಯ 30 ಜಿಲ್ಲೆಗಳಿಂದ ಸಾವಿರಾರು ಸಂಖ್ಯೆಯ ಸದಸ್ಯರು ಮೆರವಣಿಗೆ ಮೂಲಕ ಘೋಷಣೆ ಕೂಗುತ್ತಾ ಸ್ವಾತಂತ್ರ್ಯ ಉದ್ಯಾನವನದಲ್ಲಿ ಬಹಿರಂಗ ಪ್ರತಿಭಟನೆ ನಡೆಸಿದರು.

ವರ್ಷಕ್ಕೆ ಒಂದು ಕೋಟಿ ಹಣ, ಹೆಚ್ಚಿನ ಅಧಿಕಾರ ಕೊಡಿ

ಪ್ರತಿಭಟನಾ ಸಭೆಯನ್ನು ಉದ್ದೇಶಿಸಿ ರಾಜ್ಯ ಸಂಚಾಲಕ ಸಮಿತಿ ಅಧ್ಯಕ್ಷ ಮಡಿವಾಳಪ್ಪ ದಿಂಡಲಕೊಪ್ಪ ಮಾತನಾಡಿ ರಾಜ್ಯದಲ್ಲಿನ ಸುಮಾರು 5627 ಗ್ರಾಮ ಪಂಚಾಯಿತಿಗಳಿಗೆ ಅನುದಾನದ ಕೊರತೆಯಿಂದ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಜನರಿಗೆ ನೀಡಲಾಗುತ್ತಿಲ್ಲ. ಇದರಿಂದ ಪಂಚಾಯತ್‌ಗಳು ಬಳಲುತ್ತಿವೆ. ಜನಸಂಖ್ಯಾನುಗುಣವಾಗಿ ಪಂಚಾಯತ್‌ಗಳಿಗೆ ಕನಿಷ್ಠ ವರ್ಷಕ್ಕೆ 1 ಕೋಟಿ ರೂ. ಹೆಚ್ಚಿನ ಅನುದಾನ ನೀಡಲು ರಾಜ್ಯ ಸರ್ಕಾರ ತಕ್ಷಣ ಮುಂದಾಗಬೇಕು. ಅಲ್ಲದೆ ರೇಷನ್‌ಕಾರ್ಡ್, ಮನೆ ನಿವೇಶನ, ವೃದ್ಧಾಪ್ಯವೇತನ ಮನೆ ಮಂಜೂರಾತಿ ಆದಾಯ ಪ್ರಮಾಣಪತ್ರ, ಪಹಣಿ ಪತ್ರಿಕೆ ಜಮೀನಿನ ಮ್ಯುಟೇಷನ್, ಆರೋಗ್ಯ ಇತ್ಯಾದಿ ಹಲವಾರು ಅಧಿಕಾರವನ್ನು ಗ್ರಾಮ ಪಂಚಾಯತ್‌ಗೆ ನೀಡಬೇಕೆಂದು ಸರ್ಕಾರವನ್ನು ಆಗ್ರಹಿಸಿದರು.

ನೈಜ ವಿಕೇಂದ್ರೀಕರಣದ ಅಗತ್ಯತೆ

ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯಾಧ್ಯಕ್ಷರಾದ ಮಾರುತಿ ಮಾನ್ಪಡೆಯವರು ಹಂಪಿ ವಿ.ವಿ.ಯ ಡಾ. ಚಂದ್ರ ಪೂಜಾರಿಯವರ "ಕರ್ನಾಟಕದ ಪಂಚಾಯತ್‌ರಾಜ್ ಸಮಸ್ಯೆ ಮತ್ತು ಪರಿಹಾರಗಳು' ಪುಸ್ತಕ ಬಿಡುಗಡೆ ಮಾಡಿ, ಮಾತನಾಡುತ್ತಾ ನೈಜ ಅಧಿಕಾರ ವಿಕೇಂದ್ರೀಕರಣ ಮಾಡುವ ಮೂಲಕ ಪಂಚಾಯಿತಿಯನ್ನು ಬಲಪಡಿಸಲು ಸಾಧ್ಯವಾಗುತ್ತದೆ. ರಾಜ್ಯ ಸರ್ಕಾರ 3ನೇ ಹಣಕಾಸು ಆಯೋಗದ ಶಿಫಾರಸ್ಸನ್ನು ಸಂಪೂರ್ಣವಾಗಿ ಜಾರಿಗೆ ತರಬೇಕು. ಗ್ರಾಮ ಪಂಚಾಯತ್ ಸ್ಥಳೀಯ ಸರ್ಕಾರವಾಗಿದ್ದು, ಅದನ್ನು ಬಲಪಡಿಸುವ ಜವಾಬ್ದಾರಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ್ದಾಗಿದೆ ಅಲ್ಲದೆ ಕೇರಳ ಮಾದರಿಯ ಪಂಚಾಯತ್ ವ್ಯವಸ್ಥೆ ಜಾರಿ ಮಾಡಬೇಕೆಂದು ಆಗ್ರಹಿಸಿದರು.

ಸಚಿವ ಶೆಟ್ಟರ್ ಭರವಸೆ

ನಂತರ ಬೃಹತ್ ಪ್ರತಿಭಟನೆ ನಡೆಯುತ್ತಿರುವ ಸ್ಥಳಕ್ಕೆ ಮುಖ್ಯಮಂತ್ರಿಗಳ ಪರವಾಗಿ ಪಂಚಾಯತ್ ಹಾಗೂ ಗ್ರಾಮೀಣಾಭಿವೃದ್ಧಿ ಮಂತ್ರಿಗಳಾದ ಜಗದೀಶ್‌ಶೆಟ್ಟರ್ ಹಾಜರಾಗಿ ಮನವಿ ಪತ್ರ ಸ್ವೀಕರಿಸಿ ಮಾತನಾಡಿ ಪಂಚಾಯತ್‌ಗಳಿಗೆ ಹೆಚ್ಚಿನ ಅನುದಾನ ನೀಡುವ ಕುರಿತು ಮುಖ್ಯಮಂತ್ರಿಗಳ ಜೊತೆ ತಕ್ಷಣ ಚರ್ಚಿಸಿ ಅನುದಾನ ಹೆಚ್ಚಳಕ್ಕೆ ಪ್ರಯತ್ನಿಸುತ್ತದೆ. ಅಲ್ಲದೆ 'ಒಕ್ಕೂಟದ ರಾಜ್ಯ ಪದಾಧಿಕಾರಿಗಳೊಂದಿಗೆ ಮುಖ್ಯಮಂತ್ರಿಗಳ ಜೊತೆ ಸಭೆ ಸೇರಿ, 3ನೇ ಹಣಕಾಸು ಆಯೋಗದ ಶಿಫಾರಸ್ಸು ಜಾರಿಗೆ ಹಾಗೂ ಸದಸ್ಯರ ಗೌರವಧನ ಹೆಚ್ಚಳ ಪಂಚಾಯತ್ ಗಳಿಗೆ ಹೆಚ್ಚಿನ ಅಧಿಕಾರ ನೀಡುವ ಕುರಿತು ಚರ್ಚಿಸಿ ಅಂತಿಮ ತೀರ್ಮಾನಕ್ಕೆ ಬರಲಾಗುವುದು ಎಂದು ಹೇಳಿದರು.

ಪ್ರತಿಭಟನೆಯ ನೇತೃತ್ವವನ್ನು ಒಕ್ಕೂಟದ ರಾಜ್ಯ ಸಂಚಾಲಕರ ಸಮಿತಿಯ ಅಧ್ಯಕ್ಷರಾದ ಮಡಿವಾಳಪ್ಪ ದಿಂಡಲಕೊಪ್ಪ, ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯಾಧ್ಯಕ್ಷರಾದ ಮಾರುತಿ ಮಾನ್ಪಡೆ, ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ನೌಕರರ ಸಂಘದ ರಾಜ್ಯ ಕಾರ್ಯದರ್ಶಿ ಎಂ.ಬಿ.ನಾಡಗೌಡ, ಒಕ್ಕೂಟದ ಸಂಚಾಲಕರು ಗಳಾದ ಮಹೇಶ್, ತಿಲಕ್‌ಗೌಡ, ಸುಗಂಧರಾಜ್ ದೇಸಾಯಿ, ನಾರಾಯಣಕಾಳೆ, ಉಪೇಂದ್ರು, ಎಸ್.ವೈ.ಬೆಳ್ಳಿಗುಡ್ಡ, ಭೀಮರಾವ್ ಕುಲಕರ್ಣಿ, ಭೀಮಾನಾಯಕ್, ಅಶೋಕ್, ಆನಂದ್, ಮಹೇಶ್ವರ್ ಜಗಳೂರು, ಶಿವು ಬಿರಾದಾರ್, ತಿಪ್ಪೇಸ್ವಾಮಿ, ಆರ್.ಚಂದ್ರಶೇಖರ್, ಭೀಮರಾವ್ ಪೂಜಾರಿ ಮುಂತಾದವರು ವಹಿಸಿದ್ದರು. ಈ ಬೃಹತ್ ಪ್ರತಿಭಟನೆಯಲ್ಲಿ ರಾಜ್ಯದ 30 ಜಿಲ್ಲೆಗಳಿಂದ 10 ಸಾವಿರಕ್ಕೂ ಹೆಚ್ಚಿನ ಚುನಾಯಿತ ಗ್ರಾಮ ಪಂಚಾಯತ್ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರು ಭಾಗವಹಿಸಿದ್ದುದು ವಿಶೇಷ. ❑

'ಭ್ರಷ್ಟಾಚಾರ ವಿರೋಧಿಸಿ-ಭಾರತ ಉಳಿಸಿ': ಡಿವೈಎಫ್ಐ ರಾಜ್ಯಾದ್ಯಂತ ಯುವ ಜನಾಂದೋಲನ



ಬೆಂಗಳೂರಿನಲ್ಲಿ ಪಂಜಿನ ಮೆರವಣಿಗೆ

ಇದು ದೇಶದ ಜನತೆಗೆ, ವಿಶೇಷವಾಗಿ ಯುವಜನತೆಗೆ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್(ಡಿವೈಎಫ್ಐ) ನೀಡಿದ ಕರೆ ಸ್ವಾತಂತ್ರ್ಯ ಸಂಗ್ರಾಮದ ಬಳುವಳಿಯಾದ ಈ ಯುವಜನ ಚಳುವಳಿ 65ನೇ ಸ್ವಾತಂತ್ರ್ಯೋತ್ಸವವನ್ನು ಭ್ರಷ್ಟಾಚಾರದ ವಿರುದ್ಧ ಯುವಜನರು ಸಂಗ್ರಾಮ ಸಾರುವ ಸಂದೇಶದ ಸಂದರ್ಭವನ್ನಾಗಿ ಡಿವೈಎಫ್ಐ ಪರಿಮರ್ಶಿಸಿತು. ಕರ್ನಾಟಕದಲ್ಲಿಯೂ ಜಿಲ್ಲೆ ಜಿಲ್ಲೆಗಳಲ್ಲಿ ಪಂಜಿನ ಮೆರವಣಿಗೆ, ವಿಚಾರಸಂಕಿರಣ ಇತ್ಯಾದಿಗಳನ್ನು ನಡೆಸಿ ಜಾಗೃತಿ ಮೂಡಿಸಿತು.'ಬಡವರ ಬಂಧು ನಾವು' ಎಂದು ಬಡಾಯಿಸಿದ್ದ ಕಾಂಗ್ರೆಸ್ ನೇತೃತ್ವ ಯುಪಿಎ ಸರ್ಕಾರ ಮತ್ತು ಅಭಿವೃದ್ಧಿಯೇ ಮೂಲಮಂತ್ರವೆಂದು ಬೊಬ್ಬಿಟ್ಟಿದ್ದ ರಾಜ್ಯ ಸರ್ಕಾರಗಳ ನವ ಉದಾರೀಕರಣ(ದೊಡ್ಡ ದೊಡ್ಡ ದೇಶಿ-ವಿದೇಶಿ ಕಾರ್ಪೋರೇಟ್ ಕಂಪನಿಗಳ ಪರ) ನೀತಿಗಳಿಂದಾಗಿ, ಸಂವಿಧಾನದ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆಯನ್ನೇ ಬುಡಮೇಲು ಮಾಡುವಂತಹ ಮಹಾಭ್ರಷ್ಟಾಚಾರವನ್ನು ಆಳುವ ಸರ್ಕಾರಗಳು ಅನುಸರಿಸುತ್ತಿವೆ ಎಂದು ಕಾಂ: ಎಸ್.ವೈ.ಗುರುಶಾಂತ್‌ರವರು ಬೆಂಗಳೂರಿನಲ್ಲಿ ಡಿವೈಎಫ್ಐ- ಆಯೋಜಿಸಿದ್ದ ಯುವಜನರ ಪಂಜಿನ ಮೆರವಣಿಗೆ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಭ್ರಷ್ಟಾಚಾರದ ವ್ಯವಸ್ಥೆಯಲ್ಲಿನ ಮೂಲಗಳನ್ನು ಗುರುತಿಸಿದ ಅವರು ಪ್ರಸ್ತಕವಾಗಿರುವ ಭ್ರಷ್ಟಾಚಾರವನ್ನು ಮಟ್ಟ ಹಾಕಲು ಬಲಿಷ್ಠ ಲೋಕಪಾಲ್ ಕಾಯ್ದೆ ಅಗತ್ಯವಿದೆ. ಕೇವಲ ಅಷ್ಟು ಮಾತ್ರವೇ ಅಲ್ಲದೇ ಇನ್ನೂ ಹಲವು ಆಯಾಮಗಳಲ್ಲಿ ಹೋರಾಟ ನಡೆಸಬೇಕಿದೆ ಎಂದು ವಿವರಿಸಿದರು. ಭ್ರಷ್ಟಾಚಾರವು ಸಮಗ್ರ ಅಭಿವೃದ್ಧಿಗೆ, ಪ್ರಜಾಪ್ರಭುತ್ವಕ್ಕೆ ಹೇಗೆ ಮಾರಕವೆಂಬುದನ್ನು ಕರ್ನಾಟಕದ ಉದಾಹರಣೆ ಸಮೇತ ತಿಳಿಸಿದರು.

ಆರಂಭದಲ್ಲಿ ಗಾಂಧಿಪ್ರತಿಮೆಗೆ ಹೂಗಳನ್ನು ಅರ್ಪಿಸಿದ ಬಳಿಕ ಪ್ರತಿಜ್ಞಾ ವಿಧಿಯನ್ನು ಡಿವೈಎಫ್ಐ ರಾಜ್ಯ ಕಾರ್ಯದರ್ಶಿ ಬಿ.ರಾಜಶೇಖರಮೂರ್ತಿ, ಭೋದಿಸಿದರು. ಕಾರ್ಯಕ್ರಮದಲ್ಲಿ ಬೆಂ.ಜಿಲ್ಲಾ ಅಧ್ಯಕ್ಷರಾದ ಪಿ.ನಾಗರಾಜ್, ಕಾರ್ಯದರ್ಶಿ ಲಿಂಗರಾಜ್ ಸೇರಿದಂತೆ ನೂರಾರು ಯುವಜನರು ಪಾಲ್ಗೊಂಡಿದ್ದರು.

ರಾಜ್ಯಾದ್ಯಂತ ಚಿಕ್ಕಬಳ್ಳಾಪುರ, ಕೋಲಾರ, ಮಂಗಳೂರು, ಉಡುಪಿ, ಮಂಡ್ಯ, ಕೊಡಗು, ಹಾಸನ, ಬಳ್ಳಾರಿ ಸೇರಿದಂತೆ ಮತ್ತೊಂದೆಡೆ ಸಾವಿರಾರು ಯುವಜನರು ಆಗಸ್ಟ್ 14–15 ರಂದು ಪಂಜಿನ ಮೆರವಣಿಗೆ, ಬೈಕ್ ರ್‍ಯಾಲಿ, ಯುವಜನ ರ್‍ಯಾಲಿ, ವಿಚಾರಸಂಕಿರಣ, ಮುಂತಾದ ರೀತಿಯಲ್ಲಿ ಕಾರ್ಯಕ್ರಮಗಳು ನಡೆದವು.

ಮುಂದಿನ ದಿನಗಳಲ್ಲೂ ಭ್ರಷ್ಟಾಚಾರ ವಿರುದ್ಧ, ರಾಜ್ಯಾದ್ಯಾಂತ "ಭ್ರಷ್ಟಾಚಾರದ ವಿರುದ್ಧ ಯುವಜನ" ಎಂಬ ಯುವ ಜನಾಂದೋಲನವನ್ನು ನಡೆಸಲು ಡಿವೈಎಫ್ಐ ನಿರ್ಧರಿಸಿದೆ.

– ಬಿ.ರಾಜಶೇಖರಮೂರ್ತಿ

ಸಂಪಾದಕೀಯ

ಅಕ್ರಮಗಳ ಸಕ್ರಮಗೊಳಿಸುವ ಸರ್ಕಾರ

ಲೋಕಾಯುಕ್ತ ವರದಿಯ ಹಿನ್ನೆಲೆಯಲ್ಲಿ ಯಡಿಯೂರಪ್ಪನವರು ರಾಜೀನಾಮೆ ನೀಡಿದ ಹಿನ್ನೆಲೆಯಲ್ಲಿ ಅಧಿಕಾರ ವಹಿಸಿಕೊಂಡ ಸದಾನಂದಗೌಡರ ಸರ್ಕಾರ ಒಂದಿಷ್ಟಾದರೂ ಭಿನ್ನ ರೀತಿಯಲ್ಲಿ ಸಾಗಬಹುದೆಂಬ ಕೆಲವರ ಅಲ್ಪಸ್ವಲ್ಪ ನಿರೀಕ್ಷೆಗಳು ಹುಸಿ ಎಂಬುದು ಅದು ಸಾಗುತ್ತಿರುವ ವೈಖರಿಯಿಂದ ಸ್ಪಷ್ಟವಾಗುತ್ತಿದೆ. ರಾಜ್ಯದ ಜನತೆಗೆ ತನ್ನನ್ನು ಸಮರ್ಪಿಸಿಕೊಂಡು, ಉತ್ತಮ ಆಡಳಿತ ನೀಡುವ ನಿಜ ಕಳಕಳಿಯಿಲ್ಲದೇ ಕೇವಲ ಹಗರಣಗಳ ಆರೋಪ, ಕಾನೂನು ಕ್ರಮಗಳಿಂದ ತಪ್ಪಿಸಿಕೊಂಡರಷ್ಟೇ ಸಾಕು, ಅದಕ್ಕಾಗಿ ಆಡಳಿತ ಯಂತ್ರ ಬಳಸಬೇಕೆಂಬ ಸ್ವಾರ್ಥವಿರುವಾಗ ಇದಕ್ಕಿಂತ ಹೆಚ್ಚಿನದನ್ನು ನಿರೀಕ್ಷಿಸಲು ಸಾಧ್ಯವಿಲ್ಲ.

ಈಗಲೂ ಅಕ್ರಮ ಗಣಿಗಾರಿಕೆ ಸಂಬಂಧಿಸಿ ಲೋಕಾಯುಕ್ತರು ನೀಡಿರುವ ವರದಿಯನ್ನು ಒಪ್ಪುವ - ಬಿಡುವ ಬಗ್ಗೆ ತನ್ನ ನಿಲುವನ್ನೇ ಸರ್ಕಾರ ಪ್ರಕಟಿಸಿಲ್ಲ. ಬದಲಾಗಿ ಕಾಲಮಿತಿ ಇಲ್ಲದ ಅಧ್ಯಯನದ ಹೆಸರಿನಲ್ಲಿ ಅದನ್ನು ವಿಳಂಬ ಮಾಡಲಾಗುತ್ತಿದೆ. ಇದು ಅತ್ಯಂತ ಮಹತ್ವದ ವರದಿಯನ್ನು ಸಾರ್ವಜನಿಕರ ಗಮನದಿಂದ ದೂರ ತಳ್ಳುತ್ತಾ, ಕೊಲ್ಲುವ ಪರಿಯೇ ಆಗಿದೆ. ಈಗಾಗಲೇ ಹಿಂದಿನ ಮುಖ್ಯಮಂತ್ರಿ, ಸಚಿವೆರು ಅವರ ಕುಟುಂಬಗಳ ಸದಸ್ಯರು ನಡೆಸಿರುವ ಅಕ್ರಮ - ಹಗರಣಗಳು, ಭ್ರಷ್ಟಾಚಾರ ಕುರಿತ ಕೆಲವು ಪ್ರಕರಣಗಳು ತನಿಖೆ ಹಾಗೂ ಕಾನೂನುಕ್ರಮ ಅನುಸರಿಸುವ ಹಾದಿಯಲ್ಲಿವೆ. ಇದಕ್ಕೆ ಸರ್ಕಾರ ಸಂಪೂರ್ಣವಾದ ಸಹಕಾರ ನೀಡಲೇಬೇಕಿದೆ. ಆದರೆ ಅದರ ಬದಲು ತನಿಖೆಯನ್ನು ದುರ್ಬಲಗೊಳಿಸುವ, ಅದರ ಹಾದಿ ತಪ್ಪಿಸುವ ಕ್ರಮಕ್ಕೆ ಬಿಜೆಪಿ ಸರ್ಕಾರ ಹೊರಟಿದೆ.

ಅತ್ಯಂತ ಪ್ರಮುಖವಾಗಿ ದಕ್ಷತೆ, ನಿಷ್ಠುರತೆಯಿಂದ ಕರ್ತವ್ಯ ನಿರ್ವಹಿಸುತ್ತಿದ್ದ ಲೋಕಾಯುಕ್ತದ ಉನ್ನತ ಅಧಿಕಾರಿಗಳನ್ನು ಏಕಾಏಕಿ ವರ್ಗಾವಣೆ ಮಾಡಿ, ಕಳಂಕಿತ ಅಧಿಕಾರಿಗಳನ್ನು ನೇಮಿಸುತ್ತಿರುವುದು, ಲೋಕಾಯುಕ್ತವನ್ನು ದುರ್ಬಲಗೊಳಿಸುವ ಕ್ರಮವಾಗಿದೆ. ಹಿಂದೆ, ಲೋಕಾಯುಕ್ತರು ನೀಡುವ ವರದಿ ಮತ್ತು ಅದರ ಆಧಾರದಲ್ಲಿ ತನಿಖೆ, ಕ್ರಮ ವಹಿಸುವುದನ್ನು ಮನಗಂಡೇ ಯಡಿಯೂರಪ್ಪನವರು ದಕ್ಷ ಪೊಲೀಸ್ ಅಧಿಕಾರಿ ರೂಪಕುಮಾರ್ ದತ್ತರನ್ನು ದಿಢೀರನೇ ವರ್ಗಾಯಿಸಿದರು. ಈಗ ಕ್ರಮದ ಪ್ರಕ್ರಿಯೆ ನಡೆದಿರುವಾಗಲೇ ಹಿರಿಯ ಅನುಭವಿ ಪೊಲೀಸ್ ಅಧಿಕಾರಿ ಪ್ರಣವ್ ಮೊಹಂತಿಯವರನ್ನು ಲೋಕಾಯುಕ್ತರ ಗಮನಕ್ಕೂ ತಾರದೇ ಆ ಸ್ಥಾನದಿಂದ ಎತ್ತಂಗಡಿ ಮಾಡಿರುವುದು, ಯಡಿಯೂರ್ಪಪನವರ ಮೇಲೆ ಎಫ್‌ಐಆರ್ ದಾಖಲಿಸಿ, ಕಾನೂನು ಜಾರಿಗೊಳಿಸಿದವರೆಂಬ, ಗೋಳಿಸುವರೆಂಬ ಸೇಡಿನಿಂದಲೇ ಮತ್ತು ಬಚಾವಾಗುವ ದುರುದ್ದೇಶದಿಂದಲೇ ಭಾರಿ ರಾಜಕೀಯ ಕುಳಗಳು, ಅಧಿಕಾರಸ್ತರು, ಗಣಿ-ಭೂ ಮಾಫಿಯಾಗಳು ಭಾಗಿಯಾಗಿರುವ ಈ ಪ್ರಕರಣಗಳಲ್ಲಿ ಧೈರ್ಯದಿಂದ, ನಿಷ್ಠುರತೆಯಿಂದ ಕೆಲಸ ಮಾಡಬೇಕಾಗುತ್ತದೆ. ಈ ವರ್ಗಾವಣೆಗಳನ್ನು ಮಾಜಿ ಸಿ.ಎಂ. ಯಡಿಯೂರಪ್ಪನವರ ಅಣತಿಯಂತೆ ಮಾಡಿ ಗೌಡರು ಕೈಗೊಂಬೆಯಂತೆ ವರ್ತಿಸಿದ್ದಾರೆ. ಹೀಗಾಗಿ ಪ್ರಮಾಣ ಮಾಡಿದಂತೆ ಸಂವಿಧಾನ, ಕಾನೂನಿಗೆ ನಿಷ್ಠೆಯಿಂದರಬೇಕಾದ ಮುಖ್ಯಮಂತ್ರಿಗಳು ನಿಷ್ಠರಾಗಿರುವುದು ಯಡಿಯೂರಪ್ಪನವರಂಥಹ ಆರೋಪಿಗೆ. ಸ್ವತಂತ್ರವಾಗಿ ಕಾರ್ಯನಿರ್ವಹಿಸುವೆನೆಂಬ ಅವರ ಹೇಳಿಕೆ ಕೇವಲ ಬೊಗಳೆಯದ್ದಾಗಿದೆ.


ಹಾಗೆಯೇ ಆರೋಪಿತ ಸೋಮಣ್ಣನವರನ್ನು ಸಚಿವರನ್ನಾಗಿಸಿದ್ದು, ರೆಡ್ಡಿ ಕಂಪನಿಯನ್ನು ಸಚಿವರನ್ನಾಗಿಸಲು ನಡೆಸುತ್ತಿರುವ ಕಸರತ್ತುಗಳು ಈ ಸರ್ಕಾರದ ಅನೈತಿಕ ಹಾದಿ ಹಿಡಿದಿರುವುದರ ಪ್ರತೀಕವಾಗಿದೆ.

ಈಗಲೂ ಮುಖ್ಯಮಂತ್ರಿಗಳು ತಾವೇ ಹೇಳಿದಂತೆ ವಿಧಾನಸೌಧದಲ್ಲಿ ನಾಲ್ಕು ದಿನಗಳಾದರೂ ಕುಳಿತು ಆಡಳಿತ ನಡೆಸುತ್ತಿಲ್ಲ. ರಾಜ್ಯದ ಜನತೆಯ ಪ್ರಮುಖ ಪ್ರಶ್ನೆಗಳನ್ನು ಗುರುತಿಸಿ ಅವುಗಳ ಪರಿಹಾರಕ್ಕೆ ಪ್ರಯತ್ನಿಸುತ್ತಿಲ್ಲ. ಬದಲಾಗಿ ಯಡಿಯೂರ್ಪಪನವರಂತೆಯೇ ಮಠ, ಮಂದಿರಗಳಿಗೆ ಸುತ್ತುವುದು, ಸನ್ಮಾನ ಸಮಾರಂಭಗಳಲ್ಲಿ ಭಾಗಿಯಾಗುವುದೇ ತಮ್ಮ ಪರಮ ಆದ್ಯತೆಯ ಕೆಲಸವೆಂದು ಬಗೆದಿದ್ದಾರೆ. ಇದು ಆಡಳಿತದಲ್ಲಿನ ಅನಾಸಕ್ತಿ ಮತ್ತು ಬೇರೆಯದೇ ಅಜೆಂಡಾಗಳನ್ನು ತೋರಿಸುತ್ತವೆ. ಈಗಲೂ ಈ ಸಿ.ಎಂ. ರವರು ಮಠಾಧೀಶರಿಗೆ ನಿಷ್ಠರಾಗಿರುವುದಾಗಿ, ಅವರ ಮಾರ್ಗದರ್ಶನದಲ್ಲೇ ಮುಂದುವರಿಯುವುದಾಗಿ ಹೇಳುತ್ತಿರುವುದು ವಿಚಿತ್ರವೇ ಆಗಿದೆ. ಅಂದರೆ ಸಂವಿಧಾನ ಬದ್ಧ ಆಡಳಿತವನ್ನು ನಿರಾಕರಿಸಿದಂತೆಯೇ ಆಗಿದೆ. ಇಂತಹ ಸರ್ಕಾರವನ್ನು ಯಾವ ದಿಕ್ಕಿನಿಂದ ನೋಡಿದರೂ ಸಂವಿಧಾನ, ಕಾನೂನು, ಪ್ರಜಾಪ್ರಭುತ್ವವನ್ನು ಧಿಕ್ಕರಿಸುವ, ಇನ್ನಷ್ಟು ಅಕ್ರಮ, ಹಗರಣ, ಸಂಪತ್ತಿನ ಲೂಟಿಗೆ ತೊಡಗುವ ಅಕ್ರಮಗಳ ಸಕ್ರಮವಾಗಿಸುವ ಸರ್ಕಾರವೇ ಆಗಿದೆ. ಈ ಕೂಡಲೇ ಬಿಜೆಪಿ ಸರ್ಕಾರ ಪ್ರಜಾಪ್ರಭುತ್ವವನ್ನು ಬುಡಮೇಲು ಗೊಳಿಸುವ ಕೃತ್ಯಗಳನ್ನು ನಿಲ್ಲಿಸಬೇಕು. ಅಣ್ಣಾ ಹಜಾರೆ ಹೋರಾಟ ಬೆಂಬಲಿಸಿ ಭ್ರಷ್ಟಾಚಾರದ ವಿರುದ್ಧ ಹೋರಾಡುವುದಾಗಿ ಹೇಳುವ ಇಂತಹ ವಂಚಕ ಬಿಜೆಪಿ ಅಧಿಕಾರದಲ್ಲಿ ಇನ್ನೂ ಉಳಿಯಬೇಕೆ? □

ಬಿಜೆಪಿಯೊಳಗೆ 'ಆಪರೇಷನ್ ಕಮಲ' ಬ್ಲಾಕ್‌ಮೇಲ್?

ರೆಡ್ಡಿ ಅಂಡ್ ಕಂಪನಿಯ ಮೂವರನ್ನು ಸಚಿವರನ್ನಾಗಿಸಲು ನಡೆಸುತ್ತಿರುವ ಕಸರತ್ತಿಗೆ ಇನ್ನಷ್ಟು ವೇಗ ನೀಡಲಾಗುತ್ತಿದೆ. ಅಕ್ರಮ ಗಣಿಗಾರಿಕೆಯ ಬಗ್ಗೆ ಲೋಕಾಯುಕ್ತರ ವರದಿ ಆಧರಿಸಿ ಇವರನ್ನು ನೂತನ ಸಂಪುಟಕ್ಕೆ ತೆಗೆದುಕೊಳ್ಳಲಾಗಿಲ್ಲ ಎಂಬ ಅಂಶವನ್ನೇ ಮಸುಕಾಗಿಸಿ, ಸಾರ್ವಜನಿಕರ ನೆನಪಿನಿಂದ ಮರೆಸಿಬಿಡುವ ಷಡ್ಯಂತ್ರವೇ ಚಾಲ್ತಿಯಲ್ಲಿದೆ.

ಇದು ಆವೇಗ ಪಡೆದುಕೊಂಡಿದ್ದು ಬಳ್ಳಾರಿಗೆ ಗಡ್ಕರಿ ಬಂದು ಕಪ್ಪ ಪಡೆದು ದೆಹಲಿಗೆ ಹಿಂತಿರುಗಿದ ಮೇಲೆ. ಆ ಬಳಿಕ ಬಿಜೆಪಿ ಹೈಕಮಾಂಡ್ ಮತ್ತು ಕೆಲವು ಸಚಿವರ ಶಿಫಾರಸ್ಸುಗಳಿಗೆ ಚಾಲನೆ ಸಿಕ್ಕಿತು. ನಂತರ ಮುಖ್ಯಮಂತ್ರಿ ಸದಾನಂದ ಗೌಡರೇ ಈ ವಿಷಯಕ್ಕೆ ಇನ್ನಷ್ಟು ಜೀವ ತುಂಬಿಸುತ್ತಾ ವಿಷಯವನ್ನು ಹಸಿರಾಗಿಯೇ ಇಟ್ಟಿದ್ದಾರೆ.



ಗೊಂದಲ-ಕುತಂತ್ರ :

'ಸಂಪುಟಕ್ಕೆ ಸೇರಿಸಿಕೊಳ್ಳುವುದು, ಬಿಡುವುದು ಹೈಕಮಾಂಡ್‌ಗೆ ಬಿಟ್ಟ ವಿಚಾರ' ಎಂದು ಜಾಣತನದಿಂದ ಜಾರಿಕೊಂಡ, ಇನ್ನೊಂದು ಅರ್ಥದಲ್ಲಿ 'ಸಚಿವರನ್ನಾಗಿಸುವುದು, ಬಿಡುವುದು ಮುಖ್ಯಮಂತ್ರಿಗಳ ವಿವೇಚನೆಗೆ ಬಿಟ್ಟ ವಿಷಯ' ಎಂಬ ಹೈಕಮಾಂಡ್‌ನ ಬಹಿರಂಗ ಹೇಳಿಕೆಯನ್ನು ಗಟ್ಟಿಯಾಗಿ ಸಮರ್ಥಿಸಿಕೊಳ್ಳದ ಸದಾನಂದಗೌಡರು ಎಡಬಿಡಂಗಿ ಆಟಕ್ಕೆ ಇಳಿದರು. 'ಒಂದೊಮ್ಮೆ ಆ ಪ್ರಶ್ನೆಯೇ ಇಲ್ಲ' ವೆನ್ನುತ್ತಾ 'ಇನ್ನೊಮ್ಮೆ ಅವರನ್ನು ಸಚಿವರನ್ನಾಗಿಸಲು 'ಅಧ್ಯಯನ ಸಮಿತಿ'ಯನ್ನು ನೇಮಿಸಿರು ವುದಾಗಿಯೂ' ಹೇಳುತ್ತಿರುವುದು ಜನರನ್ನು ಗೊಂದಲದಲ್ಲಿ ಕೆಡವಿದೆ. ಕೊನೆಗೆ ಇಂತಹ ಕಳಂಕಿತರನ್ನು ಸಚಿವರನ್ನಾಗಿಸುವ ಲೆಕ್ಕಾಚಾರವೇ ಆಗಿದೆ. ಇಂತಹ ಹೀಗೆ ಗೊಂದಲ ಹುಟ್ಟಿಸುವ ವಿಷಯಾಂತರ ಕಲೆಯಲ್ಲಿ ಈ ಚೆಡ್ಡಿ ಪಡೆ ನಿಷ್ಣಾತರು. ಭ್ರಷ್ಟತೆ, ಆಮಿಷಗಳ ಅಂಶವೇ ಕಾಣೆಯಾಗಿ ಹೋದ ಇದು ಆಣೆ-ಪ್ರಮಾಣ ಪ್ರಸಂಗದಲ್ಲಿ ಇದನ್ನು ನೋಡಿಯಾಗಿದೆ. ಅಂತಹ ಹೇಳಿಕೆಗಳು ಸಹ ಜನರನ್ನು ನಿಧಾನಕ್ಕೆ ಒಪ್ಪಿಸುವಂತೆ ಮಾಡುವ ವ್ಯವಸ್ಥಿತ ಯತ್ನ.

ಲೋಕಾಯುಕ್ತ ವರದಿಯನ್ನನುಸರಿಸಿ ಯಡಿಯೂರಪ್ಪನವರ ಸಂಪುಟದ ರಾಜೀನಾಮೆ ಸಲ್ಲಿಸಿದ್ದು, ಕೇವಲ ಒಂದು ತಾಂತ್ರಿಕ ಕ್ರಮವಾಗಿತ್ತು. ಆರೋಪಿಯಾಗಿರುವ ವಿ.ಸೋಮಣ್ಣನವರನ್ನು ಮಂತ್ರಿ ಯನ್ನಾಗಿಸಿದ ಕ್ರಮವೇ ಲೋಕಾಯುಕ್ತ ಶಿಫಾರಸ್ಸುಗಳಿಗೆ, ಕಾನೂನು, ಶಿಷ್ಟಾಚಾರಗಳ ಮುಖಕ್ಕೆ ಹೊಡೆದಂತಾಗಿತ್ತು. ಇದರಿಂದ ರೆಡ್ಡಿಗಳೂ ಸಂಪುಟ ಸೇರುವುದಕ್ಕೆ ಬಾಗಿಲು ತೆರೆದಿತ್ತು. 'ಈಗಲೂ ಸೋಮಣ್ಣ ಕಳಂಕಿತರಲ್ಲ. ಆರೋಪವಿರುವುದು ಮಗನ ಮೇಲೆ' ಎಂದೇ ಬಿಜೆಪಿ ನಾಯಕರು ಹೇಳಿಕೊಂಡು ತಿರುಗುತ್ತಿದ್ದಾರೆ! ಹೀಗಾಗಿ ಕನಿಷ್ಠ ಕರುಣಾಕರರೆಡ್ಡಿ, ಶ್ರೀರಾಮುಲುರನ್ನು ಹೇಗಾದರೂ ಒಳಗೆ ತೂರಿಸಬೇಕೆಂಬುದು ಅವರ ಷಡ್ಯಂತ್ರ! ಲೋಕಾಯುಕ್ತರೇ ಸ್ಪಷ್ಟ ದಾಖಲೆಗಳೊಂದಿಗೆ ವರದಿ ನೀಡಿರುವಾಗ ಮತ್ತೊಂದು ಅಧ್ಯಯನ ಎಂಬುದು ಕೇವಲ ಕಾಲ ತಳ್ಳುವ, ಕಣ್ಣಿಗೆ ಮಣ್ಣೆರಚುವ ಕುತಂತ್ರ ಅಷ್ಟೇ. 'ರೆಡ್ಡಿ-ಕಂಪನಿಯನ್ನು ಸೇರಿಸಿಕೊಳ್ಳಬೇಡಿ' ಎಂದೇ ಸರ್ಕಾರದ ಅಡ್ವೋಕೇಟ್ ಜನರಲ್ ಸಲಹೆ ನೀಡಿದ್ದಾರೆ. ಆದಾಗ್ಯೂ ಬಿಜೆಪಿಯು ಗಣಿಗಳ್ಳ ಮಾಫಿಯಾವನ್ನು ರಕ್ಷಿಸಲು ಪ್ರಯತ್ನಿಸುತ್ತಿದೆ.

ಬ್ಲಾಕ್ ಮೇಲಿಂಗ್ ರೆಡ್ಡಿ ಕಂ. ಇನ್ನೊಂದೆಡೆ ರೆಡ್ಡಿ ಕಂಪನಿ ಬಿಜೆಪಿಯ ಮೇಲೆ ಒತ್ತಡದ ತಂತ್ರಕ್ಕೆ ಇಳಿದಿದೆ. ತಮ್ಮ ಆಪ್ತರನ್ನು ಒಳಗೊಂಡ ಒಟ್ಟು 15 ಜನ ಶಾಸಕರನ್ನು ಮಲೇಶಿಯಾ, ಇಂಡೋನೇಶಿಯಾಗಳಿಗೆ ಸಹೋದರ ಸೋಮ ಶೇಖರ ರೆಡ್ಡಿಯೊಂದಿಗೆ ಪ್ರವಾಸಕ್ಕೆ ಕಳಿಸಿ "ಡೀಲ್" ಆರಂಭಿಸಿದೆ. ಹೀಗೆ 'ವಿದೇಶಿ ಪ್ರವಾಸ' ರೆಸಾರ್ಟ್ ರಾಜಕಾರಣದಂತಹ 'ಆಪರೇಷನ್ ಕಮಲ' ನಡೆಸಿ ಇನ್ನೊಂದಿಷ್ಟು ಶಾಸಕರನ್ನು ಸೆಳೆದು 'ತಮ್ಮನ್ನು ಸೇರಿಸಿಕೊಳ್ಳದೇ ಹೋದರೆ ಸರ್ಕಾರಕ್ಕೆ

ಪುಟ 15ಕ್ಕೆ

ಕಾರ್ಟೂನ್ ಕಾರ್ನರ್



ಬಿಜೆಪಿಯೊಳಗೆ....

ಪುಟ 3 ರಿಂದ

ಬೆಂಬಲ ಹಿಂತೆಗೆದುಕೊಂಡು ಬೀಳಿಸುವ' ಬೆದರಿಕೆ, ಬ್ಲಾಕ್‌ಮೇಲ್‌ಗೆ ಇಳಿದಿದ್ದಾರೆ. ಸಿಎಂ ನ ಹಿಂದಿನ ಸೀಟಿನಲ್ಲಿ ಕುಳಿತು ಯಡಿಯೂರಪ್ಪನವರೇನೋ ಸರ್ಕಾರವನ್ನು ಚಲಾಯಿಸುತ್ತಾ ತಮ್ಮ ಮೇಲಿನ ಕೇಸ್, ಇತ್ಯಾದಿಗಳನ್ನು ಮುಚ್ಚಿ ಹಾಕಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಇದು ರೆಡ್ಡಿಗಳಿಗೂ 'ನೈತಿಕತೆ' ಯನ್ನು ಹೆಚ್ಚಿಸಿದೆ. ರೆಡ್ಡಿಗಳು ಮಂತ್ರಿಗಳಾಗಿ ಬಳ್ಳಾರಿ, ಚಿತ್ರದುರ್ಗ, ಗದಗ, ಮತ್ತಿತರೆ ಜಿಲ್ಲೆಗಳಲ್ಲಿ ತಮ್ಮ ದಂಧೆಯನ್ನು ರಕ್ಷಿಸಿಕೊಳ್ಳುವುದು, ಆರೋಪಗಳ ಸಾಕ್ಷಿಗಳನ್ನು ನಾಶಪಡಿಸುವುದು ಒಂದಾದರೆ ಮೇಲಾಗಿ ಇವರು ಸಚಿವರಾಗದೇ, 'ಪ್ರಭುತ್ವದ ರಕ್ಷಣೆಯಿಲ್ಲದೇ ಇದ್ದಲ್ಲಿ 'ಬುಲೆಟ್ ಪ್ರೂಫ್ ಕಾರ್' ಸಹ ಅವರನ್ನು ರಕ್ಷಿಸಲಾರದು ಎಂಬ ಆತಂಕ, ಆತುರವೂ ಇಲ್ಲಿದೆ. ಆದ್ದರಿಂದಲೇ 'ಬಿಜೆಪಿ ಅಧಿಕಾರಕ್ಕೆ ಬರುವಂತಾಗಲೂ, ಉಳಿದುಕೊಳ್ಳು ವಂತಾಗಲು ತಮ್ಮನ್ನು ಬಳಸಿ ಈಗ ಬಿಸಾಡಿದರೆ ಹೇಗೆ' ಎಂದು ಬಹಿರಂಗವಾಗಿ ರೆಡ್ಡಿ ಕಂಪನಿ ಪ್ರಶ್ನೆ ಮಾಡುತ್ತಿದೆ. ಸಚಿವ ಬಾಲಚಂದ್ರ ಜಾರಕಿಹೊಳಿ, ಜಗದೀಶ್‌ಶೆಟ್ಟರ್‌ರವರು ಹೀಗೆ ಕೇಳುತ್ತಿದ್ದಾರೆ. ಇದಕ್ಕೆ ಉತ್ತರಿಸಲು ಬಿಜೆಪಿಯ ಅಡಿಯಿಂದ ಮುಡಿಯವರೆಗಿನ ತಿಂದು ತೇಗಿರುವ ನಾಯಕರಿಗೆ ಮಾತುಗಳೆಲ್ಲಿ? ಮನಸ್ಸೆಲ್ಲಿ? ಆದ್ದರಿಂವಲೇ ಇಂತಹ ಮಾಫಿಯಾಕ್ಕೆ ಮಣೆ ಹಾಕಲು ಹಾತೊರೆಯುವುದು. ಈಗಲೂ ಬಳ್ಳಾರಿ ರಾಯಚೂರು ಉಸ್ತುವಾರಿಯನ್ನು ಅಣ್ಣಾ ಜಾರಕಿಹೊಳಿಗೆ ನೀಡಲಾಗಿದೆ. ಅಂದರೆ ರೆಡ್ಡಿಗಳನ್ನು ಮನವೊಲಿಸಲು ಒಂದೊಂದೇ ಮೆಟ್ಟಿಲನ್ನು ಗಡರು ಹತ್ತುತ್ತಿದ್ದಾರೆ.

★

ನ್ಯಾಯಾಲಯದ ಬಾಗಿಲಲಿ, ಜಾಮೀನಿಗೆ ಕಾದವರು...

ಈ ವಾರ ನ್ಯಾಯಾಂಗ ಸುದ್ದಿಯಲ್ಲಿದೆ. ಮಹಾನ್ ನಾಯಕರು ಜಾಮೀನಿನ ಅರ್ಜಿ ಹಿಡಿದು ಹೈಕೋರ್ಟ್‌ನಲ್ಲಿ ನಿಂತಿದ್ದೇ ಒಂದು ವಿಶೇಷ ಸುದ್ದಿ. ಈಗಾಗಲೇ ಈ ಶುಕ್ರವಾರಕ್ಕೆ 16 ದಿನಗಳನ್ನು 'ಸೆಂಟ್ರಲ್ ಜೈಲ್'ನಲ್ಲಿ ಕಳೆದ ಕೆಐಎಡಿಬಿ ಹಗರಣದ ಕುಖ್ಯಾತ ಮಾಜಿ ಸಚಿವ ಕಟ್ಟಾಸುಬ್ರಮಣ್ಯನಾಯ್ಡು. ಅವರ ಮಗ ಜಗದೀಶ್‌ರ ಜಾಮೀನಿನ ಮನವಿಯನ್ನು ನ್ಯಾಯಾಲಯ ತಿರಸ್ಕರಿಸಿತು. ಆರೋಗ್ಯ ಹದಗೆಟ್ಟಿದೆ ಎಂಬ ಸಬೂಬನ್ನು ವೈದ್ಯರೂ, ನ್ಯಾಯಾಲಯವೂ ಒಪ್ಪಲಿಲ್ಲ. ಅನಾರೋಗ್ಯದ ಕಾರಣ ಕೊಟ್ಟು ಹೈಟೆಕ್ ಆಸ್ಪತ್ರೆಗಳಲ್ಲಿ ಹಾಲಪ್ಪನಂತೆ ವಿಶ್ರಾಂತಿ ಪಡೆಯುವುದು, ಇಂತಹ ಸೂಪರ್ ಖೈದಿಗಳ ಪದ್ಧತಿ. ಆದರೆ ಸೆಪ್ಟೆಂಬರ್ 5ರವರೆಗೂ ಜೈಲಿನಲ್ಲೇ ಇರಬೇಕಾದ ಇವರ ಮೇಲೆ ಸಾಕ್ಷಿ ನಾಶಪಡಿಸುವ ಅನುಮಾನವಿರುವುದರಿಂದ ನ್ಯಾಯಾಲಯ ಅವಧಿ ಮುಂದುವರೆಸುವ ಸಾಧ್ಯತೆಯೂ ಇದೆ.

ಈಗ ಮುಂದಿನ ಸರದಿ ಡಾ|| ಯಡಿಯೂರಪ್ಪನವರದ್ದು, ಭದ್ರಾ ಮೇಲ್ದಂಡೆ ಯೋಜನೆ ಕಾಮಗಾರಿ ಪ್ರಕ್ರಿಯೆಯಲ್ಲಿನ ಅವ್ಯವಹಾರದ ಕ್ರಿಮಿನಲ್ ಮೊಕದ್ದಮೆಯಲ್ಲಿ ಈಗ ಲೋಕಾಯುಕ್ತ ಪೋಲೀಸರು ಎಫ್.ಐ.ಆರ್. ಹಾಕಿರುವುದರಿಂದ, ಅವರು ಆತಂಕಿಯಾಗಿದ್ದಾರೆ. ಜಿಂದಾಲ್ ಕಂಪನಿಯಿಂದ ದೇಣಿಗೆ ಹೆಸರಿನಲ್ಲಿ ಪಡೆದ ಲಂಚದ ಪ್ರಕರಣದಲ್ಲಿ ಅವರ ಮಗನೂ ಆರೋಪಿಯಾಗಿದ್ದಾರೆ. ಹೀಗೆ ಅಪ್ಪ-ನಂತರ ಮಗ ತಮ್ಮ ಕಾರಾಸ್ಥಾನವನ್ನು ಕೇಂದ್ರ ಕಾರಾಗೃಹಕ್ಕೆ ವರ್ಗಾಯಿಸಿ ಕೊಳ್ಳಬೇಕಾದ ಸ್ಥಿತಿಯಿದೆ. ಆದ್ದರಿಂದಲೇ ನಿರೀಕ್ಷಣಾ ಜಾಮೀನಿಗೆ ಅರ್ಜಿ ಹಾಕಿ, ಕಾದಿದ್ದಾರೆ. ಈ ಮೊದಲು ಲೋಕಾಯುಕ್ತರ ವಿಶೇಷ ನ್ಯಾಯಾಲಯಕ್ಕೆ ವೈಯಕ್ತಿಕ ಹಾಜರಿಯಿಂದ ವಿನಾಯ್ತಿ ಕೋರಿ ಸಲ್ಲಿಸಿದ್ದ ಮನವಿ ತನಿಖೆಯ ಪ್ರಕ್ರಿಯೆಗೆ ತಡೆಯನ್ನು ಹೈಕೋರ್ಟ್ ತಿರಸ್ಕರಿಸಿದೆ. ಇಂತಹ ಸ್ಥಿತಿಯಲ್ಲಿಯೇ ಡಾ|| ಬಿ.ಎಸ್.ಯಡಿ ಯೂರಪ್ಪ 50 ಜನ ವಕೀಲರಿಗೆ ಔತಣ ಕೂಟ ಏರ್ಪಡಿಸಿ ಪಾರಾಗುವ ಬಗೆಯನ್ನು ಚರ್ಚಿಸಿದ್ದು, ನಂತರ ಬಂಧನದ ಬಹುನಿರೀಕ್ಷೆ ಯಲ್ಲಿ ಆಸ್ಪತ್ರೆ ಸೇರಿದ್ದು, ಮುಖ್ಯಮಂತ್ರಿಯೊಂದಿಗೆ ಏಕಾಂತ ಸಮಾಲೋಚನೆ ನಡೆಸಿದ್ದು, (ಆಸ್ಪತ್ರೆಯೆಂದರೆ ಸುದ್ದಿಯಾಗುವುದಿಲ್ಲ) ಮಂತ್ರಾಲಯದ ರಾಯರ ದರ್ಶನ ಪಡೆದದ್ದು, ಜನೋಪಕಾರಿ(ಮಾಜಿ) ಮುಖ್ಯಮಂತ್ರಿಗೆ ಪುರೋಹಿತರು ಆಶೀರ್ವದಿಸಿದ್ದು!

ಹಾಗೆಯೇ ಬಿಜೆಪಿ ಸರ್ಕಾರದ ಅಕ್ರಮ, ಹಗರಣಗಳನ್ನು ಬಯಲಿಗೆಳೆದ ಇನ್ನೊಬ್ಬ ಮಾಜಿ ಸಿ.ಎಂ. ಹೆಚ್.ಡಿ.ಕುಮಾರಸ್ವಾಮಿ ಅವರ ಪತ್ನಿ ಅನಿತಾಕ್ಕರವರ ಮೇಲೂ ಮೊಕದ್ದಮೆ ದಾಖಲಾಗುವ ಪ್ರಕ್ರಿಯೆಗೆ ಚಾಲನೆ ದೊರೆತಿದೆ. ನಿಯಮ ಮೀರಿ ಜಂತಕಲ್ ಗಣಿ ಕಂಪನಿಗೆ ಪರವಾನಗಿ ನವೀಕರಿಸಿದ್ದಾರೆ ಎಂಬ ಆರೋಪ ವಿಶ್ವಭಾರತಿ ಗೃಹ ನಿರ್ಮಾಣ ಸೊಸೈಟಿಗೆ ಅನುಕೂಲ ಮಾಡಿ ಕೊಟ್ಟಿದ್ದರಿಂದ ಪತ್ನಿ ಅನಿತಾರವರಿಗೆ ಒಂದು ಬೆಲೆಬಾಳುವ ನಿವೇಶನ ನೀಡಲಾಗಿದೆ ಎಂಬ ಆರೋಪಗಳ ಹಿನ್ನೆಲೆಯಲ್ಲಿ ಎಫ್‌ಐಆರ್ ಹಾಕಲು ಲೋಕಾಯುಕ್ತ ಪೋಲೀಸರು ಕ್ರಮ ವಹಿಸುತ್ತಿದ್ದಾರೆ. ಆದ್ದರಿಂದ ಈ ದಂಪತಿಗಳು ಸಹ ಬಂಧನ ಕಾರಾಗೃಹ ವಾಸದಿಂದ ತಪ್ಪಿಸಿಕೊಳ್ಳಲು ನಿರೀಕ್ಷಣಾ ಜಾಮೀನಿಗೆ ಮೊರೆ ಹೋಗಿದ್ದಾರೆ.

ಅಂತೂ ಸದ್ಯ ನ್ಯಾಯಾಲಯ, ಕಾನೂನು ಕಾರ್ಯಾಚರಣೆಯಲ್ಲಿ ನಿಷ್ಠುರ ನಿಷ್ಪಕ್ಷಪಾತದಿಂದ ಕಾನೂನು ಜಾರಿಯಾಗಲೆಂಬ ಜನತೆ ನಿರೀಕ್ಷೆ ಯಲ್ಲಿ.

★

ರಾಷ್ಟ್ರಪತಿಗಳಿಗೆ ಅವಹೇಳನ: ಹಿಂದುತ್ವ ಅಜೆಂಡಾ ....

'ಜಾನುವಾರು ಹತ್ಯೆ ನಿಷೇಧ ಕಾಯ್ದೆಗೆ ಅಂಕಿತ ಹಾಕದ ರಾಷ್ಟ್ರಪತಿಗಳು ರಾಜ್ಯವನ್ನು ಅವಹೇಳನ ಮಾಡಿದ್ದಾರೆ' ಎಂದು ಪುಸ್ತಕ ಬಿಡುಗಡೆ ಮಾಡುತ್ತಾ ಸಂಘ ಪರಿವಾರಗಳ ಸಮಾರಂಭ ವೊಂದರಲ್ಲಿ ಹೇಳುವ ಮೂಲಕ ಸದಾನಂದ ಗೌಡರು 'ಕೇಶವ ಶಿಲ್ಪ'ದ ಕೋಮು ವಾದಿ ಅಜೆಂಡಾಕ್ಕೆ ಬದ್ಧವಾಗಿರುವುದನ್ನು ಪ್ರಕಟಿಸಿದ್ದಾರೆ. ಆ ಕಾಯ್ದೆ ಕೃಷಿಕರಿಗೆ ಮಾರಕವಾಗುವುದಲ್ಲದೇ ಅಲ್ಪಸಂಖ್ಯಾತರನ್ನು ದಮನಿಸುವ ಗುರಿ ಇರಿಸಿಕೊಂಡಿದೆ.ಲಕ್ಷಾಂತರ ಜನರ ಕೆಲಸವನ್ನು ಕಿತ್ತುಕೊಳ್ಳಲಿದೆ. ಮತೀಯ ವಿಭಜನೆ ವಿದ್ವೇಷ ಹುಟ್ಟು ಹಾಕಲಿದೆ. ಆಹಾರದ ಹಕ್ಕಿನ ಮೇಲೆ ಧಾಳಿ ನಡೆಸಿದ ಅಂಶಗಳು ಸಂವಿಧಾನದ ಈ ಮೂಲ ಆಶಯಗಳಿಗೆ ಹೇಗೆ ವಿರುದ್ಧವಾಗಿವೆ ಯೆಂದೂ, ಆದ್ದರಿಂದ ಅದನ್ನು ತಿರಸ್ಕರಿಸ ಬೇಕೆಂಬ ಪ್ರಬಲ ಪ್ರತಿರೋಧದ ಹಿನ್ನೆಲೆಯಲ್ಲಿ ಎಲ್ಲಾ ಮುಗ್ಗುಲಗಳಿಂದಲೂ ಮಸೂದೆಯನ್ನು ಪರಿಶೀಲಿಸಿದ ರಾಜ್ಯಪಾಲರು, ತಮ್ಮ ಟಿಪ್ಪಣಿಗಳೊಂದಿಗೆ, ಅಂತಿಮ ನಿರ್ಧಾರಕ್ಕೆ ರಾಷ್ಟ್ರಪತಿಗಳಿಗೆ ಕಳಿಸಿದ್ದರು. ಇದು ಸೂಕ್ತವಾದ ಕ್ರಮವಾಗಿತ್ತು.


ಆದರೆ ಪುನಃ ಸಂಘಪರಿವಾರ-ಸರ್ಕಾರ ಬಿಜೆಪಿಗಳು ಈ ಪ್ರಶ್ನೆಯ ನೆತ್ತಿದ್ದಾರೆ. ಈಗಾಗಲೇ ಭ್ರಷ್ಟತೆ, ದುರಾಡಳಿತದಿಂದ ಕುಖ್ಯಾತಗೊಂಡಿರುವ ಬಿಜೆಪಿಯು ಹೆಚ್ಚುತ್ತಿರುವ ಜನರ ಆಕ್ರೋಶ' ಗಮನವನ್ನು ಬೇರೆಡೆಗೆ ತಿರುಗಿಸುವ ಕೋಮುವಾದಿ ಕುತಂತ್ರವನ್ನು ಬಿಡುವುದಿಲ್ಲ ಎಂದು ಅದು ಮನರುಚ್ಚರಿಸಿದೆ. ಇದನ್ನು ಇನ್ನಷ್ಟು ಬೆಳೆಸಬಹುದಾದ ಸಾಧ್ಯತೆಗಳಿವೆ.

ಇಷ್ಟೆಲ್ಲಾ ಟೀಕೆ 'ಜನತೆಯ ಪ್ರಬಲ ವಿರೋಧ, ರಾಜ್ಯಪಾಲರ ಟಿಪ್ಪಣಿಯೊಂದಿಗೆ ರಾಷ್ಟ್ರಪತಿಗಳ ಮುಂದಿನ ಇತ್ಯರ್ಥಕ್ಕೆ ಕಾದಿರುವಾಗ ಬೇಜವಾಬ್ದಾರಿಯಿಂದ ಮುಖ್ಯಮಂತ್ರಿ ಸದಾನಂದಗೌಡರು ಟೀಕಿಸುತ್ತಿದ್ದಾರೆ. ಇದು ಸಂವಿಧಾನಾತ್ಮಕ ಉನ್ನತ ಸ್ಥಾನದಲ್ಲಿರುವ ರಾಷ್ಟ್ರಪತಿಗಳನ್ನೇ ಅವಹೇಳನ, ಅವಮಾನ ಮಾಡಿದ್ದಾಗಿದೆ. ಇದು ಮುಖ್ಯಮಂತ್ರಿಗೆ ಸಲ್ಲದ ನಡತೆ. ಈಗ ಅವರು ಬಾಯಬ್ಬರಿಸುವ ಸದಾ ವಾಚಾಳಿ ಸಂಸದರು ಅಲ್ಲ ಎಂಬುದನ್ನು ನೆನಪಿಡ ಬೇಕು. ಇದು ಖಂಡನೀಯ. ಇಂತಹ ಕೋಮುವಾದಿ ದುರುದ್ದೇಶದ ಪ್ರಯತ್ನ ಗಳನ್ನು ಹಿಮ್ಮೆಟ್ಟಿಸಬೇಕಿದೆ.

ಅಗಲಿದ ಪ್ರಖ್ಯಾತ ಇತಿಹಾಸಕಾರ ಪ್ರೊ: ಆರ್.ಎಸ್. ಶರ್ಮಾ

ಪ್ರಖ್ಯಾತ ಇತಿಹಾಸಕಾರ ಪ್ರೊ: ರಾಮಶರಣ್ ಶರ್ಮಾರವರು ಇನ್ನಿಲ್ಲವಾಗಿದ್ದಾರೆ. ಭಾರತದ ಪ್ರಾಚೀನ ಮಧ್ಯಯುಗದ ಇತಿಹಾಸ ಒಳಗೊಂಡು ವಿಭಿನ್ನ ವೈಜ್ಞಾನಿಕ ವಿಶ್ಲೇಷಣೆ ಗಳಿಂದ ಇತಿಹಾಸಕ್ಕೆ ಅತ್ಯಮೂಲ್ಯ ಜೀವದುಸಿರು ತುಂಬಿದ್ದ ಅವರು ಇದೇ ಆಗಸ್ಟ್ 19, 2011ರಂದು ಪಾಟ್ನಾದಲ್ಲಿ ಕೊನೆಯುಸಿರೆಳೆದರು. ಅವರು ಜನಿಸಿದ್ದು ಸೆಪ್ಟೆಂಬರ್ 1, 1920ರಲ್ಲಿ. ಅಂದರೆ ಪೂರೈಸಿದ್ದು, 91 ವರ್ಷಗಳು.

1940ರಲ್ಲಿ ಇತಿಹಾಸದ ಅಧ್ಯಯನ, ಶೋಧನೆಗೆ ತೊಡಗಿಸಿಕೊಂಡ ಅವರು ಪ್ರಾಚೀನ, ಮಧ್ಯಯುಗೀನ ಭಾರತದ ಇತಿಹಾಸದಲ್ಲಿ ಸಂಶೋಧನೆಯಲ್ಲಿ ಮಹಾ ಮೇರು. ಈ ಮಾರ್ಕ್ಸ್‌ವಾದಿ. ಇತಿಹಾಸ ವನ್ನು ಸಾಮಾಜಿಕ-ಆರ್ಥಿಕ ವಿಭಿನ್ನ ನೆಲೆಯಲ್ಲಿ ವಿಶ್ಲೇಷಿಸಿದವರು, ಜಾತಿ ವ್ಯವಸ್ಥೆ ಬಗ್ಗೆ, 'ಪ್ರಾಚೀನ ಭಾರತದಲ್ಲಿ ಜಾತಿ ವ್ಯವಸ್ಥೆಯ ಆರ್ಥಿಕ ಆಯಾಮ' ಗ್ರಂಥ ಬರೆದದ್ದು 1957ರಲ್ಲಿ, ಪ್ರಾಚೀನ ಭಾರತದಲ್ಲಿ ಶೂದ್ರರು 1958ರಲ್ಲಿ, 1959ರಲ್ಲಿ ಪ್ರಾಚೀನ ಭಾರತ ಆರ್ಥಿಕ ಮುಗ್ಗಲುಗಳು ಇವು ವಿದ್ವತ್ ಲೋಕದ ಗಮನಸೆಳೆದ ಕೃತಿಗಳಲ್ಲಿ ಕೆಲವು, 1965ರಲ್ಲಿ ಭಾರತದ ಉಳಿಗಮಾನ್ಯ ಪದ್ಧತಿ (300-1200), 1989ರಲ್ಲಿ ಭಾರತದಲ್ಲಿ ಪ್ರಭುತ್ವದ ಉಗಮ 2005ರಲ್ಲಿ ಇನ್ನಿತರ ಮಹತ್ವದ ಕೃತಿಗಳು.



ಪ್ರೊ|| ಶರ್ಮಾರವರು ವೈಜ್ಞಾನಿಕ ದೃಷ್ಟಿಕೋನ, ಜಾತ್ಯಾತೀತತೆಗೆ ಕಟ್ಟಿಬದ್ಧ ರಾದವರು. ಆ ಮೌಲ್ಯಗಳನ್ನು ಸದಾ ಎತ್ತಿ ಹಿಡಿದವರು. 'ಅಯೋಧ್ಯ ಚಳುವಳಿ' ಆರಂಭ ಗೊಂಡಾಗ 'ಕೋಮುವಾದಿ ಇತಿಹಾಸ'. ರಾಮನ 'ಅಯೋಧ್ಯೆ' ಪುಸ್ತಕದಲ್ಲಿ ನಿಜ ಇತಿಹಾಸ ಅನಾವರಣಗೊಳಿಸಿದರು. ಸಂಘ ಪರಿವಾರದ ಇತಿಹಾಸ ವಿಕೃತ ಗೊಳಿಸುವುದರ ವಿರುದ್ಧ ಅವರದ್ದು ಗಟ್ಟಿದನಿ. ಈ ಕಾರಣದಿಂದ ಕೋಮುವಾದಿಗಳ ಆಕ್ರಮಣವನ್ನು ಎದುರಿಸಬೇಕಾಯಿತು.

1972-77ರವರೆಗೆ ಭಾರತೀಯ ಇತಿಹಾಸ ಅನುಸಂಧಾನ ಪರಿಷತ್ (ICHR)ನ ನಿರ್ದೇಶಕರಾಗಿ, ಭಾರತದ ಇತಿಹಾಸ ಮಂಡಳಿಯ ಕಾರ್ಯದರ್ಶಿಯಾಗಿಯೂ ಗಣನೀಯ ಕೊಡುಗೆ ನೀಡಿದ್ದಾರೆ. ಅವರ ಸ್ನೇಹಮಯ, ಸರಳ ಸಜ್ಜನಿಕೆ ವಿದ್ವತ್ ಅಪಾರ ಗೆಳೆಯರನ್ನು ಸೆಳೆಯಿತು. ಒಂದು ಅರ್ಥಪೂರ್ಣ ತಂಡವೇ ಸೃಷ್ಟಿಯಾಯಿತು. ಅವರು ದೆಹಲಿಯ 'ಸಹಮತ್'ನ ಕ್ರಿಯಾಶೀಲ ಗಣ್ಯರಲ್ಲಿ ಒಬ್ಬರಾದರು, ಮಾರ್ಗದರ್ಶನ ನೀಡಿದರು. ಅವರ ಅಗಲಿಕೆ ಭಾರತದ ಜನತೆಗೆ ದುಡಿವ ಜನ ಕೋಟಿಗೆ ಇತಿಹಾಸಕ್ಕೆ ತುಂಬಲಾರದ ನಷ್ಟವಾಗಿದೆ ಅವರಿಗೆ ಶ್ರದ್ಧಾಂಜಲಿ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಭ್ರಷ್ಟಾಚಾರ ಈಗ ರಾಷ್ಟ್ರವ್ಯಾಪಿ ಚರ್ಚೆಯ ವಿಷಯ. ಆದರೆ ಭ್ರಷ್ಟಾಚಾರದ ವಿಷಯದಲ್ಲಿ ಜನರ ನಡುವೆ ಚರ್ಚೆಯಾಗಬೇಕಾದ ಎಷ್ಟೋ ವಿಷಯಗಳನ್ನು ಮರೆಮಾಚಿ ಕೆಲವೊಂದು ವಿಷಯಗಳನ್ನಷ್ಟೆ ಹಿಡಿದು ಕೊಂಡು ಹಿಂಜಿ ಹಿಂಜಿ ಒಂದು ಬಗೆಯ ಉನ್ಮಾದದ ಸ್ಥಿತಿಯನ್ನು ಸೃಷ್ಟಿಸುವ ಪ್ರಯತ್ನಗಳು ನಡೆಯುತ್ತಿವೆ. ಇದು ಕೇವಲ ಆಕಸ್ಮಿಕವಲ್ಲ. ಇದೊಂದು ವ್ಯವಸ್ಥಿತ ಯೋಜಿತ ಕುತಂತ್ರವಾಗಿದೆ. ಇಂತಹ ಸನ್ನಿವೇಶದಲ್ಲಿ ಯುಪಿಎಯೇತರ, ಬಿಜೆಪಿಯೇತರ ಒಂಭತ್ತು ವಿರೋಧ ಪಕ್ಷಗಳು ಸೇರಿ ಭ್ರಷ್ಟಾಚಾರ ನಿಯಂತ್ರಣದ ಪ್ರಶ್ನೆಯಲ್ಲಿ ಆಗಬೇಕಾದುದೇನು, ಲೋಕಪಾಲ್ ನಿಜಕ್ಕೂ ಹೇಗಿರಬೇಕು ಎಂದು ಸರ್ಕಾರವನ್ನು ಒತ್ತಾಯಿಸುವ ನಿಟ್ಟಿನಲ್ಲಿ ಆಗಸ್ಟ್ 23 ರಂದು ರಾಷ್ಟ್ರವ್ಯಾಪಿಯಾಗಿ ಪ್ರತಿಭಟನೆ, ರ್‍ಯಾಲಿಗಳು ನಡೆದಿವೆ. ಬೆಂಗಳೂರಿನಲ್ಲಿ ಸಹ ಈ ಪ್ರತಿಭಟನೆ ಮುಖ್ಯವಾಗಿ ಜೆಡಿ(ಎಸ್),ಸಿಪಿಐ(ಎಂ), ಸಿಪಿಐ ಪಕ್ಷಗಳ ನೇತೃತ್ವದಲ್ಲಿ ನಡೆಯಿತು.

ಬಂಡವಾಳಗಾರರ, ಮಾಧ್ಯಮಗಳ ಭ್ರಷ್ಟಾಚಾರ ಮರೆಮಾಚುವ ಪಿತೂರಿ ಹಿಮ್ಮೆಟ್ಟಿಸಿ

ಬೆಂಗಳೂರಿನಲ್ಲಿ ಜೆಡಿ(ಎಸ್), ಸಿಪಿಐ(ಎಂ), ಸಿಪಿಐಗಳ ಜಂಟಿ ರ್‍ಯಾಲಿಯಲ್ಲಿ ಕರೆ

ಅದು ಬೆಂಗಳೂರು ನಗರದ ಆನಂದ ರಾವ್ ವೃತ್ತದ ಸಮೀಪವಿರುವ ಗಾಂಧಿ ಪ್ರತಿಮೆಯ ಮುಂಭಾಗ. ಅಲ್ಲಿ ಜೆಡಿ(ಎಸ್)ನ ಹಸಿರು ಬಾವುಟ, ಎಡ ಪಕ್ಷಗಳ ಕೆಂಬಾವುಟಗಳು ಉತ್ಸಾಹದಲ್ಲಿ ಹಾರುತ್ತಿದ್ದವು. ಜೆಡಿ(ಎಸ್)ನ ಸಾಂಸ್ಕೃತಿಕ ತಂಡವು ಹಾಡಿದ ಹೋರಾಟದ ಹಾಡು ಮಾರ್ಧನಿಸುತ್ತಿತ್ತು. ಅದು ಭ್ರಷ್ಟಾಚಾರದ ವಿರುದ್ಧದ ಮಾತುಗಳು ಕೇಳಿ ಬಂದರೂ ಆ ಮಾತುಗಳು, ಪಕ್ಕದ ಸ್ವಾತಂತ್ರ್ಯ ಉದ್ಯಾನವನದಲ್ಲಿ ಕೇಳಿ ಬಂದ ಮಾತುಗಳಿಗಿಂತ ಭಿನ್ನವಾಗಿದ್ದವು.

ಜೆಡಿಎಸ್ ವಕ್ತಾರ ವೈ.ಎಸ್.ವಿ. ದತ್ತಾರವರು ಕಾರ್ಯಕ್ರಮ ನಿರೂಪಿಸಿದರು. ಮೊದಲಿಗೆ ಮಾತನಾಡಿದ ಮಾಜಿ ಮಂತ್ರಿಗಳೂ ಜೆಡಿ(ಎಸ್) ಪಕ್ಷದ ಕಾರ್ಯಾಧ್ಯಕ್ಷರೂ ಆದ ಪಿಜಿಆರ್ ಸಿಂಧ್ಯ ಮಾತನಾಡಿ ದೇಶಕ್ಕೆ ಸ್ವಾತಂತ್ರ್ಯ ಬಂದು 64 ವರ್ಷಗಳು ಆಗಿದ್ದರೂ ಒಂದು ಸಮರ್ಥ ಲೋಕಪಾಲ ಜಾರಿಗೆ ಬರದಿರುವುದಕ್ಕೆ ಮುಖ್ಯವಾಗಿ ಕಾಂಗ್ರೆಸ್ ಪಕ್ಷವೇ ಹೊಣೆ. ಸಮರ್ಥ ಲೋಕಪಾಲ್ ಬೇಕು, ಆದರೆ ಅದರಿಂದ ಭ್ರಷ್ಟಾಚಾರ ಸಂಪೂರ್ಣ ನಿವಾರಣೆಯಾಗುವುದಿಲ್ಲ ಎಂದರು.

ಕೋಮುವಾದಿ ಶಕ್ತಿಗಳ ಕುರಿತು ಎಚ್ಚರ ಅಗತ್ಯ– ಪಿಜಿಆರ್ ಸಿಂಧ್ಯ

ಈಗಿನ ಅಣ್ಣಾ ಹಜಾರೆಯವರ ಹೋರಾಟದಲ್ಲಿ ಬೈಲ್ ಮೇಲೆ ಹೊರಗಿರುವವರು, ಜೈಲಿನ ಒಳಗಿಬೇಕಾದವರು ಎಲ್ಲರೂ ತೋರಿಕೊಂಡಿದ್ದಾರೆ. ಕೋಮುವಾದಿ ಶಕ್ತಿಗಳು ಸನ್ನಿವೇಶವನ್ನು ದುರುಪಯೋಗ ಮಾಡಿಕೊಳ್ಳಲು ಪ್ರಯತ್ನಿಸುತ್ತಿವೆ. ಈ ಬಗ್ಗೆ ಎಚ್ಚರ ವಹಿಸಬೇಕು ಎಂದೂ ಸಿಂಧ್ಯರವರು ಎಚ್ಚರಿಸಿದರು.



'ರಾಜಕೀಯೇತರ ರಾಜಕೀಯ' ಒಪ್ಪಲಾಗದು– ವಿಜೆಕೆ ನಾಯರ್

ಅಣ್ಣಾ ಹಜಾರೆಯವರ ಹೋರಾಟದಲ್ಲಿ 'ರಾಜಕೀಯೇತರ' ರಾಜಕೀಯ ಮಾಡಲು ಪ್ರಯತ್ನಿಸಲಾಗುತ್ತಿದೆ. ಅದು ನಮಗೆ ಒಪ್ಪಿಗೆ ಇಲ್ಲ. ಭ್ರಷ್ಟಾಚಾರದ ವಿರುದ್ಧದ ಹೋರಾಟದ ಹೆಸರಿನಲ್ಲಿ ಸಂಸತ್ತಿನ ಮೇಲ್ಮೆಗೆ ಚ್ಯುತಿ ತರುವ ಕೆಲಸ ಆಗಬಾರದು ಎಂದು ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ವಿಜೆಕೆ ನಾಯರ್ ಅವರು ಹೇಳಿದರು. ಸಂವಿಧಾನದ 105 ನೇ ವಿಧಿಗೆ ಸೂಕ್ತವಾದ ತಿದ್ದುಪಡಿ ತರಬೇಕು. ನ್ಯಾಯಾಂಗದಲ್ಲಿನ ಭ್ರಷ್ಟಾಚಾರವನ್ನು ನಿಯಂತ್ರಿಸಲು ಪ್ರತ್ಯೇಕವಾಗಿ ನ್ಯಾಯಾಂಗ ಉತ್ತರಾಧಿಕಾರತ್ವ ಮಸೂದೆಯನ್ನು ತರಬೇಕು ಎಂದೂ ವಿಜೆಕೆ ನಾಯರ್ ಹೇಳಿದರು. ಬಳ್ಳಾರಿಯಲ್ಲಿ ನಡೆದದ್ದು ಖನಿಜ ಸಂಪತ್ತಿನ ಲೂಟಿ. ಖಾಸಗಿ ಗಣಿಗಾರಿಕೆಗೆ ಅವಕಾಶವಿರುವುದರಿಂದಲೇ ಇಂತಹ ಲೂಟಿ ನಡೆದದದ್ದು ಎಂದೂ ನಾಯರ್‌ವರು ಹೇಳಿದರು.

ಬಿಜೆಪಿ ಬಾಯಿ ಬಿಟ್ಟಿಲ್ಲ– ಎಂ.ಸಿ. ನಾಣಯ್ಯ

ಪ್ರಧಾನಿಯವರನ್ನು ಲೋಕಪಾಲ ವ್ಯಾಪ್ತಿಗೆ ತನ್ನಿ ಎಂದು ಮಾತ್ರ ಹೇಳುತ್ತಿರುವ ಬಿಜೆಪಿ ಪಕ್ಷವು ಲೋಕಪಾಲದ ಇತರ ವಿಷಯಗಳ ಬಾಯಿ ಬಗ್ಗೆ ಬಿಟ್ಟಿಲ್ಲ. ಲೋಕಪಾಲದ ಹೆಸರಿನಲ್ಲಿ ದೇಶದಲ್ಲಿ ಬೆಂಕಿ ಹಚ್ಚುವ ಕೆಲಸ ಆಗದಿರಲಿ ಎಂದು ಜನತಾದಳದ ಹಿರಿಯ ಮುಖಂಡರಾದ ಎಂ.ಸಿ. ನಾಣಯ್ಯ ಹೇಳಿದರು.

ಎನ್.ಡಿ.ಎ. ಅಧಿಕಾರದಲ್ಲಿದ್ದಾಗ ಯಾಕೆ ಜಾರಿಗೆ ತರಲಿಲ್ಲ ?– ಹೊರಟ್ಟಿ

ಆರು ವರ್ಷಗಳ ಕಾಲ ವಾಜಪೇಯಿಯವರು ಅಧಿಕಾರದಲ್ಲಿದ್ದಾಗ ಯಾಕೆ ಲೋಕಪಾಲ ಮಸೂದೆಯನ್ನು ಜಾರಿಗೆ ತರಲಿಲ್ಲ ಎಂದು ಪ್ರಶ್ನಿಸಿದ ಮತ್ತೊಬ್ಬ ಜೆಡಿಎಸ್ ಮುಖಂಡ ಬಸವರಾಜ ಹೊರಟ್ಟಿಯವರು ಇಂದು ಕರ್ನಾಟಕದ ಕಡೆ ಎಲ್ಲರೂ ಕೈ ಮಾಡಿ ತೋರಿಸುತ್ತಿದ್ದಾರೆ. ಶಾಸಕರು ರಾಜಿನಾಮೆ ಕೊಟ್ಟರೆ 20 ಕೋಟಿ ಸಿಗುತ್ತದೆ ಎನ್ನುವಂತಹ ಪರಿಸ್ಥಿತಿ ಇಲ್ಲಿ ಬಂದಿದೆ ಎಂದು ಅವರು ವಿಷಾದಿಸಿದರು.

ಬೆಲೆ ಏರಿಕೆ– ರೈತರ ಆತ್ಮಹತ್ಯೆ ನಿರಂತರ – ಎಂ.ಸಿ. ವೆಂಕಟ ರಾಮು

ಯುಪಿಎ ಸರ್ಕಾರ ಸ್ವಚ್ಛವಾದ, ಬಡವರ ಪರವಾದ ಆಡಳಿತ ಕೊಡುತ್ತೇವೆ ಇನ್ನುತ್ತಾ ಬೃಹತ್ ಹಗರಣಗಳನ್ನು ನಡೆಸುತ್ತಿದೆ. ಯುಪಿಎ ಆಡಳಿತದಲ್ಲಿ ರೈತರ ಆತ್ಮಹತ್ಯೆಗಳು ನಿರಂತರವಾಗಿ ನಡೆಯುತ್ತಿದೆ. ಅಗತ್ಯವಸ್ತುಗಳ ಬೆಲೆಗಳು ಗಗನಕ್ಕೇರಿದೆ. ಒಬ್ಬ ವ್ಯಕ್ತಿಯಿಂದ ಭ್ರಷ್ಟಾಚಾರ ನಿರ್ಮೂಲನೆ ಸಾಧ್ಯವಿಲ್ಲ. ಅದಕ್ಕೆ ದೊಡ್ಡ ಸೈನ್ಯವೇ ಬೇಕು ಎಂದು ಸಿ.ಪಿ.ಐ. ಪಕ್ಷದ ರಾಜ್ಯ ಮುಖಂಡರಾದ ಎಂ.ಸಿ. ವೆಂಕಟರಾಮು ಹೇಳಿದರು.

ಬೃಹತ್ ಬಂಡವಾಳಗಾರರ ಭ್ರಷ್ಟತೆ,ಲೂಟಿ, ಬಂಡವಾಳಶಾಹಿ ಮಾಧ್ಯಮಗಳ ಷಾಮೀಲಾತಿ ಮರೆಸುವ ಪಿತೂರಿ– ಜಿ.ಎನ್. ನಾಗರಾಜ್

ಮಹಾ ತ್ಯಾಗಿ ಎನ್ನಲಾಗುವ ಸೋನಿಯಾ ಗಾಂಧಿ, ಹಾಗೂ ಮಹಾ ಪ್ರಮಾಣಿಕ ಎನ್ನಲಾಗುವ ಮನಮೋಹನ ಸಿಂಗ್‌ರವರ



ಆಡಳಿತದಲ್ಲಿ ವಿರಾಟ್ ಸ್ವರೂಪದ ಭ್ರಷ್ಟಾಚಾರ ನಡೆಯುತ್ತಿದೆ ಎಂದ ಸಿಪಿಐ(ಎಂ) ರಾಜ್ಯ ಮುಖಂಡರಾದ ಜಿ.ಎನ್. ನಾಗರಾಜ್ ಇಡೀ ದೇಶದ ಜುಟ್ಟನ್ನು ಲೋಕಪಾಲಕ್ಕೆ ಒಪ್ಪಿಸುವಂತಹ ಮಸೂದೆ ನಮಗೆ ಒಪ್ಪಿಗೆ ಇಲ್ಲ. ನ್ಯಾಯಾಂಗದ ಮೇಲೆ ಲೋಕಪಾಲದ ಹಿಡಿತ ಬಂದಲ್ಲಿ ಅಧಿಕಾರಸ್ಥರು ಲೋಕಪಾಲರ ಈ ಅಧಿಕಾರವನ್ನು ಬಳಸಿ ನ್ಯಾಯಾಧೀಶರನ್ನು ಬೆದರಿಸುವ ಮೂಲಕ ನ್ಯಾಯಾಂಗವನ್ನು ಬಳಸಿಕೊಂಡು ನ್ಯಾಯಾಂಗದ ಸ್ವತಂತ್ರ ಕಾರ್ಯ ನಿರ್ವಹಣೆಗೆ ಧಕ್ಕೆ ತರುವ ಸಂಭವ ಇದೆ. ಆದ್ದರಿಂದ ನ್ಯಾಯಾಂಗಕ್ಕಾಗಿ ಬೇರೆಯದೇ ವ್ಯವಸ್ಥೆ ಬೇಕು. ಇದಲ್ಲದೇ ಕಾರ್ಯಾಂಗದ ಉನ್ನತಾಧಿಕಾರಿಗಳ ಹಂತದಲ್ಲಿನ ಭ್ರಷ್ಟಾಚಾರ ನಿಯಂತ್ರಣಕ್ಕೆ ಲೋಕಪಾಲಕ್ಕೆ ಅಧಿಕಾರವನ್ನು ಸೀಮಿತಗೊಳಿಸಬೇಕು. ಕೆಳಹಂತದ ಭ್ರಷ್ಟಾಚಾರ ನಿಯಂತ್ರಣಕ್ಕೆ ಬೇಕಾದಂತಹ ಕುಂದು ಕೊರತೆಗಳ ಆಯೋಗವನ್ನು ಪ್ರತ್ಯೇಕವಾಗಿ ರೂಪಿಸಬೇಕು ಎಂದರು.

ಇತ್ತೀಚಿನ ಬೃಹತ್ ಹಗರಣಗಳ ಕುರಿತು ದೇಶದ ಸಿಎಜಿಯು ವರದಿ ನೀಡಿದಾಗ ಅದರಲ್ಲಿ ಬೃಹತ್ ಬಂಡವಾಳಗಾರರ ರಿಲಯನ್ಸ್, ಟಾಟಾ ಮುಂತಾದ ದೊಡ್ಡ ದೊಡ್ಡ ಕಂಪನಿಗಳ ಬೃಹತ್ ವಂಚನೆ ಭ್ರಷ್ಟಾಚಾರ ಹೊರಬೀಳಲಾರಂಭಿಸಿತು. ಬೃಹತ್ ಕಂಪನಿಗಳ ಭ್ರಷ್ಟಾಚಾರಕ್ಕೆ ಪೂರಕವಾಗಿ ಖಾತೆಗಳಿಗೆ ಸಚಿವರು ಯಾರಾಗಬೇಕೆಂದು ಲಾಬಿ ನಡೆಸುವ ನೀರಾ ರಾಡಿಯಾಗಳಂತಹ ಮಾಧ್ಯಮದ ವ್ಯಕ್ತಿಗಳ ಪಾತ್ರವೂ ಬಯಲಾಗ ತೊಡಗಿತು. ಈ ಬೆಳವಣಿಗೆಯಿಂದ ಗಾಬರಿಗೊಂಡ ಬೃಹತ್ ಬಂಡವಾಳಗಾರರು, ತಮ್ಮ ಜಾಹಿರಾತುಗಳ ಮೇಲೆ ಅವಲಂಬಿಸಿರುವ ಬಂಡವಾಳಶಾಹಿ ಮಾಧ್ಯಮಗಳ ಮೂಲಕ ಜನರ ಗಮನವನ್ನು ಈ ಪ್ರಶ್ನೆಗಳಿಂದ ಬೇರೆಡೆ ಸೆಳೆಯಲು ಕೇವಲ ಅಣ್ಣಾ ಹಜಾರೆಯವರ ನೇತೃತ್ವದ ಚಳುವಳಿಯ ಬಗೆಗೆ ಮಾತ್ರವೇ ರಾತ್ರಿ ಹಗಲು ತತ್ತೂರಿ ಊದುತ್ತಿವೆ ಎಂದರು.

ಭ್ರಷ್ಟಾಚಾರಕ್ಕೆ ಹೊಸ ವ್ಯಾಖ್ಯಾನ– ಎಸ್.ವೈ. ಗುರುಶಾಂತ್

ರ್‍ಯಾಲಿಯಲ್ಲಿ ಕೊನೆಯ ಮಾತನ್ನಾಡಿ ಸಭೆಯ ಸಮಾರೋಪ ಮಾಡಿದ ಸಿ.ಪಿ.ಐ.(ಎಂ) ರಾಜ್ಯ ಮುಖಂಡರು ಜನಶಕ್ತಿಯ ಸಂಪಾದಕರೂ ಆದ ಎಸ್.ವೈ. ಗುರುಶಾಂತರವರು ಭ್ರಷ್ಟಾಚಾರಕ್ಕೆ ಹೊಸ ವ್ಯಖ್ಯಾನ ಬಿಜೆಪಿಯಿಂದ ಸಿಕ್ಕಿದೆ. ಒಬ್ಬೊಬ್ಬರೇ ಮಂತ್ರಿಗಳು ಜೈಲಿಗೆ ಹೋಗುತ್ತಿದ್ದಾರೆ. ಮೊನ್ನೆಯ ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ಭ್ರಷ್ಟಾಚಾರದ ಬಗೆಗೆ ಸದಾನಂದ ಗೌಡರು ಮಾತೇ ಆಡಲಿಲ್ಲ..ಅಂತಹ ಪರಿಸ್ಥಿತಿಯಲ್ಲಿ ಅವರು ಸಿಕ್ಕಿ ಬಿದ್ದಿದ್ದಾರೆ. ಆದರೆ ಬಿಜೆಪಿಯು ಭ್ರಷ್ಟಾಚಾರದ ವಿರುದ್ಧ ಬೊಬ್ಬೆ ಇಡುವುದು ಅಪಹಾಸ್ಯಕಾರಿ ಎಂದರು.

'ಪ್ರಬಲ ಲೋಕಪಾಲಕ್ಕಾಗಿ' ಕರಾವಳಿಯಾದ್ಯಂತ ಪ್ರತಿಭಟನೆಗಳು

ಅಣ್ಣಾ ಹಜಾರೆ ಬಂಧನ ಪ್ರತಿಭಟಿಸಿ ಮಂಗಳೂರಿನಲ್ಲಿ ಸಿಪಿಐ(ಎಂ) ಪ್ರತಿಭಟನೆ:

ಭ್ರಷ್ಟಾಚಾರ ವಿರೋಧಿ ಚಳುವಳಿಯ ಭಾಗವಾಗಿ ಉಪವಾಸ ಕಾರ್ಯಕ್ರಮ ಹಮ್ಮಿಕೊಂಡಿದ್ದ ಅಣ್ಣಾ ಹಜಾರೆಯವರನ್ನು ಏಕಾಏಕಿ ಬಂಧಿಸಿದ ದೆಹಲಿ ಸರಕಾರದ ಪ್ರಜಾಪ್ರಭುತ್ವ ವಿರೋದಿ ಕ್ರಮವನ್ನು ಖಂಡಿಸಿ ಹಾಗೂ ಪ್ರಬಲವಾದ ಲೋಕಪಾಲ ಮಸೂದೆಯನ್ನು ಪಾರ್ಲಿಮೆಂಟಿನಲ್ಲಿ ಮಂಡಿಸಬೇಕೆಂದು ಆಗ್ರಹಿಸಿ ಆಗಸ್ಟ್ 17 ರಂದು ದ.ಕ.ಜಿಲ್ಲಾಧಿಕಾರಿ ಕಚೇರಿ ಎದುರು ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿ ವತಿಯಿಂದ ಪ್ರತಿಭಟನಾ ಪ್ರದರ್ಶನವನ್ನು ಏರ್ಪಡಿಸಲಾಯಿತು.

ಪ್ರತಿಭಟನಾ ಪ್ರದರ್ಶನವನ್ನು ಉದ್ದೇಶಿಸಿ ಪಕ್ಷದ ರಾಜ್ಯ ಸಮಿತಿಯ ಸದಸ್ಯ ವಸಂತ ಆಚಾರಿ ಮಾತನಾಡಿದರು. ದಿಢೀರ್ ಕರೆಯಂತೆ ಏರ್ಪಾಡಾಗಿದ್ದ ಈ ಪ್ರತಿಭಟನೆಯಲ್ಲಿ ನೂರಕ್ಕೂ ಹೆಚ್ಚು ಪಕ್ಷದ ಹಿತೈಷಿಗಳು ಭಾಗವಹಿಸಿದ್ದರು. ಪಕ್ಷದ ರಾಜ್ಯ ಸಮಿತಿ ಸದಸ್ಯ ಜೆ.ಬಾಲಕೃಷ್ಣ ಶೆಟ್ಟಿ, ಜಿಲ್ಲಾ ಸಮಿತಿ ಸದಸ್ಯರಾದ ಯು.ಬಿ.ಲೋಕಯ್ಯ, ಕೆ.ಯಾದವ ಶೆಟ್ಟಿ, ಕೃಷ್ಣಪ್ಪ ಸಾಲ್ಯಾನ್, ಸುಕುಮಾರ್, ಸುನಿಲ್ ಕುಮಾರ್ ಬಜಾಲ್, ಪದ್ಮಾವತಿ ಶೆಟ್ಟಿ ಮೊದಲಾದವರು ಉಪಸ್ಥಿತರಿದ್ದರು.

★

ಬಂಧನ ಪ್ರತಿಭಟಿಸಿ ಉಡುಪಿಯಲ್ಲಿ ಮೆರವಣಿಗೆ:

ಅಣ್ಣಾ ಬಂಧನವನ್ನು ಪ್ರತಿಭಟಿಸಿ ಉಡುಪಿಯಲ್ಲಿ ಆಗಸ್ಟ್ 17 ರಂದು ಬನ್ನಂಜೆಯಿಂದ ಜಿಲ್ಲಾಧಿಕಾರಿ ಕಚೇರಿಯ ವರೆಗೆ ಸಿಪಿಐ(ಎಂ) ಪಕ್ಷದ ವತಿಯಿಂದ ಮೆರವಣಿಗೆಯನ್ನು ಏರ್ಪಡಿಸಲಾಯಿತು.

ಪ್ರತಿಭಟನಾಕಾರರನ್ನುದ್ದೇಶಿಸಿ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಲಿ ಸದಸ್ಯ ಪ್ರಸನ್ನ ಕುಮಾರ್ ಮಾತನಾಡಿದರು. ಪಕ್ಷದ ಜಿಲ್ಲಾ ಸಮಿತಿ ಕಾರ್ಯದರ್ಶಿ ಕೆ.ಶಂಕರ್, ರಾಜ್ಯದ ಕಾರ್ಮಿಕ ಮುಖಂಡ ವೀರಸ್ವಾಮಿ, ಜಿಲ್ಲಾ ಮುಖಂಡ ಪಿ.ವಿಶ್ವನಾಥ ರೈ, ವೆಂಕಟೇಶ್ ಕೋಣಿ, ಕವಿರಾಜ್ ಮೊದಲಾದವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಇನ್ನೂರರಷ್ಟು ಮಂದಿ ಪಕ್ಷದ ಬೆಂಬಲಿಗರು ಪಾಲ್ಗೊಂಡಿದ್ದರು.

★

ಎಂ.ಕೆ.ಪಂಧೆಯವರಿಗೆ ಶ್ರದ್ಧಾಂಜಲಿ

ಸಿಪಿಎಂ ಪಾಲಿಟ್ ಬ್ಯೂರೋ ಸದಸ್ಯ ಹಾಗೂ ಸಿಐಟಿಯು ಸಂಘಟನೆಯ ಹಿರಿಯ ಕಾರ್ಮಿಕ ನೇತಾರ ಕಾ.ಎಂ.ಕೆ.ಪಂಧೆಯವರು ಆಗಸ್ಟ್ 20ರ ಮುಂಜಾವದಲ್ಲಿ ನಿಧನರಾದ ವಾರ್ತೆ ತಿಳಿಯುತ್ತಿದ್ದಂತೆ ಸಿಐಟಿಯು ಮಂಗಳೂರು-ಮೈದಾನ್ ಕಚೇರಿಯಲ್ಲಿ ಕಪ್ಪು ಬಾವುಟದೊಂದಿಗೆ ಶೋಕಾಚರಣೆ ಸೂಚಿಸಲಾಯಿತು. ಸಂಜೆ ಕಚೇರಿಯಲ್ಲಿ ನಡೆದ ಶ್ರದ್ಧಾಂಜಲಿ ಸಭೆಯಲ್ಲಿ ಎಂ.ಕೆ.ಪಂಧೆಯವರ ಗುಣಗಾನ ಮಾಡಲಾಯಿತು.

ಸಭೆಯನ್ನುದ್ದೇಶಿಸಿ ಮಾತನಾಡಿದ ಸಿಪಿಎಂ ಪಕ್ಷದ ಜಿಲ್ಲಾ ಸಮಿತಿ ಕಾರ್ಯದರ್ಶಿ ಬಿ.ಮಾಧವ ಅವರು ಪಂಧೆಯವರ ಹೋರಾಟಮಯ ಜೀವನ ಹಾಗೂ ಸಾಧನೆಯನ್ನು ವಿವರಿಸಿದ್ದಲ್ಲದೆ, ಅವರ ಜನಾಕರ್ಷಕ ಹಾಗೂ ಸರಳ ವ್ಯಕ್ತಿತ್ವದ ಪರಿಚಯ ಮಾಡಿದರು. ತೀರಾ ಈಚೆಗೆ ಜುಲೈ ತಿಂಗಳ ಕೊನೆಯಲ್ಲಿ ಕುಲುವಿನಲ್ಲಿ ನಡೆದ ಸಿಐಟಿಯು ಕೇಂದ್ರ ಸಮಿತಿ ಸಭೆ ಹಾಗೂ ಬಹಿರಂಗ ಸಭೆಯಲ್ಲೂ ಪಂಧೆಯವರು ಉತ್ಸುಕತೆಯಿಂದ ಭಾಗವಹಿಸಿದ್ದ ಚಿತ್ರಣ ನೀಡಿದರು.

ಸಿಪಿಎಂ ಹಾಗೂ ಸಿಐಟಿಯು ಮುಖಂಡರುಗಳೂ ಆದ ಕೆ.ಆರ್.ಶ್ರೀಯಾನ್,





ವಸಂತ ಆಚಾರಿ, ಜೆ.ಬಾಲಕೃಷ್ಣ ಶೆಟ್ಟಿ ಇವರೂ ತಮಗೆ ಎಂ.ಕೆ.ಪಂಧೆಯವರೊಂದಿಗೆ ಒಡನಾಟ ಸಿಕ್ಕ ಆಪ್ತ ಸಂದರ್ಭಗಳನ್ನೂ ಆ ಮೂಲಕ ಅವರ ಹಿರಿಯ ವ್ಯಕ್ತಿತ್ವವನ್ನೂ ವಿವರಿಸಿದರು. ಸುನಿಲ್ ಕುಮಾರ್ ಬಜಾಲ್ ಸ್ವಾಗತಿಸಿದರು.

★

ಬಂಟ್ವಾಳದಲ್ಲಿ ಅಕ್ಷರ ದಾಸೋಹ ನೌಕರರ ಜಿಲ್ಲಾ ಸಮಾವೇಶ

ಅಕ್ಷರ ದಾಸೋಹ ನೌಕರರಿಗೆ ಕನಿಷ್ಟ ವೇತನ ನಿಗದಿಗೊಳಿಸಬೇಕು; ಹಾಜರಾತಿ ಆಧಾರದಲ್ಲಿ ಈಗಾಗಲೇ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಯನ್ನು ನೌಕರಿಯಿಂದ ಕಿತ್ತು ಹಾಕಬಾರದು ಎಂದು ರಾಜ್ಯ ಅಕ್ಷರ ದಾಸೋಹ ನೌಕರರ ಸಂಘ (ಸಿಐಟಿಯು)ದ ಅಧ್ಯಕ್ಷೆ ಎಸ್.ವರಲಕ್ಷ್ಮಿ ಆಗ್ರಹಿಸಿದರು. ಅವರು ಆಗಸ್ಟ್ 21 ರಂದು ಬಂಟ್ವಾಳದಲ್ಲಿ ಸೇರಿದ್ದ ಅಕ್ಷರ ದಾಸೋಹ ನೌಕರರ ಜಿಲ್ಲಾ ಸಮಾವೇಶದಲ್ಲಿ ಮಾತನಾಡಿದರು.

ನಾಲ್ಕು ನೂರಕ್ಕೂ ಮೀರಿದ ಸಂಖ್ಯೆಯ ಅಕ್ಷರ ದಾಸೋಹ ನೌಕರರು ಭಾಗವಹಿಸಿದ್ದ ಈ ಸಮಾವೇಶವನ್ನು ಉದ್ದೇಶಿಸಿ ಸಿಐಟಿಯು ದ.ಕ.ಜಿಲ್ಲಾ ಕಾರ್ಯದರ್ಶಿ ವಸಂತ ಆಚಾರಿ, ಅಕ್ಷರ ದಾಸೋಹ ನೌಕರರ ಮುಖಂಡರಾದ ಬಿ.ಎಂ.ಭಟ್, ರಾಮಣ್ಣ ವಿಟ್ಲ, ರಾಬರ್ಟ್ ಡಿಸೋಜ ಸುಳ್ಯ ಇವರು ಮಾತನಾಡಿದರು. ತಮ್ಮ ಬೇಡಿಕೆಗಳನ್ನು ಆಗ್ರಹಿಸಿ ರಾಜ್ಯ ಮಟ್ಟದಲ್ಲಿ ಅಕ್ಟೋಬರ್ ತಿಂಗಳಲ್ಲಿ ನಡೆಯಲಿರುವ ಅನಿರ್ದಿಷ್ಟಾವಧಿ ಹೋರಾಟದಲ್ಲಿ ಭಾಗವಹಿಸಬೇಕೆಂದು ಸಮಾವೇಶದಲ್ಲಿ ನಿರ್ಣಯ ಕೈಗೊಳ್ಳಲಾಯಿತು. ಸಮಾವೇಶವು ನೂತನ ಜಿಲ್ಲಾ ಸಮಿತಿಯನ್ನು ಆಯ್ಕೆ ಮಾಡಿದ್ದು, ಪದ್ಮಾವತಿ ಶೆಟ್ಟಿ ಅಧ್ಯಕ್ಷರಾಗಿಯೂ, ಗಿರಿಜ ಕಾರ್ಯದರ್ಶಿಯಾಗಿಯೂ, ಆಶಾಲತಾ ಗುರುಪುರ ಕೋಶಾಧಿಕಾರಿಯಾಗಿಯೂ ಆಯ್ಕೆಯಾಗಿರುತ್ತಾರೆ.

★

ಬಂಟ್ವಾಳದಲ್ಲಿ ಕಂಪ್ಯೂಟರ್ ಶಿಕ್ಷಕರ ಜಿಲ್ಲಾ ಸಮಾವೇಶ

ಶಿಕ್ಷಣ ಇಲಾಖೆಯು ಸರಕಾರಿ ಪ್ರೌಢಶಾಲೆಗಳಲ್ಲಿ ಹಾಗೂ ಸರಕಾರಿ ಪದವಿಪೂರ್ವ ಕಾಲೇಜುಗಳಲ್ಲಿ ಅವಶ್ಯವಿರುವ ಕಂಪ್ಯೂಟರ್ ಶಿಕ್ಷಕರನ್ನು ಖಾಸಗಿ ನೇಮಕಾತಿ ಸಂಸ್ಥೆಗೆ ಹೊರಗುತ್ತಿಗೆ ನೀಡುವ ಮೂಲಕ ನೇಮಿಸಿಕೊಂಡಿದ್ದು, ನೇಮಕಾತಿ ಆದೇಶದಲ್ಲಿ ರೂ.7500 ಮಾಸಿಕ ವೇತನ ಎಂದು ಕಾಣಿಸಿದೆ; ಆದರೆ ನೇಮಕಾತಿ ಸಂಸ್ಥೆಯು ಕೇವಲ ರೂ.3300 ಮೊಬಲಗನ್ನು ಮಾತ್ರ ವೇತನವಾಗಿ ಬ್ಯಾಂಕ್ ಖಾತೆಗೆ ಜಮೆ ಮಾಡುತ್ತಿದೆ. ಇಷ್ಟೇ ಅಲ್ಲದೆ ತಾವು ಶಿಕ್ಷಕರಾಗಿರುವ ಸಂಸ್ಥೆಗಳಲ್ಲಿಯೂ ಕಂಪ್ಯೂಟರ್ ಶಿಕ್ಷಕರಿಂದ ಕೆಲಸದ ಜೊತೆಗೆ ಗುಮಾಸ್ತ ಕೆಲಸವನ್ನೂ ಕೆಲವೆಡೆ ಮಾಡಿಸಲಾಗುತ್ತಿದೆ; ಇತರ ಶಿಕ್ಷಕರ ಅಪೇಕ್ಷೆಗಳನ್ನೂ ಪೂರೈಸಬೇಕಾಗುತ್ತದೆ. ಹೀಗೆ ಹಲವು ರೀತಿಗಳಲ್ಲಿ ಶಿಕ್ಷಕರು ಶೋಷಣೆ ಗೊಳಗಾಗುತ್ತಿದ್ದು, ಈ ನಿಟ್ಟಿನಲ್ಲಿ ದ.ಕ.ಜಿಲ್ಲೆಯಲ್ಲಿ ಮೊತ್ತ ಮೊದಲ ಬಾರಿಗೆ ಬಂಟ್ವಾಳದಲ್ಲಿ ಸಮಾವೇಶ ಏರ್ಪಡಿಸಲಾಗಿತ್ತು.

ಆಗಸ್ಟ್ 22 ರಂದು ನಡೆದ ಸಮಾವೇಶದಲ್ಲಿ 36 ಮಂದಿ ಶಿಕ್ಷಕರು ಮಹಿಳೆಯರೇ ಹೆಚ್ಚು ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಈ ಸಮಾವೇಶದಲ್ಲಿ ಸಿಐಟಿಯು ಸಂಘಟನೆಯ ರಾಜ್ಯ ಮುಖಂಡರಾದ ಎಸ್.ವರಲಕ್ಷ್ಮಿ, ಜಿಲ್ಲಾ ಸಮಿತಿ ಕಾರ್ಯದರ್ಶಿ ವಸಂತ ಆಚಾರಿ, ಜಿಲ್ಲಾ ಮುಖಂಡರಾದ ಬಿ.ಎಂ.ಭಟ್ ಭಾಗವಹಿಸಿದರು. ಸಮಾವೇಶವು ಕಂಪ್ಯೂಟರ್ ಶಿಕ್ಷಕರ ಸಮಸ್ಯೆಗಳನ್ನು ಚರ್ಚಿಸಿ, ಈ ಬಗ್ಗೆ ಹೋರಾಡಲು ಜಿಲ್ಲಾ ಮಟ್ಟದ ಸಮಿತಿಯನ್ನು ರಚಿಸುವುದೆಂದು ನಿರ್ಣಯಿಸಿ, ಬಳಿಕ ಸಮಾವೇಶದಲ್ಲಿ ಭಾಗವಹಿಸಿದವರನ್ನೊಳಗೊಂಡ ಜಿಲ್ಲಾ ಸಮಿತಿಯನ್ನು ಆಯ್ಕೆ ಮಾಡಿತು. ಬಿ.ಎಂ.ಭಟ್ ಗೌರವಧ್ಯಕ್ಷರಾಗಿಯೂ, ವೇದಾಕ್ಷಿ ಅಧ್ಯಕ್ಷರಾಗಿಯೂ, ಪೂರ್ಣಿಮಾ ಕಾರ್ಯದರ್ಶಿಯಾಗಿಯೂ, ಸ್ವಪ್ನಾ ಕೋಶಾಧಿಕಾರಿಯಾಗಿಯೂ ಆಯ್ಕೆ ಯಾಗಿರುತ್ತಾರೆ.

★

ಪ್ರಬಲ ಲೋಕಪಾಲ ಮಸೂದೆಗೆ ಒತ್ತಾಯಿಸಿ ಸಿಪಿಐ, ಸಿಪಿಎಂ, ಜನತಾದಳ ಜಂಟಿ ಪ್ರತಿಭಟನೆಗಳು:

ಎಡಪಕ್ಷಗಳೊನ್ನೊಳಗೊಂಡ 9 ರಾಜಕೀಯ ಪಕ್ಷಗಳು ಪ್ರಬಲ ಲೋಕಪಾಲ ಮಸೂದೆ ಮಂಡನೆಗೆ ಆಗ್ರಹಿಸಿ ರಾಷ್ಟ್ರದಾದ್ಯಂತ ಪ್ರತಿಭಟನೆ ಯನ್ನು ಆಗಸ್ಟ್ 23 ರಂದು ಆಯೋಜಿಸಿದ್ದ ಹಿನ್ನೆಲೆಯಲ್ಲಿ ದ.ಕ. ಮತ್ತು ಉಡುಪಿ ಜಿಲ್ಲೆಯಲ್ಲೂ ಅಲ್ಲಲ್ಲಿ ಪ್ರತಿಭಟನಾ ಪ್ರದರ್ಶನಗಳು ನಡೆದವು. ನ್ಯಾಯಾಂಗದ ಒಳಗೆ ನಡೆಯಬಹುದಾದ ಭ್ರಷ್ಟಾಚಾರವನ್ನು ನಿಯಂತ್ರಿಸಲು ರಾಷ್ಟ್ರೀಯ ನ್ಯಾಯಾಂಗ ಆಯೋಗ ರಚನೆಯಾಗಬೇಕು; ಪ್ರಧಾನಿಯನ್ನೂ ಲೋಕಪಾಲ ಕಾಯಿದೆಯ ವ್ಯಾಪ್ತಿಗೆ ತರಬೇಕು; ಚುನಾವಣಾ ಕಾನೂನಿನಲ್ಲಿ ಸುಧಾರಣೆಗಳಾಗಬೇಕು; ಕಪ್ಪು ಹಣವನ್ನು ಬಯಲಿಗೆಳೆಯಬೇಕು;ಬಂಡವಾಳಶಾಹಿ-ಅಧಿಕಾರಶಾಹಿ-ರಾಜಕಾರಣಿ ಮೈತ್ರಿ ಕೊನೆಗೊಳ್ಳಬೇಕು- ಎಂಬ ಬೇಡಿಕೆಗಳನ್ನು ಈ ಪ್ರತಿಭಟನಾ ಪ್ರದರ್ಶನಗಳಲ್ಲಿ ಒತ್ತಿಹೇಳಲಾಯಿತು.

ಮಂಗಳೂರು: ಮಂಗಳೂರು ಜಿಲ್ಲಾಧಿಕಾರಿ ಕಚೇರಿಗಳ ಎದುರು ನಡೆದ ಪ್ರತಿಭಟನಾ ಪ್ರದರ್ಶನದಲ್ಲಿ ಸಿಪಿಐ, ಸಿಪಿಎಂ ಹಾಗೂ ಜನತಾದಳ(ಎಸ್) ಪಕ್ಷಗಳ ಸುಮಾರು 200 ಜನ ಭಾಗವಹಿಸಿದ್ದರು. ಪ್ರದರ್ಶನವನ್ನುದ್ದೇಶಿಸಿ ಸಿಪಿಎಂ ಜಿಲ್ಲಾ ಕಾರ್ಯದರ್ಶಿ ಬಿ.ಮಾಧವ, ಸಿಪಿಐ ಜಿಲ್ಲಾ ಕಾರ್ಯದರ್ಶಿ ಪಿ.ಸಂಜೀವ, ಜೆಡಿಎಸ್‌ನ ಜಿಲ್ಲಾಧ್ಯಕ್ಷ ಎಂ.ಬಿ.ಸದಾಶಿವ ಮಾತನಾಡಿದರು. ವಸಂತ ಆಚಾರಿ ಸ್ವಾಗತಿಸಿದರು.

ಉಡುಪಿ: ಉಡುಪಿಯಲ್ಲಿ ಸಿಪಿಎಂ, ಜೆಡಿಎಸ್ ಮತ್ತಿ ಸಿಪಿಐ ಪಕ್ಷಗಳು ಕ್ಲಾಕ್ ಟವರ್ ಎದುರು ನಡೆಸಿದ ಪ್ರತಿಭಟನಾ ಪ್ರದರ್ಶನದಲ್ಲಿ ಇನ್ನೂರಕ್ಕೂ ಮೇಲ್ಪಟ್ಟು ಜನ ಭಾಗವಹಿಸಿದ್ದರು. ಸಿಪಿಐ(ಎಂ) ಉಡುಪಿ ಜಿಲ್ಲಾ ಸಮಿತಿ ಕಾರ್ಯದರ್ಶಿ ಕೆ.ಶಂಕರ್, ಜೆಡಿಎಸ್‌ನ ಜಿಲ್ಲಾಧ್ಯಕ್ಷ ದೇವಿ ಪ್ರಸಾದ್ ಶೆಟ್ಟಿ ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದರು. ಮೂರು ಪಕ್ಷಗಳ ಸ್ಥಳೀಯ ಮುಖಂಡರುಗಳು ಉಪಸ್ಥಿತರಿದ್ದರು.

ಬೆಳ್ತಂಗಡಿ: ಬೆಳ್ತಂಗಡಿ ಮೂರು ರಸ್ತೆಯಿಂದ ತಾಲೂಕು ಕಚೇರಿಯ ವರೆಗೆ ಸಿಪಿಐ(ಎಂ) ಪಕ್ಷದ ನೂರು ಮಂದಿ ಬೆಂಬಲಿಗರು ಮೆರವಣಿಗೆ ನಡೆಸಿ ಪ್ರತಿಭಟನಾ ಪ್ರದರ್ಶನ ನಡೆಸಿದರು. ಸಿಪಿಎಂ ತಾಲೂಕು ಮುಖಂಡರಾದ ಎಸ್.ಎಂ.ಶಿವ ಕುಮಾರ್, ಬಿ.ಎಂ.ಭಟ್ ಪ್ರದರ್ಶನಕಾರರನ್ನುದ್ದೇಶಿಸಿ ಮಾತನಾಡಿದರು.

ಪುತ್ತೂರು: ಸಿಪಿಐ(ಎಂ) ಮತ್ತು ಜೆಡಿಎಸ್ ಸಂಯುಕ್ತವಾಗಿ ಪುತ್ತೂರಿನಲ್ಲಿ ಪ್ರತಿಭಟನಾ ಪ್ರದರ್ಶನವನ್ನು ಏರ್ಪಡಿಸಿತು. ಪುತ್ತೂರು ಉಪ ವಿಭಾಗಾಧಿಕಾರಿ ಕಚೇರಿ ಎದುರು ನಡೆದ ಪ್ರದರ್ಶನದಲ್ಲಿ ನಲ್ವತ್ತು ಮಂದಿ ಭಾಗವಹಿಸಿದ್ದರು. ಸಿಪಿಎಂನ ತಾಲೂಕು ಕಾರ್ಯದರ್ಶಿ ಪಿ.ಕೆ.ಸತೀಶನ್ ಮತ್ತು ಜೆಡಿಎಸ್ ತಾಲೂಕು ಅಧ್ಯಕ್ಷ ಕೆ.ಎಸ್.ಎನ್. ನಿಡ್ವಣ್ಣಾಯ ಪ್ರತಿಭಟನೆಯ ನೇತೃತ್ವ ವಹಿಸಿದ್ದರು. ☐

ಆಗಸ್ಟ್ 25 ರಂದು ಪ್ರಧಾನಮಂತ್ರಿಗಳು ತನ್ನ ಸರಕಾರ ಲೋಕಪಾಲ ಮಸೂದೆ ಮತ್ತು ಭ್ರಷ್ಟಾಚಾರದ ವಿರುದ್ಧ ಹೋರಾಟದ ವಿವಿಧ ಕಣ್ಣೋಟಗಳನ್ನು ಪರಿಶೀಲಿಸಲು ಸಿದ್ಧವಾಗಿದೆ ಎಂದು ಲೋಕಸಭೆಗೆ ತಿಳಿಸಿದರು. ಆದರೆ ಈ ಕೆಲಸವನ್ನು ಕೈಗೆತ್ತಿಕೊಳ್ಳುವ ವ್ಯವಸ್ಥೆಗೆ ಒಂದು ನಿರ್ದಿಷ್ಟ ಸ್ವರೂಪದ ರೂಪರೇಷೆಯನ್ನು ಕೊಡಲಿಲ್ಲ. ಭ್ರಷ್ಟಾಚಾರದ ವಿರುದ್ಧ ಸಮರವನ್ನು ಶ್ರದ್ಧೆಯಿಂದ ನಡೆಸಬೇಕಾದರೆ, ಒಂದು ಬಲಿಷ್ಟ ಮತ್ತು ಪರಿಣಾಮಕಾರಿ ಲೋಕಪಾಲ ವ್ಯವಸ್ಥೆಯನ್ನು ಸ್ಥಾಪಿಸುವುದಲ್ಲದೆ, ಅದರೊಂದಿಗೇ ಇನ್ನೂ ಕೆಲವು ಕ್ರಮಗಳನ್ನು ಕೈಗೊಳ್ಳಬೇಕು. ಈ ಬಗ್ಗೆ ಸಿಪಿಐ(ಎಂ) ಆರು ಸಲಹೆ-ಸೂಚನೆಗಳನ್ನು ಮುಂದಿಟ್ಟಿದೆ.

ಲೋಕಪಾಲ ಮಸೂದೆ: ಈ ಇಕ್ಕಟ್ಟು ಕೊನೆಗೊಳ್ಳಲಿ

ಆಗಸ್ಟ್ 25, 2011 ರ 'ಪೀಪಲ್ ಡೆಮಾಕ್ರಸಿ' ಪತ್ರಿಕೆಯ ಸಂಪಾದಕೀಯ

ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ಅಣ್ಣಾ ಹಝಾರೆಯವರ ಉಪವಾಸ ಮುಷ್ಕರದ ಮುಂದುವರಿಕೆ ಕುರಿತಂತೆ ಇಕ್ಕಟ್ಟು, ಅನಿಶ್ಚಿತತೆ ಮುಂದುವರೆದಿದೆ. ಪ್ರಧಾನ ಮಂತ್ರಿಗಳು ಅಗಸ್ಟ್ 24ರಂದು ಒಂದು ಸರ್ವಪಕ್ಷ ಸಭೆ ಕರೆದಿದ್ದರು. ಜನ ಲೋಕಪಾಲ ಮಸೂದೆಯ ಸೂಚನೆಗಳನ್ನು ಪರಿಗಣಿಸಿ ಒಂದು ಅಂತಿಮ ಕರಡನ್ನು ಮಂಡಿಸಲಾಗುವುದು ಎಂಬ ಸರಕಾರದ ಭರವಸೆಗೆ ಸ್ಪಂದಿಸಿ ತನ್ನ ಉಪವಾಸ ಮುಷ್ಕರವನ್ನು ಹಿಂತೆಗೆದುಕೊಳ್ಳಬೇಕು ಎಂದು ಅಣ್ಣಾ ಹಝಾರೆಯವರನ್ನು ವಿನಂತಿಸಿಕೊಳ್ಳುವ ಒಂದು ಒಮ್ಮತದ ನಿರ್ಣಯವನ್ನು ಈ ಸಭೆಯಲ್ಲಿ ಅಂಗೀಕರಿಸಲಾಯಿತು. ಈ ಮನವಿ ಈ ಸಂಚಿಕೆ ಮುದ್ರಣಕ್ಕೆ ಹೋಗುವ ವರೆಗೆ ಅಪೇಕ್ಷಿತ ಫಲ ನೀಡಿರಲಿಲ್ಲ.

ಈ ಸಭೆಯಲ್ಲಿ ಎಡಪಕ್ಷಗಳು, ಭ್ರಷ್ಟಾಚಾರವನ್ನು ಎದುರಿಸಿ ಹೋರಾಡುವ ಪ್ರಶ್ನೆಯಲ್ಲಿ ಎರಡು ಆಯಾಮಗಳಿವೆ ಎಂದು ಹೇಳಿದವು. ಮೊದಲನೆಯದ್ದು, ತಕ್ಷಣದ ಸಂದರ್ಭ. ಇಲ್ಲಿ ಅಣ್ಣಾ ಹಝಾರೆಯವರನ್ನು ಉಪವಾಸ ನಿಲ್ಲಿಸುವಂತೆ ಮನವೊಲಿಸುವ ಗುರಿ ಇರಬೇಕು. ಸರಕಾರ ತಾನು ಸಂಸತ್ತಿನಲ್ಲಿ ಮಂಡಿಸಿದ ಮಸೂದೆಯನ್ನು ಹಿಂತೆಗೆದುಕೊಂಡು ಜನಲೋಕಪಾಲ್ ಮತ್ತು ಇತರ ವಲಯಗಳಿಂದ ಬಂದಿರುವ ಸಲಹೆ-ಸೂಚನೆಗಳನ್ನು ಒಳಗೊಂಡ ಒಂದು ಹೊಸ ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸುವ ಭರವಸೆ ಕೊಡಬೇಕು. ಹೊಸ ಮಸೂದೆಯ ಕರಡು ರಚಿಸುವ ವಿಧಿ-ವಿಧಾನಗಳನ್ನು ಸರಕಾರ ರೂಪಿಸಬೇಕು ಮತ್ತು ಈ ಭರವಸೆಯ ಆಧಾರದಲ್ಲಿ ಅಣ್ಣಾ ಹಝಾರೆ ತನ್ನ ಉಪವಾಸ ಮುಷ್ಕರವನ್ನು ಹಿಂತೆಗೆದುಕೊಳ್ಳಬೇಕು.

ಆಗಸ್ಟ್ 25 ರಂದು ಪ್ರಧಾನಮಂತ್ರಿಗಳು ತನ್ನ ಸರಕಾರ ಲೋಕಪಾಲ ಮಸೂದೆ ಮತ್ತು ಭ್ರಷ್ಟಾಚಾರದ ವಿರುದ್ಧ ಹೋರಾಟದ ವಿವಿಧ ಕಣ್ಣೋಟಗಳನ್ನು ಪರಿಶೀಲಿಸಲು ಸಿದ್ಧವಾಗಿದೆ ಎಂದು ಲೋಕಸಭೆಗೆ ತಿಳಿಸಿದರು. ಆದರೆ ಈ ಕೆಲಸವನ್ನು ಕೈಗೆತ್ತಿಕೊಳ್ಳುವ ವ್ಯವಸ್ಥೆಗೆ ಒಂದು ನಿರ್ದಿಷ್ಟ ಸ್ವರೂಪದ ರೂಪರೇಷೆಯನ್ನು ಕೊಡಲಿಲ್ಲ. ಇದರಲ್ಲಿ ಆಶ್ಚರ್ಯವೇನಿಲ್ಲ. ಏಕೆಂದರೆ, ಕಳೆದ ಕೆಲವು ತಿಂಗಳಿಂದ ಈ ಸಮಸ್ತ ಪ್ರಶ್ನೆಯನ್ನು ಸರಕಾರ ಬೇಕಾಬಿಟ್ಟಿಯಾಗಿಯೇ ನಿರ್ವಹಿಸಿದೆ. ದೇಶದ, ಸಂವಿಧಾನದ ಮತ್ತು ಸಂಸದೀಯ ಪ್ರಜಾಪ್ರಭುತ್ವದ ಹಿತದೃಷ್ಟಿಯಿಂದ ಸರಕಾರ ತಕ್ಷಣವೇ ಬಲಿಷ್ಟವಾಗಿರುವ ಮತ್ತು ಪರಿಣಾಮಕಾರಿಯಾದ ಒಂದು ಹೊಸ ಮಸೂದೆಯನ್ನು ತರಬೇಕು.


'ಲೋಕಪಾಲ'ವಷ್ಟೇ ಸಾಲದು

ಭ್ರಷ್ಟಾಚಾರದ ವಿರುದ್ಧ ಹೋರಾಟದ ಒಟ್ಟು ಪ್ರಶ್ನೆಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಸಿಪಿಐ(ಎಂ) ಒಂದು ಪರಿಣಾಮಕಾರಿ ಮಸೂದೆ ಬೇಕಾಗಿದೆ ಎನ್ನುವುದರೊಂದಿಗೇ, ಈ ಸಮರ ಯಶಸ್ವಿಯಾಗಬೇಕಾದರೆ, ಈ ನಿಟ್ಟಿನಲ್ಲಿ ಕೈಗೊಳ್ಳಬೇಕಾದ ಇತರ ಅನೇಕ ಕ್ರಮಗಳ ಬಗ್ಗೆ ಒಂದು ವಿವರವಾದ ಟಿಪ್ಪಣಿಯನ್ನು ಸಲ್ಲಿಸಿತ್ತು. 1988ರ ಭ್ರಷ್ಟಾಚಾರ ನಿಗ್ರಹ ಕಾನೂನಿ(ಪಿಸಿಎ)ನಲ್ಲಿ ಭ್ರಷ್ಟಾಚಾರ ಎಂದರೆ ಖಾಸಗೀ ಪ್ರಯೋಜನಕ್ಕೆ ಅಥವ ಸಮೃದ್ಧಿಗೆ ಸಾರ್ವಜನಿಕ ಅಧಿಕಾರದ ದುರುಪಯೋಗ ಎಂದು ಬಹಳ ಸೀಮಿತವಾಗಿರುವ ನಿರೂಪಣೆಯನ್ನು ತಿದ್ದುಪಡಿ ಮಾಡುವ ಅಗತ್ಯವಿದೆ ಎಂದು ಸಿಪಿಐ(ಎಂ) ಅಭಿಪ್ರಾಯ ಪಡುತ್ತದೆ.

ಹಲವು ಸಂದರ್ಭಗಳಲ್ಲಿ, ಅಧಿಕಾರವನ್ನು ಖಾಸಗಿ ಕಂಪನಿ ಮುಂತಾದವುಗಳ ಪ್ರಯೋಜನಕ್ಕಾಗಿ ದುರುಪಯೋಗ ಮಾಡಿಕೊಳ್ಳಲಾಗುತ್ತಿದೆ. ಇವು ಭ್ರಷ್ಟಾಚಾರ ನಿಗ್ರಹ ಕಾನೂನು ಹೇಳುವ ಒಬ್ಬ 'ವ್ಯಕ್ತಿ'ಯಲ್ಲವಾದ್ದರಿಂದ ಆ ಕಾನೂನು ಇವಕ್ಕೆ ಅನ್ವಯವಾಗುವುದಿಲ್ಲ. ಹಲವಾರು ಸಂದರ್ಭಗಳಲ್ಲಿ ಲಂಚ ಅಥವ ಹಣ ನುಂಗಿ ಹಾಕಿರುವುದನ್ನು ಗುರುತಿಸಲಾಗಲಿಕ್ಕಿಲ್ಲ, ಆದರೆ ಸಾರ್ವಜನಿಕ ಖಜಾನೆಗೆ ಅಪಾರ ನಷ್ಟವಾಗಿರುತ್ತದೆ ಮತ್ತು ಸಾರ್ವಜನಿಕ ವಿಶ್ವಾಸದ ಉಲ್ಲಂಘನೆಯಾಗಿರುತ್ತದೆ- ಉದಾ: ಒಂದು ಉದ್ದೇಶಪೂರ್ವಕ ಅಧಿಕಾರದ ದುರುಪಯೋಗದಿಂದ ಸಾರ್ವಜನಿಕ ವಲಯದ ಘಟಕಗಳ ಮಾರಾಟ.

ಭ್ರಷ್ಟಾಚಾರದ ನಿರೂಪಣೆಯನ್ನು ವಿಸ್ತರಿಸಿ "ಕಾನೂನುಗಳನ್ನು ಅಥವ ನಿಯಮಗಳನ್ನು ಉಲ್ಲಂಘಿಸಿ ಒಬ್ಬ ಸಾರ್ವಜನಿಕ ಸೇವಕನಿಂದ ಯಾವುದೇ ವ್ಯಕ್ತಿ ಅಥವ ವಸ್ತುವಿಗೆ ಅನುಚಿತ ಪ್ರಯೋಜನ ಕೊಡುವುದು ಅಥವ ಪಡೆಯುವುದನ್ನು" ಕೂಡ ಸೇರಿಸಬೇಕು.

ಪ್ರಧಾನ ಮಂತ್ರಿಗಳನ್ನು ಇದರ ವ್ಯಾಪ್ತಿಯಲ್ಲಿ ಸೇರಿಸುವ ಬಗ್ಗೆ, ಸಾಕಷ್ಟು ರಕ್ಷಣೋಪಾಯಗಳೊಡನೆ ಇದನ್ನು ಮಾಡಬೇಕು ಎಂದು ಸಿಪಿಐ(ಎಂ) ಸೂಚಿಸಿದೆ. ಸುಪ್ರಿಂ ಕೋರ್ಟ್ ಮತ್ತು ಹೈಕೋರ್ಟಿನ ನ್ಯಾಯಾಧೀಶರ ವಿರುದ್ಧ ಭ್ರಷ್ಟಾಚಾರದ ದೂರುಗಳನ್ನು ಒಂದು ಪ್ರತ್ಯೇಕ ಸಂಸ್ಥೆ, ರಾಷ್ಟ್ರೀಯ ನ್ಯಾಯಾಂಗ ಆಯೋಗ ನಿರ್ವಹಿಸಬೇಕು. ಈ ಆಯೋಗ ಉನ್ನತ ನ್ಯಾಯಾಂಗದಲ್ಲಿ ನೇಮಕಗಳ, ಅವರ ವರ್ತನೆಗಳ ಮೇಲೆ ನಿಗಾ ಇಡಬೇಕು ಮತ್ತು ಭ್ರಷ್ಟಾಚಾರದ ದೂರುಗಳ ತನಿಖೆ ನಡೆಸಬೇಕು. ಇದಕ್ಕೆ ಅಗತ್ಯವಾದ ಶಾಸನವನ್ನು ಪಾಸು ಮಾಡಬೇಕು. 'ನ್ಯಾಯಾಂಗ ಮಟ್ಟಗಳು ಮತ್ತು ಜವಾಬುದಾರಿಕೆ ಮಸೂದೆ, 2010' ಇದಕ್ಕೆ ಏನೇನೂ ಸಾಲದು.



ಕೃಪೆ : ದಿ ಹಿಂದೂ

ಇತರ ಕ್ರಮಗಳು

ಸದ್ಯಕ್ಕೆ ಯಾವುದೇ ಭ್ರಷ್ಟ ಆಚರಣೆ ಕುರಿತಂತೆ ಸಂಸತ್ ಸದಸ್ಯರ ವರ್ತನೆಯ ಪರಿಶೀಲನೆ ದುರ್ಬಲ ಮತ್ತು ಅತೃಪ್ತಿಕರವಾಗಿದೆ. ಸಂವಿಧಾನದ 105ನೇ ಕಲಮು ಸಂಸತ್ ಸದಸ್ಯರಿಗೆ ವಾಕ್ ಮತ್ತು ಮತದಾನದ ಸ್ವಾತಂತ್ರ್ಯ ಕುರಿತಂತೆ ರಕ್ಷಣೆ ಕೊಡುತ್ತದೆ. ಇಲ್ಲಿರುವ ನಿಜವಾದ ಪ್ರಶ್ನೆಯೆಂದರೆ ಈ ಸ್ವಾತಂತ್ರ್ಯ ಭ್ರಷ್ಟ ಆಚರಣೆಗಳಿಗೆ ವಿಸ್ತರಿಸದಂತೆ ಮಾಡುವುದು ಹೇಗೆ ಎಂಬುದು.

ಇದನ್ನು ಕಲಮು 105ಕ್ಕೆ 'ರಾಷ್ಟ್ರೀಯ ಸಂವಿಧಾನ ಪರಾಮರ್ಶೆ ಆಯೋಗ' ಶಿಫಾರಸು ಮಾಡಿರುವ ರೀತಿಯಲ್ಲಿ ತಿದ್ದುಪಡಿಯ ಮೂಲಕ ಮಾಡಬಹುದು.

ಪರ್ಯಾಯವಾಗಿ, ಸಾಧ್ಯವಿದ್ದರೆ, ಸಂಸತ್ತಿನಲ್ಲಿ ಯಾವುದೇ ಸಂಸತ್ ಸದಸ್ಯನ ಕ್ರಿಯೆ (ಮತದಾನ, ಭಾಷಣ ಇತ್ಯಾದಿ) ಯಾವುದೇ ಭ್ರಷ್ಟ ಆಚರಣೆಯಲ್ಲಿ ತೊಡಗುವ ಉದ್ದೇಶದಿಂದ ನಡೆದಿದ್ದರೆ ಅದು ಭ್ರಷ್ಟಾಚಾರ ನಿಗ್ರಹ ಕಾನೂನು ಮತ್ತು ಭಾರತೀಯ ದಂಡ ಸಂಹಿತೆಯ ವ್ಯಾಪ್ತಿಗೆ ಬರುವಂತೆ ಶಾಸನವನ್ನು ತರಬಹುದು.

ಭ್ರಷ್ಟಾಚಾರವನ್ನು ಎದುರಿಸಬೇಕಾದರೆ, ಆ ಬಗ್ಗೆ 'ಸಿಳ್ಳೆ ಹಾಕುವವರು' ಅಂದರೆ ಕಾನೂನು ಬಾಹಿರ ಚಟುವಟಿಕೆಗಳ ಮಾಹಿತಿ ಕೊಡುವವರನ್ನು ರಕ್ಷಿಸಬೇಕು. ಇದರ ಮೇಲೆ ನಿಗಾ ಇಡುವುದು ಮತ್ತು ಅವರ ರಕ್ಷಣೆ 'ಲೋಕಪಾಲ' ದ ಕಾರ್ಯವ್ಯಾಪ್ತಿಯ ಭಾಗವಾಗಬಹುದು. ಆದರೆ ಇದಕ್ಕೆ ಒಂದು ಸಮಗ್ರವಾದ ಶಾಸನಬದ್ಧ ಬೆಂಬಲ ಬೇಕಾಗುತ್ತದೆ. 'ಸಾರ್ವಜನಿಕ ಹಿತಾಸಕ್ತಿ ಪ್ರಕಟಣೆ(ಮಾಹಿತಿ ರಕ್ಷಣೆ) ಮಸೂದೆ, 2010'ಯನ್ನು ಬಲಪಡಿಸಬೇಕಾಗಿದೆ ಮತ್ತು ಶೀಘ್ರವಾಗಿ ಅದನ್ನು ಶಾಸನವಾಗಿ ಮಾಡಬೇಕಾಗಿದೆ.

ಭ್ರಷ್ಟಾಚಾರದ ವಿರುದ್ಧ ಸಮರವನ್ನು ಶ್ರದ್ಧೆಯಿಂದ ನಡೆಸಬೇಕಾದರೆ, ಒಂದು ಬಲಿಷ್ಟ ಮತ್ತು ಪರಿಣಾಮಕಾರಿ ಲೋಕಪಾಲ ವ್ಯವಸ್ಥೆಯನ್ನು ಸ್ಥಾಪಿಸುವುದಲ್ಲದೆ, ಅದರೊಂದಿಗೇ ಇನ್ನೂ ಕೆಲವು ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸಿಪಿಐ(ಎಂ) ಈ ಕೆಳಗಿನ ಆರು ಸಲಹೆ-ಸೂಚನೆಗಳನ್ನು ಮುಂದಿಟ್ಟಿದೆ:

1. ಒಂದು ರಾಷ್ಟ್ರೀಯ ನ್ಯಾಯಾಂಗ ಆಯೋಗವನ್ನು ರಚಿಸಿ, ನ್ಯಾಯಾಂಗದ ವರ್ತನೆಗಳನ್ನು ಅದರ ವ್ಯಾಪ್ತಿಗೆ ತರಬೇಕು.
2. ಸಾರ್ವಜನಿಕ ಕುಂದು-ಕೊರತೆಗಳನ್ನು ನಿವಾರಿಸಲು ನಾಗರಿಕರ ಸನ್ನದ್ದು(ಸಿಟಿಝನ್ಸ್ ಚಾರ್ಟರ್)ಗಳ ರಕ್ಷಣೆಗೆ ಕಾನೂನು.
3. ಸಂಸತ್ ಸದಸ್ಯರನ್ನು ಭ್ರಷ್ಟಾಚಾರ -ವಿರೋಧಿ ಪರಿವೀಕ್ಷಣೆಯ ಅಡಿಯಲ್ಲಿ ತರಲು, ಅಗತ್ಯವಿದ್ದರೆ, ಸಂವಿಧಾನದ ಕಲಮು 105ರ ತಿದ್ದುಪಡಿ.
4. ಚುನಾವಣೆಗಳಲ್ಲಿ ಹಣಬಲದ ಮತ್ತು ಕ್ರಿಮಿನಲ್‌ಗಳ ಪಾತ್ರವನ್ನು ತಡೆಯಲು ಚುನಾವಣಾ ಸುಧಾರಣೆಗಳು.
5. ರಾಜ್ಯಗಳಲ್ಲಿ 'ಲೋಕಾಯುಕ್ತ' ವ್ಯವಸ್ಥೆಗಳನ್ನು ರಚಿಸಿ ರಾಜ್ಯ ಮಟ್ಟದಲ್ಲಿ ಸಾರ್ವಜನಿಕ ಸೇವಕರನ್ನು ಅದರ ವ್ಯಾಪ್ತಿಗೆ ತರಬೇಕು.
6. ಕಪ್ಪು ಹಣವನ್ನು ಹೊರತೆಗೆಯಲು ಮತ್ತು 'ತೆರಿಗೆ ಮುಕ್ತಧಾಮ'ಗಳಲ್ಲಿ ಕಾನೂನುಬಾಹಿರವಾಗಿ ಪೇರಿಸಿಟ್ಟ ಸಂಪತ್ತನ್ನು ವಶಪಡಿಸಿಕೊಳ್ಳಲು ಕ್ರಮಗಳು.

ಭಾರತೀಯ ಗಣತಂತ್ರದಲ್ಲಿ ಸಂವಿಧಾನಿಕ ವಿಧಿ-ವಿಧಾನಗಳನ್ನು ಕಾಪಾಡಿಕೊಳ್ಳಲು ಮತ್ತು ಅವನ್ನು ಎತ್ತಿ ಹಿಡಿಯಲಿಕ್ಕಾಗಿ ಸರಕಾರ ಈ ಇಕ್ಕಟ್ಟನ್ನು ಪರಿಹರಿಸಲು ತುರ್ತಾಗಿ ಕ್ರಿಯೆಗಿಳಿಯಬೇಕು. ❐

ಜನಲೋಕಪಾಲ ಮಸೂದೆ ಒಪ್ಪಬೇಕೆಂದು ಹಜಾರೆಯವರು ಆರಂಭಿಸಿರುವ ಉಪವಾಸ ಸತ್ಯಾಗ್ರಹಕ್ಕೆ ಜನರಿಂದ ಉತ್ತಮ ಪ್ರತಿಕ್ರಿಯೆ ದೊರೆತಿದೆ. ಈ ಒಟ್ಟು ಚಳುವಳಿಯನ್ನು ವಿಮರ್ಶಿಸಲು ಸಿದ್ಧವಿಲ್ಲದಿರುವ ಮಾಧ್ಯಮಗಳು ಅತಿರಂಜಿತವಾಗಿ ವಿಜೃಂಭಿಸುತ್ತಿವೆ. ಇಂತಹ ಸನ್ನಿವೇಶದಲ್ಲಿ ಅಣ್ಣಾ ಟೀಂ ನ ಪ್ರಯತ್ನ, ಚಳುವಳಿಯ ವರ್ಗಸ್ವರೂಪದ ಬಗ್ಗೆ ವಿಶ್ಲೇಷಿಸಿದ್ದಾರೆ ಲೇಖಕರು

ಟೀಂ ಅಣ್ಣಾ ಮತ್ತು ಭ್ರಷ್ಟಾಚಾರ

ವಿರೋಧಿ ಆಂದೋಲನದ ರೂಪ, ಸ್ವರೂಪ, ವಿರೂಪ

ಜಿ.ಎಸ್.ನಾಗರಾಜ್



ಅಣ್ಣಾ ಹಜಾರೆಯವರ ಉಪವಾಸ 10ನೇ ದಿನಕ್ಕೆ ಕಾಲಿಟ್ಟಿದೆ. ಟಿ.ವಿ. ಸುದ್ದಿವಾಹಿನಿಗಳ ಅಣ್ಣಾ ಬಳಗ ಮತ್ತು ಅವರ ಭ್ರಷ್ಟಾಚಾರ ವಿರೋಧಿ ಆಂದೋಲನದ ನಿರಂತರ ಪ್ರಸಾರ 20 ಗಂಟೆಗಳನ್ನು ದಾಟಿದೆ. ಅದರಲ್ಲಿಯೂ ಒಂದು ಇಂಗ್ಲೀಷ್ ಸುದ್ದಿವಾಹಿನಿ ಒಂದು ಗಳಿಗೆಯೂ ಬಿಡದೆ ದೇಶದಲ್ಲಿ ಎಲ್ಲಿಯೂ ಬೇರೇನೂ ನಡೆದೇ ಇಲ್ಲವೆಂಬಂತೆ ದೇಶಕ್ಕೆ ಅಣ್ಣಾ ತಂಡದ ಚಟುವಟಿಕೆಗಳನ್ನು ಅವರ ನಿದ್ದೆ, ಕೆಮ್ಮು, ಆಕಳಿಕೆಗಳ ಸಮೇತ ಉಣಬಡಿಸುತ್ತಿದೆ. ದೇಶದ ಮುಖ್ಯ ನಗರಗಳಲ್ಲಿ ಹಾಗೂ ಕೆಲ ಪಟ್ಟಣಗಳಲ್ಲಿ ಕೂಡಾ ಸಾವಿರಾರು ಜನರು ಭ್ರಷ್ಟಾಚಾರದ ವಿರುದ್ಧ ಆಂದೋಲನದಲ್ಲಿ ಪಾಲ್ಗೊಳ್ಳುತ್ತಿದ್ದಾರೆ.

ದೇಶದ ಮುಂದೆ ಒಂದೊಂದಾಗಿ ಸ್ಫೋಟವಾದ ಭ್ರಷ್ಟಾಚಾರದ ಪ್ರಕರಣಗಳು, ಮುಖ್ಯವಾಗಿ ದೇಶದ ಕಂಟ್ರೋಲರ್ ಮತ್ತು ಆಡಿಟರ್ ಜನರಲ್ (ಸಿಎಜಿ-ಮಹಾ ಲೇಖಪಾಲ) ರವರು ತಮ್ಮ ವರದಿಯ ಮೂಲಕ ಮುಂದಿಟ್ಟು ಕಾಮನ್‌ವೆಲ್ತ್ ಒಕ್ಕೂಟ ಕ್ರೀಡೆಯ ಹಗರಣ ಮತ್ತು 2ಜಿ ಹಗರಣ ದೇಶದ ಜನತೆಯ ಮುಂದೆ ಬಯಲಿಗೆಳೆಯಲ್ಪಟ್ಟವು. ಈ ಭ್ರಷ್ಟಾಚಾರದ ಬೃಹತ್ ಪ್ರಮಾಣ 70,000 ಕೋಟಿ. ಹೀಗೆ... 1,76,0000 ಕೋಟಿ ರೂ. ಜನತೆಯನ್ನು ಬೆಚ್ಚಿ ಬೀಳಿಸಿದವು. ಜೊತೆಗೆ ಈ ಭ್ರಷ್ಟಾಚಾರದ ವ್ಯಾಪ್ತಿ, ಅದರೊಳಗಾದ ರಾಜಕಾರಣಿ-ಅಧಿಕಾರಿ-ಬಂಡವಾಳಶಾಹಿ ಕಂಪನಿಗಳ ಅಪವಿತ್ರ ಮೈತ್ರಿ, ರಾಡಿಯಾ ಟೇಪ್‌ಗಳು ಹೊರತಂದ, ಮಂತ್ರಿ ಮಂಡಲವನ್ನೇ ನಿರ್ಧರಿಸುವ, ಮಂತ್ರಿಗಳನ್ನೇ ನಿಯಂತ್ರಿಸುವ ಬಂಡವಾಳಶಾಹಿ ಬ್ರೋಕರ್‌ಗಳ (ಅವರಿಗೆ ಲಾಭಿದಾರರೆಂಬ ಸುಧಾರಿತ ಹೆಸರು ಬೇರೆ) ಆಟ, ಅದರಲ್ಲಿ ಪತ್ರಕರ್ತರ ಪಾತ್ರ, ಇವು ಒಂದೊಂದಾಗಿ ತೆರೆದುಕೊಳ್ಳುತ್ತಾ ಹೋದವು. ಪ್ರತಿದಿನವೂ ವಿವಿಧ ಸುದ್ದಿವಾಹಿನಿಗಳು ರಾಜ್ಯ, ಕಲೈನಾರ್ ಟಿವಿ(ಕರುಣಾನಿಧಿ ಕುಟುಂಬದ ಮಾಲಿಕತ್ವದ್ದು) ಕನಿಮೊಳಿ, ವಿವಿಧ ಕಂಪನಿಗಳು ಅವುಗಳಿಂದ ರಾಜ, ಕನಿಮೊಳಿಗೆ ಸಂಬಂಧಿಸಿದ ಕಂಪನಿಗಳಿಗೆ ಹಣ ಹರಿದ ಪರಿ, ಅನಿಲ್ ಅಂಬಾನಿಯ ಕಂಪನಿ, ರತನ್‌ಟಾಟಾಗಳ ಕಂಪನಿ, ಇತರ ಅನೇಕ ಕಂಪನಿಗಳು ಮತ್ತು ಅವುಗಳು 2 ಜಿ ಯಲ್ಲಿ ಪಡೆದ ದುರ್ಲಾಭಗಳ ಬಗ್ಗೆ ಚರ್ಚೆಯಾಗುತ್ತಾ ಹೋದವು. ಸುದ್ದಿವಾಹಿನಿಗಳು ಒಂದರೊಡನೊಂದು ಸ್ಪರ್ಧಿಸಿ ತನಿಖಾ ವರದಿಗಳ ಮೂಲಕ ಹೊಸ ಮಾಹಿತಿ, ದಾಖಲೆಗಳನ್ನು ಪ್ರಕಟಿಸುತ್ತಿದ್ದವು. 2ಜಿ ಹಗರಣಗಳ ಜೊತೆಗೆ ಕಾಮನ್‌ವೆಲ್ತ್ ಕ್ರೀಡೆಗಳಲ್ಲಿ ಹಣ ದೋಚಿದ ಪರಿ ಅದರಲ್ಲಿಯೂ ವಿವಿಧ ಕಂಪನಿಗಳ ಪಾತ್ರ, ಕಂಪನಿಗಳ ಮತ್ತು ಸುರೇಶ್ ಕಲ್ಮಾಡಿ ಮತ್ತು ಸಹಚರರು ದೋಚಿದ ಹಣದ ಬಗ್ಗೆ ಮಾಹಿತಿಗಳು ಪ್ರಕಟಗೊಂಡವು.

1,76,000 ಕೋಟಿ ಹಗರಣ ಸಾಲದೆಂಬಂತೆ 2 ಲಕ್ಷ ಕೋಟಿ ರೂ.ಗಳ ಹಗರಣ ನೇರವಾಗಿ ಪ್ರಧಾನಮಂತ್ರಿಯ ಖಾತೆ - ಬಾಹ್ಯಾಕಾಶ ತಂತ್ರಜ್ಞಾನಕ್ಕೆ ಸಂಬಂಧಿಸಿದ್ದು ಹೊರಗೆಬಂತು. ಯಾವುದೋ ಅಮೆರಿಕದ ಕಂಪನಿಗೆ 2 ಲಕ್ಷ ಕೋಟಿ ಬೆಲೆಯ ಉಪಗ್ರಹದ ತಂತ್ರಜ್ಞಾನವನ್ನು ಸರಿ ಸುಮಾರು ಮುಫತ್ತಾಗಿ ಮಾರಿದ ಪ್ರಕರಣ ದೇಶದ ಜನರನ್ನು ಇನ್ನಷ್ಟು ಬೆಚ್ಚಿಬೀಳಿಸಿತು.

ಇವುಗಳ ಜೊತೆಗೆ ಮಹಾರಾಷ್ಟ್ರದ ಆದರ್ಶ ಗೃಹ ನಿರ್ಮಾಣ ಸಂಘದ ಹಗರಣ, ಕರ್ನಾಟಕದ ಗಣಿ ಹಗರಣ, ಭೂ ಹಗರಣಗಳು, ಜಾರ್ಖಂಡ್ ಮಾಜಿ ಮುಖ್ಯಮಂತ್ರಿ ಮಧು ಕೋಡಾರವರ ಸಾವಿರಾರು ಕೋಟಿ ರೂ.ಗಳ ಹಗರಣ ಇವುಗಳಲ್ಲಿ ದುರ್ಲಾಭ ಪಡೆದುಕೊಂಡ ಬಂಡವಾಳಶಾಹಿ ಪಕ್ಷದ ರಾಜಕಾರಣಿಗಳು, ಅಧಿಕಾರಿಗಳು ಅದರ ವಿವರಗಳು ಕೇಂದ್ರ ಸರ್ಕಾರದ ಹಗರಣಗಳ ಮೇಲೆ ಜನರನ್ನು ಕಂಗೆಡಿಸಿದವು.

ಹೀಗೆ ಸಿಎಜಿ ಯ ಪ್ರಧಾನ ಪಾತ್ರದೊಂದಿಗೆ ಸುದ್ದಿವಾಹಿನಿ ಹಾಗೂ ಪತ್ರಿಕೆಗಳ ಪಾತ್ರ ಭ್ರಷ್ಟಾಚಾರದ ಬಗ್ಗೆ ಚಿಂತಿಸಲು, ಗಮನಕೇಂದ್ರೀಕರಿಸಲು ವಾತಾವರಣ ಕಲ್ಪಿಸಿದವು. ಜನಸಾಮಾನ್ಯರು ತಮ್ಮ ಜೀವಮಾನದಲ್ಲಿ ಅನುದಿನವೂ ಎದುರಿಸುವ ಭ್ರಷ್ಟಾಚಾರದ ಬಗ್ಗೆ, ಅದರ ಸಂಕಟಗಳ ಬಗ್ಗೆ ಚಿಂತಿಸಲಾರಂಭಿಸಿದರು. ಬೆಲೆ ಏರಿಕೆ, ಪೆಟ್ರೋಲ್ ಬೆಲೆ ಏರಿಕೆ, ನಿವೇಶನಗಳ ಬೆಲೆ, ಗೃಹ ನಿರ್ಮಾಣದ ವೆಚ್ಚ ಗಗನ ಮುಖಿ ಏರಿಕೆ, ಶಿಕ್ಷಣದಲ್ಲಿ ಫೀಸು, ಡೊನೇಷನ್, ಕ್ಯಾಪಿಟೇಷನ್‌ಗಳ ತೀವ್ರ ಏರಿಕೆ, ಉದ್ಯೋಗಕ್ಕಾಗಿ ಬೃಹತ್ ಪ್ರಮಾಣದ ಲಂಚ, ಆಸ್ಪತ್ರೆಗಳ ಏರಿದ ವೆಚ್ಚ ಇವು ಸಂಪಾದನೆಗೆ ಕನ್ನ ಹಾಕುವುದರ ಜೊತೆ ಲಂಚವೂ ಸೇರಿರುವುದರ ವಿರುದ್ಧ ಜನರಲ್ಲಿ ಅತೃಪ್ತಿ, ಅಸಮಾಧಾನ ಬೆಳೆಯತೊಡಗಿತು.

ಜನರಲ್ಲಿ ಮೂಡತೊಡಗಿದ್ದ ಈ ಅತೃಪ್ತಿ, ಅಸಮಾಧಾನಗಳು ಈ ಹಗರಣಗಳ ಪ್ರಮುಖ ಲಾಭ ಪಡೆದ ಬಂಡವಾಳಶಾಹಿ ಕಂಪನಿಗಳು-ಬಂಡವಾಳಶಾಹಿ ರಾಜಕೀಯ ಪಕ್ಷಗಳ ಅಧಿಕಾರಸ್ತ ರಾಜಕಾರಣಿಗಳು - ಅವರ ಕೈಯಾಳುಗಳಾದ ದೊಡ್ಡ ಅಧಿಕಾರಿಗಳು ಈ ವಲಯದ ಸುತ್ತ ಕೇಂದ್ರೀಕರಣಗೊಳ್ಳಲಾರಂಭಿಸಿದ್ದವು. ಇದು ಈ ಬಂಡವಾಳಶಾಹಿ ಕಂಪನಿಗಳ ಮಾಲೀಕರಿಗೆ ಗಾಬರಿಯನ್ನುಂಟು ಮಾಡತೊಡಗಿತು. ತಾವೇ ಜಾಹೀರಾತುಗಳನ್ನು ಕೊಟ್ಟು ಸಾಕುತ್ತಿರುವ ಟಿವಿ ವಾಹಿನಿಗಳು ತಮ್ಮನ್ನೇ ಕಚ್ಚಲಾರಂಭಿಸಿತ್ತು. ಇದಕ್ಕೆ ದಾರಿಯೇನು ಎಂದು ಚಿಂತಿಸಲಾರಂಭಿಸಿದ್ದರು. ಆಗ ಅವತಾರವಾದದ್ದು ಅಣ್ಣಾ ಹಜಾರೆ ಮತ್ತು ಅವರ ತಂಡ ಮತ್ತು ಅವರ -ಲೋಕಪಾಲ್ ಮಸೂದೆ.

ಲೋಕಪಾಲ್ ಮಸೂದೆ ಭ್ರಷ್ಟಾಚಾರ ನಿಯಂತ್ರಣದ ಒಂದು ಮುಖ್ಯ ಸಾಧನವಾಗುತ್ತದೆ ಎಂಬುದರಲ್ಲಿ ಸಂಶಯವಿಲ್ಲ. ಆದರೆ ಲೋಕಪಾಲ್ ಮಸೂದೆಯ ಹಿಂದೆ ಅಣಿನೆರೆದಿದ್ದು ಭ್ರಷ್ಟಾಚಾರದಿಂದ ಬಾಧಿತರಾದ ಮಧ್ಯಮ, ಮೇಲ್ ಮಧ್ಯಮ ವರ್ಗ. ಅವರ ಅಗತ್ಯಗಳಿಗೆ , ಹಿತಗಳಿಗೆ ಅನುಗುಣವಾಗಿ ಲೋಕಪಾಲ್ ಮಸೂದೆಯ ಮುಖ್ಯ ಧ್ಯೇಯ ಅಣ್ಣಾಹಜಾರೆ ತಂಡದ ಘೋಷಣೆ, ಭಾಷಣಗಳು ರೂಪುಗೊಂಡವು. ಮಧ್ಯಮ ವರ್ಗದ ಮುಖ್ಯ ಗುರಿ ಲಂಚ ತೆಗೆದುಕೊಳ್ಳುವವರು ಲಂಚ ಕೊಡುವವರಲ್ಲ!. ಏಕೆಂದರೆ ಅವರೇ ಸ್ವತಃ ಲಂಚ ಕೊಡುವವರು. ಅವರ ದೃಷ್ಟಿಯಲ್ಲಿ ಲಂಚ ಕೊಡುವವರು ಭ್ರಷ್ಟಾಚಾರದಿಂದ ಹಾನಿಗೊಳಗಾಗುವವರೇ ಹೊರತು ಫಲಾನುಭವಿಗಳಲ್ಲ. ಆದ್ದರಿಂದ ಶಿಕ್ಷೆಯಾಗಬೇಕಾದ್ದು ಭ್ರಷ್ಟಾಚಾರದ ಫಲಾನುಭವಿಗಳಾದ ಅಧಿಕಾರಿಗಳು ಮತ್ತು ರಾಜಕಾರಣಿಗಳಿಗೆ ಹೊರತು ಲಂಚ ಕೊಡುವವರಲ್ಲ.

ಅಣ್ಣಾ ಹಜಾರೆ, ಅವರ ಮಧ್ಯಮವರ್ಗದ ಹಿಂಬಾಲಕರ ಈ ನಿಲುವು ಬೃಹತ್ ಹಗರಣಗಳ ಪ್ರಧಾನ ಫಲಾನುಭವಿಗಳಾದ ದೊಡ್ಡ ಬಂಡವಾಳಶಾಹಿಗಳಿಗೆ ಬಹಳ ಸಂತೋಷವಾಯಿತು. ಏಕೆಂದರೆ ಲಂಚ ಕೊಡುವವರ ಮೇಲೆ ಬೃಹತ್ ಭ್ರಷ್ಟಾಚಾರದ ಬೃಹತ್ ಫಲಾನುಭವಿಗಳು ತಮ್ಮ ಮೇಲೆ ಭ್ರಷ್ಟಾಚಾರ ವಿರೋಧಿ ಅತೃಪ್ತಿಯ ಗಮನ ತಪ್ಪಿದ್ದು ಬೀಸುವ ದೊಣ್ಣೆಯಿಂದ ತಪ್ಪಿಸಿಕೊಳ್ಳುವ ಅವಕಾಶ ಒದಗಿಸಿತು.

ಬೃಹತ್ ಬಂಡವಾಳಶಾಹಿ ಜಾಹೀರಾತುಗಳಿಂದ ಪೋಷಿತರಾದ ಅನೇಕಬಾರಿ ಬೃಹತ್ ಬಂಡವಾಳಶಾಹಿಗಳೇ ಮಾಲೀಕರಾದ ಸುದ್ದಿ ಮಾಧ್ಯಮಗಳು ಅದರಲ್ಲಿಯೂ ಇಂಗ್ಲೀಷ್ ಸುದ್ದಿ ಮಾಧ್ಯಮಗಳು ಕೂಡಾ ಹಿಗ್ಗಿ ಹಿರೇಕಾಯಿಯಾದವು. ಈ ಅವಕಾಶವನ್ನು ಬಿಗಿದಪ್ಪಿಕೊಂಡವು. 24x7 ಹಗಲೂರಾತ್ರಿ ದೇಶವ್ಯಾಪಿ ತುತ್ತೂರಿಯೂದಿ ಅಣ್ಣಾ ಹಜಾರೆ ಹಿಂಬಾಲಕರ ಸಂಖ್ಯೆಯನ್ನು ಹಿಗ್ಗಿಸಲು ಶ್ರಮಿಸಿದವು. ಹೀಗೆ ಅಣ್ಣಾ ಹಜಾರೆ ತಂಡ ಮತ್ತು ಸುದ್ದಿವಾಹಿನಿಗಳ ಹಿತಗಳು ಒಂದಾದವು.

ಮಧ್ಯಮ ವರ್ಗ ಮತ್ತು ಬೃಹತ್ ಲೋಕಪಾಲ

ಅಣ್ಣಾ ತಂಡದ ಜನ ಲೋಕಪಾಲ ಮಸೂದೆಯಲ್ಲಿ ಬೃಹತ್ ಲೋಕಪಾಲ್‌ನ ಸೃಷ್ಟಿಗಾಗಿ ಹಠ ಹಿಡಿದಿರುವುದು ಕೂಡಾ ಈ ಮಧ್ಯಮವರ್ಗದ ಸಂಕುಚಿತ ದೃಷ್ಟಿಕೋನದ ಮಿತಿಗಳನ್ನು ತೋರಿಸುತ್ತದೆ. ಇಲ್ಲಿನ ವ್ಯಂಗ್ಯವೆಂದರೆ ಈ ಮಿತಿಯೇ ಲೋಕಪಾಲ್‌ಗಾಗಿ ಚಳುವಳಿಯ ಅತಿಗೆ ಕಾರಣವಾಗಿರುವುದು. ಅದರ ಚಳುವಳಿಯ ಸ್ವರೂಪವೇ ಲೋಕಪಾಲರ ವಿರೂಪಕ್ಕೆ ಕಾರಣವಾಗಿರುವುದು. .

ಇಂದು ಕೇಂದ್ರ ಸರ್ಕಾರಕ್ಕೂ ಅಣ್ಣಾ ತಂಡಕ್ಕೂ ಉಳಿದಿರುವ ಮೂರು ಮುಖ್ಯ ವ್ಯತ್ಯಾಸಗಳನ್ನು ಗಮನಿಸೋಣ.

ಒಂದು - ಸರ್ಕಾರದ ಕೆಳಹಂತಗಳ ಅಧಿಕಾರಿ ಹಾಗೂ ಸಿಬ್ಬಂದಿಗಳೂ ಲೋಕಪಾಲ ವ್ಯಾಪಿಗೆ ಒಳಪಡಬೇಕು.

ಎರಡು - ಪ್ರತಿ ಇಲಾಖೆಗೂ ನಾಗರಿಕ ಸನ್ನದ್ದು - ನಾಗರಿಕರಿಗೆ ಆ ಇಲಾಖೆ ಯಾವ ಸೇವೆಗಳನ್ನು ಯಾವ ಕಾಲ ಮಿತಿಯಲ್ಲಿ ಸಲ್ಲಿಸಬೇಕು ಎಂಬ ಪಟ್ಟಿಯನ್ನು ಜನರ ಮುಂದಿಡಬೇಕು. ಆ ಸನ್ನದಿಗೆ ಯಾವುದೇ ಅಧಿಕಾರಿ ವಿರುದ್ಧವಾಗಿ ನಡೆದರೆ ಅವನಿಗೆ ಶಿಕ್ಷೆ ನೀಡುವ ಅಧಿಕಾರ

ಪುಟ 10ಕ್ಕೆ


ಉದಾರೀಕರಣ ನೀತಿಗಳು ಭ್ರಷ್ಟಾಚಾರದ ಚಿಲುಮೆ

ಜನ ಲೋಕಪಾಲ ಮಸೂದೆಯ ಅಂಶಗಳು ಹೇಗೆ ನೌಕರ ವಿರೋಧಿ? ಭ್ರಷ್ಟಾಚಾರ ನಿವಾರಣೆಯ ಪ್ರಶ್ನೆಯಲ್ಲಿ ಗಮನಿಸಬೇಕಾದ ಇನ್ನಷ್ಟು ಮಹತ್ವ ಸಂಗತಿಗಳೇನು? ಓದಿ ಸೀತಾರಾಮ ಯೆಚೂರಿಯವರ ರಾಜ್ಯಸಭೆಯ ಭಾಷಣ.

ಸೀತಾರಾಂ ಯೆಚೂರಿ : ಗೌರವಾನ್ವಿತ ಸಭಾಧ್ಯಕ್ಷರೆ, ಮೊಟ್ಟಮೊದಲನೆಯದಾಗಿ ಕಾರ್ಯಕಲಾಪಗಳ ಪಟ್ಟಿಯನ್ನು ಬದಲಾಯಿಸಿ ಈ ವಿಷಯವನ್ನು ಚರ್ಚೆಗೆ ನಾವು ತೆಗೆದುಕೊಂಡಿರುವುದಕ್ಕೆ ಸಭೆಗೆ ಮತ್ತು ಸರ್ಕಾರಕ್ಕೆ ಧನ್ಯವಾದಗಳು. ತಮಿಳುನಾಡಿನ ನನ್ನ ಗೌರವಾನ್ವಿತ ಸಹೋದ್ಯೋಗಿಗಳಲ್ಲಿ ಒಂದು ನಿವೇದನೆ, ಶ್ರೀಲಂಕಾದ ತಮಿಳರ ವಿಷಯ ಕೇವಲ ತಮಿಳರ ಮತ್ತು ತಮಿಳುನಾಡಿನವರ ಸಮಸ್ಯೆಯಲ್ಲ, ಅದರ ಬಗ್ಗೆ ನಮಗೆಲ್ಲರಿಗೂ ಅಷ್ಟೇ ಕಾಳಜಿ ಇದೆ, ಹಾಗಾಗಿ ನಾಳೆ ಆ ವಿಷಯವನ್ನು ಮನಃಪೂರ್ವಕವಾಗಿ ಚರ್ಚೆಗೆ ತೆಗೆದುಕೊಳ್ಳೋಣ.

ಮಾನ್ಯರೆ, ನಾವಿಂದು ಈ ವಿಷಯವನ್ನು ಒಂದು ನಿರ್ದಿಷ್ಟ ಹಿನ್ನೆಲೆಯಲ್ಲಿ ಚರ್ಚೆ ಮಾಡುತ್ತಿದ್ದೇವೆ. ಆದ್ದರಿಂದ ನಾವಿಲ್ಲಿ ಆ ವಿಷಯದ ಎರಡು ಆಯಾಮಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾಗಿದೆ. ಒಂದು ಈ ಕ್ಷಣದ ತುರ್ತು ಮತ್ತೊಂದು ವ್ಯಾಪಕವಾಗಿ ಹರಡಿರುವ ಭ್ರಷ್ಟಾಚಾರದ ಪಿಡುಗನ್ನು ನಿಭಾಯಿಸವುದು. ಇಲ್ಲಿಯವರೆಗೆ ಆದ ಚರ್ಚೆಯಲ್ಲಿ ನಾವೆಲ್ಲರೂ ಒಂದು ಸ್ಪಷ್ಟ ಸರ್ವಾನುಮತದ ನಿಲುವಿಗೆ ಬಂದಿದ್ದೇವೆ: ಭ್ರಷ್ಟಾಚಾರವೆಂಬ ಈ ಹಾನಿಕಾರಕ ಭಯಂಕರ ಕ್ಯಾನ್ಸರ್ ರೋಗವನ್ನು ನಮ್ಮ ದೇಶದಿಂದ ನಿರ್ಮೂಲನೆ ಮಾಡಬೇಕೆನ್ನುವುದು. ಆದ್ದರಿಂದ ಪರಸ್ಪರ ಕೆಸರೆರಚಾಟದಲ್ಲಿ ತೊಡಗದೆ ಈ ವಿಷಯವನ್ನು ವಿಶಾಲ ಅರ್ಥದಲ್ಲಿ ಗಂಭೀರವಾಗಿ ಕೈಗೆತ್ತಿಕೊಂಡಿರುವುದು ಒಳ್ಳೆಯದು ಮತ್ತು ಅದಕ್ಕೆ ನನ್ನ ಮೆಚ್ಚುಗೆ ವ್ಯಕ್ತಪಡಿಸುತ್ತೇನೆ. ಆದರೆ ಈ ಕ್ಷಣದ ತುರ್ತನ್ನು ನಾವು ಮರೆಯಬಾರದು. ಭ್ರಷ್ಟಾಚಾರ ಭಾರತದ ಸನಾತನ ಪರಂಪರೆ ಎಂಬುದನ್ನೂ ನಾವು ಕಡೆಗಣಿಸುವ ಹಾಗಿಲ್ಲ. ಅದೊಂದು ಸನಾತನ ಶಾಪವೊಂದೇ ಅಲ್ಲ, ಅದು ಸನಾತನ ಪರಂಪರೆ ಕೂಡ.

ಮಾನ್ಯರೆ, ನಾವು ಶಾಲೆಯಲ್ಲಿದ್ದಾಗ ಒಂದು ಕತೆ ಹೇಳುತ್ತಿದ್ದರು. ತನ್ನ ಪ್ರಜೆಗಳ ನೈತಿಕತೆಯನ್ನು ಪರೀಕ್ಷಿಸಲು ಅಲ್ಲರೂ ಹಾಲು ತರಬೇಕೆಂದು ರಾಜ ಆಜ್ಞಾಪಿಸಿದ. ಲೋಟಗಳಲ್ಲಿ ತಂದ ಹಾಲನ್ನೆಲ್ಲಾ ಅರಮನೆಯಲ್ಲಿಟ್ಟಿದ್ದ ದೊಡ್ಡ ಹಂಡೆಯೊಂದರಲ್ಲಿ ಸುರಿಯಬೇಕೆಂದು ಹೇಳಿದ. ಪ್ರತಿಯೊಂದು ಮನೆಯವರೂ, ತಾವೊಬ್ಬರು ಮಾತ್ರ ಹಾಲಿನ ಬದಲು ನೀರನ್ನು ಸುರಿದರೆ ಬೇರೆಯವರು ತಂದು ಸುರಿದ ಹಾಲಿನ ಜತೆ ತಮ್ಮ ನೀರು ಬೆರೆಯುವುದರಿಂದ ಯಾರಿಗೂ ಗೊತ್ತಾಗುವುದಿಲ್ಲ ಎಂದು ಭಾವಿಸಿದರು. ಕೊನೆಯಲ್ಲಿ ರಾಜ ಆ ಹಂಡೆಯನ್ನು ತೆಗೆದು ನೋಡಿದರೆ ಅಲ್ಲಿದ್ದದ್ದು ಬರೀ ನೀರೇ ಹೊರತು ಹಾಲಾಗಿರಲಿಲ್ಲ. ಅನೈತಿಕವಾಗಿ ಅಥವಾ ತರವಲ್ಲದ ರೀತಿಯಲ್ಲಿ ಹಣ ಮಾಡುವ ಪವೃತ್ತಿ ಪರಂಪರಾಗತವಾಗಿ ಬಂದದ್ದು. ಆದ್ದರಿಂದ, ಭ್ರಷ್ಟಾಚಾರದ ವಿರುದ್ಧದ ನಮ್ಮ ಹೋರಾಟ ದೃಢ ಸಂಕಲ್ಪದ್ದಾಗಿರಬೇಕು ಹಾಗೂ ನಿರಂತರವಾಗಿರಬೇಕು. ಅದನ್ನು ಒಂದು ಕಾನೂನಿನಿಂದ ಅಥವಾ ಒಂದು ಆಡಳಿತಾತ್ಮಕ ಕ್ರಮದಿಂದ ಮಾಡಲು ಸಾಧ್ಯವಿಲ್ಲ. ನಮ್ಮ ಒಟ್ಟು ಸಮಾಜದ ನೈತಿಕ ಪ್ರಜ್ಞೆಯ ಪ್ರಶ್ನೆ ಅದು. ಆ ನಿಟ್ಟಿನಲ್ಲಿ, ಸಂವಿಧಾನದ ರಕ್ಷಕರಾದ ನಾವು, ಶಾಸನ ಮಾಡಬೇಕಾದ ನಾವು ಒಂದು ಪ್ರಮುಖ ಪಾತ್ರ ವಹಿಸಬೇಕಾಗಿದೆ. ಇದನ್ನು ನಮ್ಮ ಮನಸ್ಸಿನಲ್ಲಿ ಇಟ್ಟುಕೊಂಡು ಈ ಭ್ರಷ್ಟಾಚಾರದ ಪ್ರಶ್ನೆಯನ್ನು ನಾವು ಚರ್ಚಿಸಬೇಕು.



ಇನ್ನು ನಾವು ಚರ್ಚೆ ಮಾಡುತ್ತಿರುವ ಸಂದರ್ಭ: ಹೊರಗಡೆ ಬೀದಿಗಳಲ್ಲಿ ನಡೆಯುತ್ತಿರುವ ವಿದ್ಯಮಾನಗಳು ಪ್ರಜಾಪ್ರಭುತ್ವಕ್ಕೆ ಒಳ್ಳೆಯದಲ್ಲ. ಅನೇಕ ವಿಷಯಗಳನ್ನು ಎತ್ತಲಾಗಿದೆ. ಜನರು ಉದ್ರೇಕಗೊಂಡಿದ್ದಾರೆ. ಅದನ್ನು ನಾವು ಗುರುತಿಸಬೇಕು. ಅದು ನಾವು ಗಮನಿಸಬೇಕಾದ ಮೊಟ್ಟಮೊದಲ ಪ್ರಶ್ನೆ. ಇತ್ತೀಚಿನ ದಿನಗಳಲ್ಲಿ ಸತತವಾಗಿ ಹೊರಬಂದ ಅನೇಕ ಹಗರಣಗಳ ವಿರುದ್ಧ ಜನ ವ್ಯಕ್ತಪಡಿಸುತ್ತಿರುವ ಕೋಪ ಮತ್ತು ಆಕ್ರೋಶ ಅಲ್ಲಿ ಎದ್ದು ಕಾಣುತ್ತಿದೆ.

ಉನ್ನತ ಸ್ಥಾನಗಳಲ್ಲಿನ ಭ್ರಷ್ಟಾಚಾರದ ಬಗ್ಗೆ ಜನ ರೋಸಿಹೋಗಿದ್ದಾರೆ. ಈ ಪ್ರಶ್ನೆಯನ್ನು ನಾವೆತ್ತಿಕೊಳ್ಳಬೇಕು. ಹೌದು ಅನೇಕ ಸಲಹೆಗಳು ಬಂದಿವೆ. ಲೋಕಪಾಲ್ ಮಸೂದೆಯ ಹಲವಾರು ಕರಡುಗಳು ಬಂದಿವೆ. ಆ ಸದನದಲ್ಲಿ ಸಚಿವ ಸಂಪುಟದ ಕರಡನ್ನು ಸ್ಥಾಯೀಸಮಿತಿಗೆ ಒಪ್ಪಿಸಲಾಗಿದೆ. ಹಲವು ಪ್ರಸ್ತಾಪಗಳು ಬಂದಿವೆ. ಆದರೆ, ನಮ್ಮನ್ನು ಕೇಳಿದರೆ ನಾವು ಸ್ಪಷ್ಟವಾಗಿ ಹೇಳಲು ಬಯಸುವುದೇನೆಂದರೆ ಸ್ಥಾಯೀಸಮಿತಿಗೆ ಕಳಿಸಿರುವ ಸಂಪುಟದ ಕರಡು ಯಾವ ರೀತಿಯಲ್ಲೂ ಸಮರ್ಪಕವಾಗಿಲ್ಲ.

ಅದನ್ನು ಬಲಪಡಿಸಬೇಕು. ಒಂದು ಪ್ರಬಲವಾದ ಲೋಕಪಾಲ ಸಂಸ್ಥೆಯನ್ನು ತರಬೇಕು. ಅದಕ್ಕಾಗಿ ಸಾಂಸದಿಕ ವಿಧಾನಗಳ ಮೂಲಕ ಏನು ಬದಲಾವಣೆ ಮಾಡಬಹುದೆಂಬುದನ್ನು ನಾವು ಸಲಹೆ ನೀಡಬಯಸುತ್ತೇವೆ. ಈಗಾಗಲೇ ಸರ್ಕಾರ ಮಂಡಿಸಿರುವ ಕರಡು ಮಸೂದೆಯನ್ನು ಪುನರ್ಪರಿಶೀಲಿಸಬೇಕು ಮತ್ತು ಜನ ಲೋಕಪಾಲ್ ಮಸೂದೆಯಲ್ಲಿನ ಕೆಲವು ಅಂಶಗಳನ್ನು ಸೇರಿಸಬೇಕು ಹಾಗೂ ಇತರ ಅನೇಕರು ಮಂಡಿಸಿರುವ ತೀರ ಪ್ರಸ್ತುತವಾದ ವಿಷಯಗಳನ್ನು ಅದರಲ್ಲಿ ಸೇರಿಸಲು ಸಾಧ್ಯವಾಗಬೇಕು. ಈಗ ಮಂಡಿಸಿರುವ ಮಸೂದೆಯ ಸ್ಥಾನದಲ್ಲಿ ಬೇರೊಂದು ಸಮಗ್ರವಾದ ಲೋಕಪಾಲ್ ಮಸೂದೆಯನ್ನು ತರಲು ಯಾವ ವಿಧಾನ ಮತ್ತು ಪ್ರಕ್ರಿಯೆಯನ್ನು ಬಳಸಬೇಕೆನ್ನುವುದನ್ನು ಸರ್ಕಾರ ಚಿಂತಿಸಬೇಕು. ಇಂದಿನ ಪರಿಸ್ಥಿತಿ ಅದು. ಈ ವಿಚಾರವನ್ನು ಮನಸ್ಸಿನಲ್ಲಿಟ್ಟುಕೊಂಡು ಈ ಸಭೆ ಒಂದು ಭರವಸೆಯನ್ನು ನೀಡಲು ಸಾಧ್ಯವಾಗಬೇಕು ಮತ್ತು ಈ ಭರವಸೆಯ ಆಧಾರದ ಮೇಲೆ ಅಣ್ಣಾ ಹಜಾರೆಯವರು ತಮ್ಮ ಉಪವಾಸ ಸತ್ಯಾಗ್ರಹವನ್ನು ನಿಲ್ಲಿಸಬೇಕೆಂದು ಮನವಿ ಮಾಡಬೇಕು. ಒಂದು ಪರಿಣಾಮಕಾರಿ ಲೋಕಪಾಲ್ ಮಸೂದೆ ನಮ್ಮ ಗುರಿ. ಸರ್ಕಾರ ಮತ್ತು ಅಣ್ಣಾ ಹಜಾರೆ ಕಡೆಯವರು ಪ್ರತಿಷ್ಠೆ ಮಾಡದೆ ದೇಶದ ಒಟ್ಟಾರೆ ಹಿತದೃಷ್ಟಿಯಿಂದ ಈ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಬೇಕು.

ಇಷ್ಟೆಲ್ಲಾ ಹೇಳಿದ ಮೇಲೆ, ನನಗೆ ಸಂತಸವಾಗುತ್ತಿರುವ ಮತ್ತು ವಿಸ್ಮಯಕಾರಿ ಸಂಗತಿಯೆಂದರೆ ಈ ಸಭೆಯಲ್ಲಿ ಕಲಿಯುವ ಪ್ರಕ್ರಿಯೆ ಪ್ರಾರಂಭವಾಗಿದೆ. ನಾವು ಅನೇಕ ವರ್ಷಗಳಿಂದ ಹೇಳುತ್ತಾ ಬರುತ್ತಿದ್ದ ಮಾತುಗಳನ್ನು ಈ ಸಭೆಯಲ್ಲಿ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ. ಕಾರ್ಪೊರೇಟ್ ವಲಯ ರಾಜಕೀಯ ಪಕ್ಷಗಳಿಗೆ ವಂತಿಗೆ ನೀಡುವ ಬಗೆಗಿನ ಕಾನೂನನ್ನು ಎಡಪಕ್ಷಗಳು ಮಾತ್ರ ವಿರೋಧಿಸಿದರು ಎಂದು ಅವರು ಹೇಳಿದರು. ನಾವು ಈಗಲೂ ಅದನ್ನು ವಿರೋಧಿಸುತ್ತೇವೆ. ಆ ಕಾನೂನು ಬಗ್ಗೆ ಆನಂತರ ಮಾತನಾಡುತ್ತೇನೆ.

ಎಸ್.ಎಸ್.ಅಹ್ಲುವಾಲಿಯ :ಅದು ಕಂಪನಿ ಕಾಯಿದೆ.

ಸೀತಾರಾಂ ಯೆಚೂರಿ : ಹೌದು, ಕಂಪನಿ ಕಾಯಿದೆ. ಆದ್ದರಿಂದ ಈ ಕಲಿಯುವ ಪ್ರಕ್ರಿಯೆ ಪ್ರಾರಂಭವಾಗಿದೆ, ಸಂತೋಷ. ಏನದು ಕಲಿಯುವ ಪ್ರಕ್ರಿಯೆ? ಆ ಕಲಿಯುವ ಪ್ರಕ್ರಿಯೆ ಏನೆಂದರೆ, ನಾವು ಜಾರಿಗೆ ತಂದಿರುವ ನಮ್ಮ ದೇಶದಲ್ಲಿನ ಆರ್ಥಿಕ ಸುಧಾರಣೆಗಳ, ಉದಾರೀಕರಣ ಸುಧಾರಣೆಗಳ ಕಳೆದ ಎರಡು ದಶಕಗಳಲ್ಲಿ ಭ್ರಷ್ಟಾಚಾರ ಮತ್ತು ಲೂಟಿಗೆ ಹೊಸ ಮಾರ್ಗಗಳು ತೆರೆದುಕೊಂಡಿವೆ. ಇವತ್ತು, ಭ್ರಷ್ಟಾಚಾರಕ್ಕೆ ಉದಾರೀಕರಣ ನೀತಿಗಳೇ ಮೂಲ ಕಾರಣ ಎಂದು ಕೆಲವರು ಹೇಳುತ್ತಿದ್ದರೆ ಇನ್ನು ಕೆಲವರು ಭ್ರಷ್ಟಾಚಾರಕ್ಕೂ ಉದಾರೀಕರಣಕ್ಕೂ ಯಾವ ಸಂಬಂಧವೂ ಇಲ್ಲ, ನವ ಪೀಳಿಗೆಯ ಸುಧಾರಣಾ ನೀತಿಯನ್ನು ಜಾರಿಗೆ ತರಬೇಕೆನ್ನುತ್ತಿದ್ದಾರೆ. ನವ ಪೀಳಿಗೆ ಎಂಬ ಶಬ್ದ ಬಳಸುತ್ತಿದ್ದಾರೆ. ಆದರೆ ಗಮನಿಸಬೇಕಾದ ಅಂಶವೇನೆಂದರೆ ಈ ಸುಧಾರಣೆಗಳು ಭ್ರಷ್ಟಾಚಾರದ ಚಿಲುಮೆಯನ್ನೇ ಸೃಷ್ಟಿಮಾಡಿವೆ; ಈ ಭ್ರಷ್ಟಾಚಾರದ ಚಿಲುಮೆಯೇ ಆಡಳಿತಗಾರರು ಬಂಡವಾಳಗಾರರ ಶಾಮೀಲು ಮತ್ತು ಲೂಟಿ, ಚಮಚಾಗಿರಿ. ಇದೇ ಸಂಸತ್ ಸಭೆಯ ನಾಯಕನಾಗಿ ಇಡೀ ಸಭೆಗೆ ಮತ್ತು ದೇಶ ಬಾಧವರಿಗೆ ನಮ್ಮ ಪ್ರಧಾನ ಮಂತ್ರಿಯವರು "ನಮ್ಮ ದೇಶ ಕ್ರೋನಿ ಬಂಡವಾಳವಾದವನ್ನು ಪಡೆಯುವ ಸಾಮರ್ಥ್ಯ ಹೊಂದಿಲ್ಲ." ಎಂದಿದ್ದರು. ಪ್ರಧಾನಿಗಳ ಈ ಮಾತು ದಾಖಲೆಯಾಗಿದೆ. ಆದ್ದರಿಂದ ನಾವು ನಿಭಾಯಿಸಬೇಕಾಗಿರುವುದು ಈ ಭ್ರಷ್ಟಾಚಾರದ ಚಿಲುಮೆಯನ್ನು ಮತ್ತು ಹಗರಣಗಳ ಸರಮಾಲೆಯನ್ನು. ಚಮಚಾ ಬಂಡವಾಳವಾದ ಎಂದರೇನು? ಅನೇಕ ವಿಧಾನಗಳನ್ನು ಬಳಸಿ ಸಾರ್ವಜನಿಕ ಆಸ್ತಿಯನ್ನು ಕೊಳ್ಳೆ ಹೊಡೆಯುವುದನ್ನೇ ಚಮಚಾ ಬಂಡವಾಳವಾದ ಎನ್ನುವುದು. ಇದು ನಮ್ಮ ದೇಶದಲ್ಲಿ ಸಾಂಸ್ಥಿಕ ರೂಪ ತಾಳಿ ಇಡೀ ಸಮಾಜವನ್ನು ವ್ಯಾಪಿಸಿದೆ. ಈಗ ಅನುಕೂಲಕರ ಒಪ್ಪಂದ (ಸ್ವೀಟ್ ಹಾರ್ಟ್ ಡೀಲ್ಸ್) ಗಳಾಗುತ್ತಿವೆ. ನಿಮ್ಮ ಗೆಳೆಯರ ಜತೆಗಿನ ಒಪ್ಪಂದ; ಟೆಂಡರ್‌ಗಳನ್ನೇ ಬದಲಾಯಿಸುವುದು; ಪಿಪಿಪಿ(ಸಾರ್ವಜನಿಕ ಖಾಸಗೀ ಯೋಜನೆಗಳು) ಯೋಜನೆಗಳು ಬಂದಿವೆ; ಈಗ ನೀವು ಹೇಳ್ತಾ ಇದೀರ, ಒಂದು ಪಿ(ಖಾಸಗಿಯವರಿಗೆ)ಗೆ ಆರ್.ಟಿ.ಐ(ಮಾಹಿತಿ ಹಕ್ಕು ಕಾಯಿದೆ) ಅನ್ವಯವಾಗುವುದಿಲ್ಲ ಅಂತ. ಬೆವರಿನ ಹಣದ ಷೇರುಗಳು ಇವೆ; ಕೃಷ್ಣಾ ಗೋದಾವರಿ ಜಲಾನಯನ ಒಪ್ಪಂದದ ರೀತಿಯ ಚಿನ್ನದ ಲೇಪನ ಒಪ್ಪಂದ; ಈ ರೀತಿಯ ಹಲವಾರು ಹೊಸ ಮಾರ್ಗಗಳು ಹಗರಣಗಳಾಗಲು ಕಾರಣವಾಗುತ್ತಿವೆ.

ಕಳೆದ ಒಂದು ವರ್ಷದಲ್ಲಿ ನಮ್ಮ ಗಮನಕ್ಕೆ ಬಂದ ಈ ಹಗರಣಗಳೆಲ್ಲಾ ಒಂದಲ್ಲಾ ಒಂದು ರೀತಿಯಲ್ಲಿ ಗುತ್ತಿಗೆ ನೀಡುವುದು ಅಥವಾ ಷೇರುಗಳನ್ನು ಅಥವಾ ಲೂಟಿಯನ್ನು ಹಂಚಿಕೊಳ್ಳುವ ಪ್ರಕ್ರಿಯೆಗಳಿಗೇ ಸಂಬಂಧಿಸಿದ್ದಾಗಿವೆ. ಇದನ್ನೇ ನಮ್ಮ ಪ್ರಧಾನಿಗಳು

ಪುಟ 10ಕ್ಕೆ

ಟೀಂ ಅಣ್ಣಾ ಮತ್ತು ಭ್ರಷ್ಟಾಚಾರ

ಪುಟ 8 ರಿಂದ

ಲೋಕಪಾಲರಿಗಿರಬೇಕು. ಪ್ರತಿ ನಾಗರಿಕ ಸಲ್ಲಿಸುವ ದೂರನ್ನು ಲೋಕಪಾಲ ಪರಿಶೀಲಿಸಿ ಸಂಬಂಧಪಟ್ಟ ಇಲಾಖೆಗೆ ನಿರ್ದೇಶನ ನೀಡಬೇಕು. ಹೀಗೆ ಲೋಕಪಾಲ ಕುಂದುಕೊರತೆಗಳ ವಿಭಾಗವಾಗಿ ಕೂಡಾ ಕೆಲಸ ಮಾಡಬೇಕು.

ಮೂರು - ಲೋಕಪಾಲ ಮಸೂದೆಯ ಭಾಗವಾಗಿ ಲೋಕಾಯುಕ್ತರನ್ನು ನೇಮಿಸುವ ಕಾಯಿದೆಯೂ ಬರಬೇಕು.

ಮಧ್ಯಮವರ್ಗ ತನ್ನ ಜೀವನದಲ್ಲಿ ಲಂಚ ನೀಡಬೇಕಾಗಿ ಬರುವುದು ಕೆಳಹಂತದ ಸಿಬ್ಬಂದಿ, ಅಧಿಕಾರಿಗಳಿಂದ, ನಾಗರಿಕ ಸನ್ನದು ಅವರಿಗೆ ಬೇಕಾದ ಸೇವೆಗಳನ್ನು ಪಡೆಯಲು ಸುಲಭ ಮಾರ್ಗ ಎಂಬುದು ಅವರ ಅಗತ್ಯ. ರಾಜ್ಯ ಸರ್ಕಾರದ ಸಿಬ್ಬಂದಿ, ಅಧಿಕಾರಿಗಳು ಕೂಡಾ ಮಧ್ಯಮ ವರ್ಗದಿಂದ ಲಂಚ ಪಡೆಯುವ ದೊಡ್ಡ ವಿಭಾಗ. ಹೀಗಾಗಿ ಲೋಕಾಯುಕ್ತ ನೇಮಕ ಅವರ ಒಂದು ಪ್ರಮುಖ ಅಗತ್ಯ.

ಈ ಒತ್ತಾಯಗಳ ಪರಿಣಾಮವೇನು ಎಂಬುದನ್ನು ನೋಡೋಣ. ದೇಶದ ಉದ್ದಗಲಕ್ಕೂ ಹರಡಿರುವ ಕೇಂದ್ರ ಸರ್ಕಾರದ ಎಲ್ಲ ಸಿಬ್ಬಂದಿ, ಎಲ್ಲಾ ಇಲಾಖೆಗಳನ್ನೊಳಗೊಂಡ ಸನ್ನದನ್ನು ಪರಿಶೀಲಿಸಬೇಕಾದರೆ ಲೋಕಪಾಲ ಕೇಂದ್ರ ಸರ್ಕಾರಕ್ಕೆ ಎದುರಾಗಿ ಒಂದು ಪ್ರತಿ ಸರ್ಕಾರವೇ ಆಗಬೇಕಾಗುತ್ತದೆ. ದೇಶದ ಯಾವುದೇ ಮೂಲೆಯಲ್ಲಿ ಒಬ್ಬ ನಾಗರಿಕ ತನಗೆ ಬಿಪಿಎಲ್ ಕಾರ್ಡ್ ಸಿಗಲಿಲ್ಲವೆಂದು ಅಥವಾ ಸೀಮೆಎಣ್ಣೆ (ಕೆರೋಸಿನ್) ಸಿಗಲ್ಲಿಲ್ಲವೆಂದು, ನೀರು,ವಿದ್ಯುತ್ ಸರಬರಾಜು ಆಗಲಿಲ್ಲವೆಂದು ದೂರು ಸಲ್ಲಿಸಿದರೆ ಅದನ್ನು ಪರಿಶೀಲಿಸಿ ನಿರ್ದೇಶನ ನೀಡಬೇಕಾದರೆ ದೇಶದ ಪ್ರತಿ ತಾಲ್ಲೂಕು, ಹೋಬಳಿಗಳಲ್ಲಿಯೂ ಶಾಖೆಗಳನ್ನು ಸ್ಥಾಪಿಸಿ ತನ್ನದೇ ಆದ ಲಕ್ಷಾಂತರ ಸಿಬ್ಬಂದಿಯ ಬೃಹತ್ ಜಾಲವನ್ನು ಹೊಂದಿದ್ದರೆ ಮಾತ್ರ ಸಾಧ್ಯ. ಇದು ದೊಡ್ಡ ಅಧಿಕಾರ ಶಾಹಿ ಯಂತ್ರವಾಗುತ್ತದೆ. ಆಗ ಅಧಿಕಾರಶಾಹಿ ಯಂತ್ರದ ಎಲ್ಲ ಗುಣಗಳಾದ ವಿಳಂಬ ನೀತಿ, ಲಂಚ ಲೋಕಪಾಲ ಸಂಸ್ಥೆಯಲ್ಲಿಯೂ ಸರ್ವವ್ಯಾಪಿಯಾಗುತ್ತದೆ. ಇದು ಇಂದು ಅನೇಕರು ಮಾಡುತ್ತಿರುವ ಟೀಕೆ.

ಹಾಗೆಂದ ಕೂಡಲೇ ಕೆಳಹಂತದ ಭ್ರಷ್ಟಾಚಾರವನ್ನು ನಿರ್ಲಕ್ಷಿಸಬೇಕು ಎಂದಲ್ಲ. ಸಿಪಿಐ(ಎಂ) ಪಕ್ಷ ಈ ಬಗ್ಗೆ ತನ್ನ ಸ್ಪಷ್ಟ ನಿಲುವನ್ನು ಮುಂದಿಟ್ಟಿದೆ. ಲೋಕಪಾಲ ಮೇಲುಹಂತದ ಬೃಹತ್ ಭ್ರಷ್ಟಾಚಾರದ ತನಿಖೆಗೆ ತನ್ನ ಗಮನ ಕೇಂದ್ರೀಕರಿಸಬೇಕು. ನಾಗರಿಕ ಸನ್ನದು, ಕುಂದುಕೊರತೆಗಳ ಪರಿಶೀಲನೆ, ಕೆಳಹಂತದ ಸಿಬ್ಬಂದಿಗೆ ಬೇರೆಯೇ ವ್ಯವಸ್ಥೆಯನ್ನು ರೂಪಿಸಬೇಕು ಎಂದು. ಏಕೆಂದರೆ ಇಂದು ಬೃಹತ್ ಭ್ರಷ್ಟಾಚಾರದಿಂದ ದೇಶಕ್ಕೆ, ದೇಶದ ಬಡ ಜನತೆಗೆ ಆಗುತ್ತಿರುವ ನಷ್ಟ ಅಪಾರ. ಈ ಕ್ರಮ ಬೃಹತ್ ಭ್ರಷ್ಟಾಚಾರದಿಂದ ದೇಶದ ಬೊಕ್ಕಸಕ್ಕೆ ಆಗುತ್ತಿರುವ ಹಲವಾರು ಲಕ್ಷ ಕೋಟಿ ರೂ.ಗಳ ನಷ್ಟವನ್ನು ತಪ್ಪಿಸುತ್ತದೆ. ದೇಶದ ಸಂಪತ್ತನ್ನು ಉಳಿಸಿ ಇಡೀ ಸಮಾಜದ ಉಪಯೋಗಕ್ಕೆ ದಕ್ಕುವಂತೆ ಮಾಡುತ್ತದೆ.

ಆದರೆ ಮಧ್ಯಮ ವರ್ಗಕ್ಕೆ ಈ ಬಗ್ಗೆ ಗಮನವಿಲ್ಲ. ಈಗಾಗಲೇ ದೇಶದ ಬೊಕ್ಕಸದಿಂದ ಅವರು ಪಡೆಯಬೇಕಾದ ಪ್ರಯೋಜನಗಳನ್ನು ಪಡೆದಿದ್ದಾರೆ, ಪಡೆಯುತ್ತಿದ್ದಾರೆ. ತಮ್ಮ ಮೂಲಭೂತ ಅಗತ್ಯಗಳನ್ನು ಪೂರೈಸಿಕೊಳ್ಳಲು ಬೇಕಾದ ಸಂಪಾದನೆ ಇದೆ. ಆದ್ದರಿಂದ ದೇಶದ ಬೊಕ್ಕಸ ಹಿಗ್ಗಿ ಅದರಿಂದ ಬಡಜನರಿಗೆ ಸಾಮಾಜಿಕ ಕಲ್ಯಾಣ ಕಾರ್ಯಕ್ರಮಗಳು ವಿಸ್ತಾರವಾಗುವುದು ಅವರಿಗೆ ಪ್ರಮುಖವಾಗಿ ಕಾಣುವುದಿಲ್ಲ. ಅವರಿಗೆ ಈಗಾಗಲೇ ಒಳ್ಳೆಯ ಉದ್ಯೋಗವಿದೆ. ಆದ್ದರಿಂದ ಮತ್ತಷ್ಟು ಹೆಚ್ಚು ಉದ್ಯೋಗ ನಿರ್ಮಾಣವಾಗಲು ದೇಶದ ಸಂಪತ್ತನ್ನು ರಕ್ಷಿಸಿಕೊಳ್ಳುವ ಬಜೆಟ್‌ನಿಂದ ಕಾರ್ಯಕ್ರಮ ರೂಪಿಸುವುದರಲ್ಲಿ ಅವರಿಗೆ ಆಸಕ್ತಿಯಿಲ್ಲ.

ಮಧ್ಯಮವರ್ಗ ಮತ್ತು ಖಾಸಗೀಕರಣ

ಇಂದಿನ ಮಧ್ಯಮವರ್ಗ ಬಹುಪಾಲು ಖಾಸಗೀಕರಣದ ತಲೆಮಾರು. ಇವರು ಬಹುಪಾಲು ಖಾಸಗಿ ಶಾಲೆಗಳಲ್ಲಿ, ಕಾನ್ವೆಂಟ್‌ಗಳಲ್ಲಿ ಓದಿ ಸ್ವಲ್ಪಮಟ್ಟಿಗೆ ಮೆರಿಟ್‌ನಿಂದ ಬಹುಪಾಲು ಡೊನೇಷನ್, ಕ್ಯಾಪಿಟೇಷನ್‌ಗಳನ್ನು ನೀಡಿ ಉನ್ನತ ಶಿಕ್ಷಣ ಮತ್ತು ಅದರ ಫಲವಾಗಿ ಉತ್ತಮ ಉದ್ಯೋಗ ಪಡೆದವರು. ಖಾಸಗಿ ಆಸ್ಪತ್ರೆಗಳೇ ಇವರ ಆರೋಗ್ಯ ರಕ್ಷಕ. ಸಂಚಾರಕ್ಕೆ ಅವರದೇ ಉತ್ತಮದರ್ಜೆಯ ಖಾಸಗಿ ಕಾರು ಮತ್ತಿತರೆ ವಾಹನಗಳು. ವಸ್ತುಗಳನ್ನು ಕೊಳ್ಳಲು ರೇಷನ್ ಡಿಪೋಗಳಿಗೆ ಹೋಗುವವರೇ ಇವರು? ಅದೂ ವೈಭವೋಪೇತ ಮಾಲ್ ಮತ್ತು ಮಲ್ಟಿಪ್ಲೆಕ್ಸ್‌ಗಳಿರುವಾಗ. ಹೀಗಾಗಿ ಅವರು ಖಾಸಗೀಕರಣ, ಜಾಗತೀಕರಣದ ಫಲಾನುಭವಿಗಳು. ಅದನ್ನು ಮೆಚ್ಚಿ, ಹಾಡಿ, ಹೊಗಳುವವರು ಅವರೇ.

ಈ ಕಾರಣವಾಗಿ ಅಣ್ಣಾ ತಂಡ ಭಾರತ ಕಂಡ ಬೃಹತ್ ಭ್ರಷ್ಟಾಚಾರದ ಹಗರಣಗಳಲ್ಲಿ ಲಂಚಕೊಟ್ಟು ಲಾಭ ಪಡೆದ ಬಂಡವಾಳಶಾಹಿಗಳ ಬಗ್ಗೆ ಮಾತ್ರವಲ್ಲ ಭ್ರಷ್ಟಾಚಾರದ ಮೂಲ ಗಂಗೋತ್ರಿಯಾದ ಖಾಸಗೀಕರಣ, ಜಾಗತಿಕರಣ ಗಳ ಬಗ್ಗೆ ಕೂಡಾ ಮಾತನಾಡುವುದಿಲ್ಲ. ಇದು ನಮ್ಮ ದೇಶದ ಬಂಡವಾಳಶಾಹಿಗಳಿಗೂ ಹಿತ. ಆದ್ದರಿಂದಲೇ ಎರಡುಗಂಟೆಗಳ ರಜೆ ಕೊಟ್ಟು ಸಾಫ್ಟ್‌ವೇರ್ ಉದ್ಯಮಿಗಳನ್ನು ಹೋರಾಟಕ್ಕೆ ಕಳುಹಿಸುತ್ತಾರೆ. ವಾರದ ರಜೆ ಬದಲಾಯಿಸಿ ಕೊಡುತ್ತಾರೆ.

ಹೀಗೆ ಭ್ರಷ್ಟಾಚಾರದ ಬಗ್ಗೆ ಅಣ್ಣಾ ತಂಡದ ಸಂಕುಚಿತ ದೃಷ್ಟಿಕೋನ, ಅವರ ಹಿಂದೆ ಮಧ್ಯಮ ವರ್ಗವನ್ನು ಅಣಿನೆರೆಸುವ ಸಾಧನವಾಗಿದೆ. ಹಾಗೆಯೇ ಮಧ್ಯಮವರ್ಗವನ್ನು ತೃಪ್ತಿಪಡಿಸುವುದಕ್ಕಾಗಿ ಲೋಕಪಾಲವನ್ನು ಒಂದು ಬೃಹತ್ ಅಧಿಕಾರಶಾಹಿ ಯಂತ್ರವಾಗಬೇಕೆಂದು ಬಯಸುತ್ತಾರೆ. ಹಾಗೆಯೇ ಖಾಸಗೀಕರಣ, ಜಾಗತೀಕರಣದ ಬಗ್ಗೆ ಧ್ವನಿ ಎತ್ತುತ್ತಿಲ್ಲ. ಆದರೆ ಭಾರತದ ದುಡಿಯುವ ಜನ ಕಾರ್ಮಿಕ ವರ್ಗ, ಕೂಲಿಕಾರರು, ರೈತರು ಲಂಚ ಕೊಡಲಾರದವರು ಮತ್ತು ಅದರಿಂದಾಗಿ ಎಲ್ಲಾ ಕಳೆದುಕೊಳ್ಳುವವರು ಅವರ ದೃಷ್ಟಿಕೋನದಿಂದ ಸಮಗ್ರವಾದ ಭ್ರಷ್ಟಾಚಾರವಿರೋಧಿ ಕ್ರಮಗಳಿಗಾಗಿ ಹೋರಾಡಬೇಕಾಗಿದೆ. ○

ಭ್ರಷ್ಟಾಚಾರ ಕುರಿತು ರಾಜ್ಯಸಭೆಯಲ್ಲಿ

ಪುಟ 9 ರಿಂದ

'ನಮ್ಮ ದೇಶಕ್ಕೆ ಅದನ್ನು ತಡೆದುಕೊಳ್ಳುವ ಶಕ್ತಿ ಇಲ್ಲ' ಅಂತ ಹೇಳಿದ್ದು. ನಮಗೆ ತಡೆದುಕೊಳ್ಳುವ ಶಕ್ತಿ ಇಲ್ಲ ಎಂದ ಮೇಲೆ ಈ ಸುಧಾರಣಾ ಪ್ರಕ್ರಿಯೆಗಳ ಬಗ್ಗೆ ಗಂಭೀರ ಮರುಚಿಂತನೆ ಮಾಡಬೇಕು ಮತ್ತು ಅದನ್ನು ಸರಿಪಡಿಸುವುದು ಹೇಗೆ ಎಂದು ಯೋಚಿಸಬೇಕು. ಸಾರ್ವಜನಿಕ ಸೇವೆಗಳ ಮೇಲಿನ ಗಧಾಪ್ರಹಾರದ ಪ್ರಶ್ನೆ ಸುಧಾರಣ ಪ್ರಕ್ರಿಯೆಯ ಎರಡನೇ ಅಂಶ. ಶೈಕ್ಷಣಿಕ ಕ್ಷೇತ್ರದಲ್ಲಿ, ಆರೋಗ್ಯದ ಕ್ಷೇತ್ರದಲ್ಲಿ, ನೀರಿನ ಮೇಲೆ ಹಾಗೂ ಇನ್ನಿತರ ಸೇವೆಗಳ ಮೇಲೆ ಹಾಕುತ್ತಿರುವ ಬಳಕೆ ಶುಲ್ಕ-ಯಾವ ಸೇವೆಗಳನ್ನು ಸರ್ಕಾರ ಒದಗಿಸಬೇಕಾಗಿತ್ತೋ-ಅಂತಹ ಸೇವೆಗಳನ್ನು ಖಾಸಗಿಯವರಿಗೆ ವಹಿಸುತ್ತಿರುವುದು; ಇವೆಲ್ಲವೂ ಭ್ರಷ್ಟಾಚಾರದ ಮೂಲಗಳು. ಈ 'ನಂಟು' ಅಥವಾ 'ಕೊಳ್ಳೆಹೊಡೆಯುವವರ ಕೂಟ'ದ ಬಗ್ಗೆ ನಾವು ಗಂಭೀರ ಚಿಂತನೆ ನಡೆಸಬೇಕು. ಈ 'ನಂಟು' ಹೊಸತೇನಲ್ಲ. ಆದರೆ ಇದರಲ್ಲಿ ಹೊಸ ಅಂಶಗಳು ಸೇರಿಕೊಂಡಿವೆ. ಭ್ರಷ್ಟ ರಾಜಕಾರಣಿಗಳು, ಭ್ರಷ್ಟ ಅಧಿಕಾರಿಗಳು, ಭ್ರಷ್ಟ ದೊಡ್ಡ ಬಂಡವಾಳಗಾರರು ಮತ್ತು ಈಗ ಒಂದು ವಿಭಾಗದ ಖಾಸಗಿ ಮಾಧ್ಯಮ ಕೂಡ ಈ ಕೂಟದಲ್ಲಿವೆ. 'ಪೈಡ್ ನ್ಯೂಸ್' ಹಗರಣ ಒಂದು ವಿಭಾಗದ ಖಾಸಗಿ ಮಾಧ್ಯಮ ಈ ಕೂಟದ ಭಾಗವಾಗಿರುವುದನ್ನು ಹೊರಹಾಕಿದೆ.


ಈ 'ನಂಟನ್ನು' ನಾವೀಗ ನಿಭಾಯಿಸಬೇಕಾಗಿದೆ. ಇದನ್ನು ಎದುರಿಸಬೇಕಾದರೆ ನಾವೆಲ್ಲರೂ ಒಂದುಗೂಡಿ ಯಾವ ಸಾಂಸ್ಥಿಕ ಸುಧಾರಣೆಗಳನ್ನು ತಂದರೆ ಇವನ್ನೆಲ್ಲಾ ನಿಭಾಯಿಸಲು ಸಾಧ್ಯ ಎಂಬುದನ್ನು ಕಂಡುಹಿಡಿಯಬೇಕಿದೆ......

......ವಿರೋಧ ಪಕ್ಷದ ನಾಯಕರು ಹೇಳಿದ್ದನ್ನು ನಾನು ಒಪ್ಪುತ್ತೇನೆ. ಭೂಮಿಯ ಒಳಗಡೆಯೂ ಹಣ ಮಾಡಬಹುದು; ನೀರಿನೊಳಗೂ ಹಣ ಮಾಡಬಹುದು; ಆಕಾಶದಲ್ಲೂ ಹಣ ಮಾಡಬಹುದು. ಇವೆಲ್ಲವೂ ಹೊಸ ದಾರಿಗಳು ಈಗ ತೆರೆಯಲ್ಪಟ್ಟಿವೆ. ಇವನ್ನೆಲ್ಲಾ ತಡೆಗಟ್ಟಬೇಕಾದರೆ ಈ ಸಭೆ, ಸಂಸತ್ತು ಭ್ರಷ್ಟಾಚಾರದ ವ್ಯಾಖ್ಯಾನವನ್ನೇ ಆಮೂಲಾಗ್ರವಾಗಿ ಬದಲಾಯಿಸುವ ಅಗತ್ಯವಿದೆ.

(ಮುಂದುವರಿಯುವುದು)

ಅನು. : ಟಿ. ಸುರೇಂದ್ರ ರಾವ್

ಕಾರ್ಮಿಕ ವರ್ಗದ ನಾಯಕ, ಕ್ರಾಂತಿಕಾರಿ ಕಾಂ: ಎಂ.ಕೆ. ಪಂಧೆ ಇನ್ನಿಲ್ಲ




ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯರೂ, ದೇಶದ ಅತ್ಯಂತ ಹಿರಿಯ ಕಾರ್ಮಿಕ ನಾಯಕರೂ ಆಗಿದ್ದ ಕಾಮ್ರೇಡ್ ಪಂಧೆಯವರು ಹೃದಯಾಘಾತದಿಂದ ಆಗಸ್ಟ್ 20ರಂದು ನವದೆಹಲಿಯ ರಾಮಮನೋಹರ ಲೋಹಿಯಾ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದರು. ಅವರಿಗೆ 86 ವರ್ಷ ವಯಸ್ಸಾಗಿತ್ತು.

ಸ್ವಾತಂತ್ರ್ಯ ಸಂಗ್ರಾಮದಲ್ಲಿ ವಿದ್ಯಾರ್ಥಿ ದಿಶೆಯಿಂದಲೇ ಚಳುವಳಿಗೆ ಧುಮುಕಿದ ಅವರು 1943ರಲ್ಲಿ ಮಹಾರಾಷ್ಟ್ರ ಸೊಲ್ಲಾಪುರ ವಿದ್ಯಾರ್ಥಿ ಸಂಘಟನೆ ಕಾರ್ಯದರ್ಶಿಯಾದರು. ಅದೇ ವರ್ಷ ಕಮ್ಯುನಿಸ್ಟ್ ಪಕ್ಷದ ಸ್ನಾತಕೋತ್ತರ ಪದವಿ ಮುಗಿಸಿದ ಬಳಿಕ ಗೋಖಲೆ ಸಂಸ್ಥೆಯಲ್ಲಿ ಡಾಕ್ಟರೇಟ್ ಪಡೆದರು.

ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡ ಪಂಧೆಯವರು ಕಾರ್ಮಿಕ ಚಳುವಳಿಗೆ ನೀಡಿದ ಕೊಡುಗೆ ಅನನ್ಯವಾದುದು. 1960ರಲ್ಲಿ AITUC ಕಾರ್ಯದರ್ಶಿಯಾಗಿ, ಮುಂದೆ CITU ವಿನ ಪ್ರಮುಖ ನಾಯಕನಾಗಿ, 1990ರಲ್ಲಿ ಸಿಐಟಿಯುವಿನ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಮಿಕ ವರ್ಗದ ಸಮರಶೀಲ ಚಳುವಳಿಗೆ ಅತ್ಯಮೂಲ್ಯ ಕೊಡುಗೆ ನೀಡಿದ್ದಾರೆ.

ಮಾರ್ಕ್ಸ್‌ವಾದ-ಲೆನಿನ್‌ವಾದಕ್ಕೆ ಬದ್ಧವಾಗಿ, ದುಡಿವ ವರ್ಗದ ಆಂದೋಲನವನ್ನು ಸಮಾಜವಾದದ ಸಿದ್ಧಾಂತದೊಂದಿಗೆ ಉನ್ನತ ರಾಜಕೀಯ ಪ್ರಜ್ಞೆಯನ್ನು ಹೊಂದಬೇಕೆಂದು ಅದಕ್ಕಾಗಿ ಶ್ರಮಿಸಿದರು. ಅವರು ಕಾರ್ಮಿಕವರ್ಗದ ನೈಜ ಅಂತರರಾಷ್ಟ್ರೀಯವಾದಿ.

1964ರಲ್ಲಿ ಪರಿಷ್ಕರಣವಾದ ವಿರುದ್ಧ ದೃಢ ನಿಲುವು ತಳೆದು ಹೋರಾಡಿದವರು. ಈ ಕ್ರಾಂತಿಕಾರಿ ನಾಲ್ಕು ವರ್ಷ ಆರು ತಿಂಗಳು ಭೂಗತವಾಗಿ ಹೋರಾಟ ನಡೆಸಬೇಕಾಗಿ ಬಂದಿತ್ತು. 1978ರಲ್ಲಿ ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯರಾಗಿ, 1998ರಲ್ಲಿ ಪಿ.ಬಿ.ಸದಸ್ಯರಾಗಿ ಚುನಾಯಿತರಾದರು. ಅವರ ಅಗಲಿಕೆ ಕ್ರಾಂತಿಕಾರಿ ಚಳುವಳಿಗೆ, ದುಡಿವ ವರ್ಗದ ಆಂದೋಲನಕ್ಕೆ ತುಂಬಲಾರದ ನಷ್ಟವೆಂದು ಸಿಪಿಐ(ಎಂ) ತಿಳಿಸಿದೆ. ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿದೆ. ಕುಟುಂಬಕ್ಕೂ ಸಾಂತ್ವನ ಹೇಳಿದೆ.



ಆರ್.ರಾಮಕೃಷ್ಣ

ಬಿಜೆಪಿ ದರ್ಬಾರ್

ಬಿಜೆಪಿ ಸರ್ಕಾರದಲ್ಲಿ ಸಚಿವ 'ರತ್ನ' ಗಳು

ಅಂತೂ ಇಂತೂ ಕರ್ನಾಟಕ ರಾಜ್ಯಕ್ಕೊಂದು ಸಚಿವ ಸಂಪುಟ ಬಂದೇ ಬಿಟ್ಟಿತು. ಮೊದಲ ಹಂತದ ಸಂಪುಟ ರಚನೆಯಲ್ಲಿ ಗೌಡರು 21 ಜನರಿಗೆ ಸಚಿವರಾಗಿ ಪಟ್ಟ ಏರಲು ಅವಕಾಶ ನೀಡಿದರು. ಆಮೇಲೆ ಮತ್ತೆ ಐದು ಜನ ಶಾಸಕರಿಗೆ ಮಂತ್ರಿ ಮಹೋದಯರಾಗುವ ಅವಕಾಶ ಬಂತು. ಯಡಿಯೂರಪ್ಪನವರ ಬಣ, ಅನಂತ್ ಕುಮಾರ್ ಬಣ ಈ ಎರಡೂ ಬಣಗಳನ್ನೂ ಕೂಡಿಸಿಕೊಂಡು ಬಿಕ್ಕಟ್ಟು ಇನ್ನಷ್ಟು ಉಲ್ಬಣ ಆಗದಂತೆ ಹಗ್ಗದ ಮೇಲೆ ಸರ್ಕಸ್ ನಡೆಸಬೇಕಾದ 'ಆನಂದ' ನಮ್ಮ ಸದಾನಂದ ಗೌಡರ ಪಾಲಿನದು. ಈ 'ಸದಾನಂದ ಸರ್ಕಸ್' ಇನ್ನು ಎಷ್ಟು ದಿನ ನಡೆಯುತ್ತದೆಯೋ ಕಾದು ನೋಡಬೇಕಿದೆ. ಆದರೆ ಸದಾನಂದ ಗೌಡರು ಒಂದು ವಿಷಯದಲ್ಲಿ ಖಂಡಿತ ಹೆಮ್ಮೆಯಿಂದ ಬೀಗಬಹುದು.

ಎಂಥೆಂಥಾ ಶಾಸಕ ರತ್ನಗಳು ತಮ್ಮ ಸಚಿವ ಸಂಪುಟದಲ್ಲಿ 'ಶೋಭಾಯಮಾನ' ವಾಗಿ ಬೆಳಗುತ್ತಿವೆ.

ತನ್ನ ಮತ್ತು ತನ್ನ ಮಕ್ಕಳ ಮೇಲೆ ಗಣಿ ಅದಿರು ಲೂಟಿಯ ಗುರುತರ ಆರೋಪ ಇದ್ದರೂ ವರದಿ ನೀಡಿದ ಲೋಕಾಯುಕ್ತರ ಮೇಲೆಯೇ ಎರಗಿ ಬೀಳುವ, ಪ್ರಚಂಡ ವಾಗ್ದಾಳಿ ನಡೆಸುವ ಅಪ್ರತಿಮ ಶೂರ ವಿ. ಸೋಮಣ್ಣ ಮೊದಲ ಕಂತಿನಲ್ಲೇ ಸಚಿವರಾಗಿ ಹೋದರು. ಇದೀಗ ಪರಪ್ಪನ ಅಗ್ರಹಾರ ಜೈಲಿನಲ್ಲಿ ಕಂಬಿ ಎಣಿಸುತ್ತಿರುವ ಬಿಜೆಪಿಯ 'ಕಟ್ಟಾ'ಳು ಗಳಿಂದ 'ಸಾಲ' ಪಡೆದು ಕೊಡಗಿನಲ್ಲಿ 177 ಎಕರೆ ಕಾಫಿ ತೋಟ ಖರೀದಿಸಿದ 'ವ್ಯವಹಾರ' ಸ್ಥಿ ಶೋಭಕ್ಕನವರು.

ಇನ್ನು ಎರಡನೇ ಹಂತದಲ್ಲಿ ಸಚಿವರಾದವರಲ್ಲೇನು ಕಡಿಮೆ ಪ್ರತಿಭಾವಂತರಿಲ್ಲ. ಬಾರಿ ಘಟನಾನುಘಟಿಗಳೇ ಇದ್ದಾರೆ.

ಯಡಿಯೂರಪ್ಪನವರ ಮಂತ್ರಿ ಮಂಡಳದಲ್ಲಿ ಮೆರೆದ ಹಲವಾರು ವಿಶೇಷ ಪ್ರತಿಭೆಗಳಿಗೆ ಹಾಗೆ ಹಾಗೆ ಸದಾನಂದರ ಸಂಪುಟದಲ್ಲಿಯೂ ಸ್ಥಾನ ದೊರೆತಿದೆ.

ಮುಧೋಳ ತಾಲ್ಲೂಕಿನಲ್ಲಿನ ತನ್ನ ವಿಜಯಲಕ್ಷ್ಮೀ ಸೀಮೆಂಟ್ಸ್ ಕಾರ್ಖಾನೆಯ ವಿದ್ಯುತ್ ಬಿಲ್ ವಂಚನೆಯ ಮೂಲಕ ವಿದ್ಯುತ್ ಕಂಪನಿಗೆ ಅಂದರೆ ಸರ್ಕಾರಕ್ಕೆ ಕೊಟ್ಯಾಂತರ ರೂಪಾಯಿಗಳ ಪಂಗನಾಮ ಹಾಕಿದ ಖ್ಯಾತಿಯ ಬೃಹತ್ ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ ಅದೇ ಖಾತೆಗೆ ಮತ್ತೆ ಅವತರಿಸಿದ್ದಾರೆ. ಇನ್ನು ಹೊಸದಾಗಿ ಸಚಿವರಾಗಿರುವ ಸಿ.ಪಿ.ಯೋಗೀಶ್ವರ್ ಜನ ಸಾಮಾನ್ಯರಿಗೆ ದಯಪಾಲಿಸಿರುವ ಯೋಗಾಯೋಗ, ವರ್ತೂರು ಪ್ರಕಾಶ್‌ರ ಪ್ರಭಾವಳಿಗಳ ಬಗೆಗೆ ಸ್ವತ: ಅವರವರ ಕ್ಷೇತ್ರಗಳ ಜನತೆಯನ್ನೇ ಕೇಳಬೇಕು.

ರಾಮನಗರ ಜಿಲ್ಲೆಯ.....ನಲ್ಲಿ ಜಗತ್ತಿನಲ್ಲೇ ಅತಿ ಎತ್ತರದ ಗೋಪುರ ಕಟ್ಟಲಾಗುತ್ತದೆ, ಅದ್ಭುತವಾದ ವ್ಯವಸ್ಥಿತ ಮೆಗಾಸಿಟಿ ಎಂಬ ಟೌನ್‌ಶಿಪ್ ನಿರ್ಮಿಸಿ ನಿವೇಶನ ನೀಡಲಾಗುತ್ತದೆ ಎಂಬೆಲ್ಲಾ ವಚನವನ್ನಿತ್ತು ಜನರಿಂದ ಸಂಗ್ರಹಿಸಲಾಗಿರುವ ಕೋಟಿ ಕೋಟಿ ರೂಪಾಯಿಗಳು ಏನಾದವೋ ಸಿ.ಪಿ. ಯೋಗಿಶ್ವರ್‌ರವರಿಗೆ ಮರೆತು ಹೋಗಿದೆ. ಪಾಪ ಎಷ್ಟೋ ವರ್ಷವಾಯಿತು. ಅಲ್ಲದೇ ಆದರೆ ಹಣ ತೆತ್ತ ಬಡಪಾಯಿಗಳು ಅದನ್ನು ಮರೆಯುವಂತಿಲ್ಲವಲ್ಲ ! ಅವರಲ್ಲೋ ಯಾರೋ ಕೊಂಚ ಗಣಿತ ಬಲ್ಲ ಬುದ್ದಿವಂತರು ಈ



ಸಂಬಂಧದ ಮೊತ್ತ 37 ಕೋಟಿ ರೂಪಾಯಿಗಳು ಎಂದು ಲೆಕ್ಕ ಹಾಕಿದ್ದಾರಂತೆ. ಎಂಥಾ ಪ್ರತಿಭೆ ಬಿಜೆಪಿ ಸರ್ಕಾರದಲ್ಲಿ. ಶಾಸಕರು ಎಲ್ಲಾ ಮರೆತು ತಣ್ಣಗೆ ಸಚಿವರಾಗಿ ಬಿಡುತ್ತಾರೆ.

ಇನ್ನು ಬೆಂಗಳೂರಿನ ವರ್ತೂರು ಭಾಗದಲ್ಲಿ ಕೋಲಾರದ ಕಡೆಯಲ್ಲಿ ಪ್ರಕಾಶ್‌ರ ದೈತ್ಯ ಪ್ರತಿಭೆಗಳ ಬಗೆಗೆ ಕೇಳಿಯೇ ಆನಂದಿಸಬೇಕು. ನಿಮ್ಮದೇನಾದರೂ ಆ ಭಾಗದಲ್ಲಿ ತುಂಡು ನಿವೇಶನವೋ, ತುಂಡು ಭೂಮಿಯೋ ಇದ್ದರೆ ಮಾತ್ರ ನೀವು ಕೊಂಚ ಜಾಗೃತರಾಗಿರಬೇಕು. ನೀವು ಖಾಲಿ ಕೈಯವರಾದರೆ ಏನೂ ಚಿಂತೆ ಇಲ್ಲ. ಪ್ರಕಾಶ್‌ರ ರಿಯೆಲ್ ಎಸ್ಟೇಟ್ ದಂದೆಯ ಸೊಗಸನ್ನು ನೋಡಿ ಸವಿಯಬಹುದು.

★

ಜಾತಿವಾದಿ ಸರ್ಕಾರ

ಸದಾನಂದ ಗೌಡರು ಮುಖ್ಯಮಂತ್ರಿ ಯಾಗಿದ್ದರೂ ತಾವು ಸೂಪರ್ ಸಿ.ಎಂ. ಆಗಿ ಗೌಡರ ಮೇಲೆ ಸವಾರಿ ಮಾಡುತ್ತಿರುವುದನ್ನು ಸ್ವತ: ಯಡಿಯೂರಪ್ಪ ಮತ್ತು ಸದಾನಂದಗೌಡರು ಇಬ್ಬರೂ ಗುಟ್ಟಾಗೇನೂ ಇಟ್ಟಿಲ್ಲ. ಬಹಿರಂಗವಾಗಿ ಸಾರುತ್ತಲೇ ಇದ್ದಾರೆ. ಇರಲಿ. ಗೌಡರ ಮಂತ್ರಿ ಮಂಡಳದಲ್ಲಿನ ಜಾತಿ ಸಮೀಕರಣ ನೋಡಿ.

ಆಗಸ್ಟ್ 8, 2011 ರಂದು ರಚನೆಯಾದ 22 ಜನರ ಮಂತ್ರಿ ಮಂಡಳದಲ್ಲಿ ಲಿಂಗಾಯತರ ಸಂಖ್ಯೆ 10. ಒಕ್ಕಲಿಗರ ಸಂಖ್ಯೆ 4, ಬ್ರಾಹ್ಮಣರು 4, ಹಿಂದುಳಿದವರು 1, ಪರಿಶಿಷ್ಟ ಜಾತಿ, ಪಂಗಡದವರು 3. ಸಚಿವ ಖಾತೆ ದೊರೆಯಬೇಕಾದರೆ ಒಂದು– ದಕ್ಷತೆ, ಜನಪರ ಬದ್ಧತೆ ಅಯ್ಕೆಗೆ ಮಾನದಂಡವಾಗಬೇಕು. ಜೊತೆಗೆ ಸಮಾಜದ ವಿವಿಧ ಸಮುದಾಯಗಳ ಪ್ರಾತಿನಿಧ್ಯಕ್ಕೆ ಅವಕಾಶವಾಗುವಂತೆ, ಅದರಲ್ಲೂ ಶೋಷಿತ, ಅವಕಾಶವಂಚಿತ ಸಮುದಾಯಗಳಿಗೆ ಹೆಚ್ಚು ಆದ್ಯತೆ ನೀಡಿ ಅವರನ್ನು ಒಳಗೊಳ್ಳಬೇಕು ಎಂಬುದು ಒಂದು ಪ್ರಜಾಸತ್ತಾತ್ಮಕ ಆಶಯ. (ಯಡಿಯೂರಪ್ಪ ಸಂಪುಟದಲ್ಲಿ ಸಚಿವರಾಗಿದ್ದವರೇ ಬಹುತೇಕ ಈ ಸರ್ಕಾರದಲ್ಲಿ ತೂರಿಕೊಂಡು ಬಹುತೇಕ ಅವೇ ಅವೇ ಖಾತೆಗಳನ್ನು ಪಡೆದುಕೊಳ್ಳುತ್ತಿದ್ದಾರೆ.) ಈ ಸರ್ಕಾರದಲ್ಲಿ ಈ ಯಾವುದಾದರೂ ನಿಮಗೆ ಕಾಣುತ್ತಿದೆಯೆ ?

★

ರೆಡ್ಡಿ ಸಹೋದರರರು ಒಳಕ್ಕೆ ??!!

ಲೋಕಾಯುಕ್ತ ವರದಿಯಲ್ಲಿ ಗಣಿ ಅಕ್ರಮಗಳ ಆರೋಪ ಹೊರಿಸಲಾಗಿದ್ದರೂ ಸೋಮಣ್ಣ ಸಚಿವ ಸಂಪುಟ ಸೇರುವುದಾದರೆ ನಾವು ಏಕೆ ಸೇರಬಾರದು ಅಂತ ನಮ್ಮ ಜನಾರ್ಧನ ರೆಡ್ಡಿ, ಕರುಣಾಕರರೆಡ್ಡಿ ಸಹೋದರರು ಸಚಿವ ಸಂಪುಟದೊಳಕ್ಕೆ ತೂರಿಕೊಳ್ಳಲು ಚಂಡಿ ಹಿಡಿದು ಕೂತಿದ್ದಾರೆ ಎಂಬುದು ರಹಸ್ಯವಾಗೇನೂ ಉಳಿದಿಲ್ಲ. ಆದರೆ ರಾಜ್ಯದ ಮತ್ತು ದೇಶದ ಜನ ಬೆಚ್ಚಿ ಬೀಳುವಂತಹ ಸುದ್ದಿ ಏನೆಂದರೆ ಬಿಜೆಪಿ ಹೈಕಮಾಂಡ್ ಮಟ್ಟದಲ್ಲೂ, ರಾಜ್ಯ ಮಟ್ಟದಲ್ಲೂ ಅವರ ಪರವಾಗಿ ಬಿಜೆಪಿಯ ಮುಖಂಡರು ಪುಂಗಿ ಊದುತ್ತಿರುವುದು.

ಬಿಜೆಪಿ ರಾಜ್ಯ ಅಧ್ಯಕ್ಷರಾದ ಕೆ.ಎಸ್. ಈಶ್ವರಪ್ಪ ಸಚಿವ ಸಂಪಟದಲ್ಲಿ ಮೂರು ಸ್ಥಾನಗಳು ರೆಡ್ಡಿ ಸಹೋದರರಿಗೆ ಮೀಸಲು ಅಂದಿದ್ದಾರೆ. ಆಪರೇಷನ್ ಕಮಲದಲ್ಲಿ ಶಾಸಕರ ಖರೀದಿಗೆ, ನೀತಿಗೆಟ್ಟ ಚುನಾವಣಾ ವಿಧಾನದ ಅಕ್ರಮ ವೆಚ್ಚಗಳು ಮುಂತಾದವುಗಳಿಗೆ ಗಣಿ ಲೂಟಿಕೋರ ರೆಡ್ಡಿಗಳ ನೆರವು ಪಡೆದುಕೊಂಡ ಬಿಜೆಪಿಗೆ ಅವರನ್ನು ಮತ್ತೆ ಸಚಿವರನ್ನು ಮಾಡುವ ಉಮೇದು ಇರಬಹುದು. ಆದರೆ ಲೋಕಾಯುಕ್ತ ವರದಿಯು ಗಣಿಲೂಟಿಯ ಘೋರ ಪಾತಕಗಳನ್ನು ಎಳೆಎಳೆಯಾಗಿ ಬಿಡಿಸಿಟ್ಟು ಬ್ರಹ್ಮಾಂಡ ಅಕ್ರಮ, ಭ್ರಷ್ಟಾಚಾರಗಳ ವಿರುದ್ಧ ಕಠಿಣ ಕ್ರಮ ವಹಿಸಬೇಕು ಅಂತ ಶಿಫಾರಸ್ಸು ಮಾಡಿರುವಾಗ ಇಂಥಾ ಮಾತನ್ನಾಡುತ್ತಿದ್ದಾರಲ್ಲ...ಬಿಜೆಪಿ ಪಕ್ಷದ ನೈತಿಕತೆ ಯಾವ ಪ್ರಪಾತ–ಪಾತಾಳವನ್ನು ಮುಟ್ಟಿದೆ...ಜನ ಸಮ್ಮನ್ನು ಸುಮ್ಮನೆ ಬಿಟ್ಟಾರೆಯೇ ಅನ್ನುವ ಭಯವೂ ಇವರಲ್ಲಿ ಇಲ್ಲವಲ್ಲ ??!!

ಮತ್ತೆ ಯಡಿಯೂರಪ್ಪನ್ ಸಿ.ಎಂ.?

ರೆಡ್ಡಿ ಸಹೋದರರೇನು ಹಲವಾರು ಡಿನೋಟಿಫಿಷನ್ ಅಕ್ರಮಗಳು, ಭೂಗಳ್ಳತನ, ಕೋಟಿ ಕೋಟಿ ಲಂಚ ಸ್ವೀಕಾರದ ಪ್ರಕರಣಗಳಲ್ಲಿ ಸಿಲುಕಿಕೊಂಡು ಕೋರ್ಟಿನಿಂದ ಕೋರ್ಟಿಗೆ ನಿರೀಕ್ಷಣಾ ಜಾಮಿನು ಅರ್ಜಿ ಹಿಡಿದುಕೊಂಡು ತಿರುಗುತ್ತಿರುವ ಮಾನಗೇಡಿ ಯಡಿಯೂರಪ್ಪನೂ ತಾನು ಮತ್ತೆ ಆರೆ ತಿಂಗಳಲ್ಲಿ ವಾಪಸ್ ಬರುತ್ತೇನೆ, ನಾನೇ ಮತ್ತೆ ಮುಖ್ಯಮಂತ್ರಿ ಅಂತ ಎರಡು ಬೆರಳು ಮೇಲೆತ್ತಿ ವಿಜಯದ ಸಂಕೇತ ತೋರುತ್ತಿದ್ದರೂ ಅದಕ್ಕ ಅವಕಾಶ ಇಲ್ಲ ಅಂತ ಯಾವ ಹೈಕಮಾಂಡ್ ಕೂಡ ಹೇಳುತ್ತಿಲ್ಲ. ಅಂದರೆ ಹೈಕಮಾಂಡ್ ಯಾವ ಹು ನುಂಗಾಟಗಳಲ್ಲಿ ಭಾಗಿಯಾಗಿದೆ ಅಂತ ಯೋಚಿಸಿ.

★

ವರಮಹಾಲಕ್ಷಿ ಹಬ್ಬ

ರೆಡ್ಡಿ ಸಹೋದರರ ಮಹಾ ತಾಯಿ ಸುಷುಮವ್ವ ಈ ಸಾರಿ ಬಳ್ಳಾರಿಗೆ ಪ್ರತಿವರ್ಷದಂತೆ ವರಮಹಾಲಕ್ಷ್ಮಿ ಹಬ್ಬಕ್ಕೆ ಬರಲಿಲ್ಲ. ಪಾಪ ಯಾರ್ಯಾರೋ ಏನೇನೋ ಕಾರಣ ಹೇಳುತ್ತಿದ್ದಾರೆ. ಕಾರಣ ಏನೇ ಇರಲಿ, 'ಅಮ್ಮ' ಬರಲಿಲ್ಲ. ಆದರೆ ರೆಡ್ಡಿ ಸಹೋದರರ ಸಹವಾಸವನ್ನು ಬಿಜೆಪಿ ಬಿಟ್ಟು ಬಿಟ್ಟಿದೆ, ಬಿಜೆಪಿ ರೆಡ್ಡಿ ಸಹೋದರರನ್ನು ದೂರ ಮಾಡಿ ಬಿಟ್ಟಿದೆ ಎಂದೇನು ಯಾವ ಬಿಜೆಪಿಗರೂ ದುಖಿ:ಸುವಂತಿಲ್ಲ. ಯಾಕೆಂದರೆ ಬಿಜೆಪಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ನಿತಿನ್ ಗಡ್ಕರಿ ಸ್ವತ: ತಾವೇ ವರಮಹಾಲಕ್ಷ್ಮಿ ಹಬ್ಬಕ್ಕೆ ಬಂದರು. ರೆಡ್ಡಿ ಸಹೋದರರನ್ನು ಕೊಂಡಾಡಿದರು. ರೆಡ್ಡಿಗಳು ಕೊಟ್ಟ ಪುಟ್ಟ ಕಾಣಿಕೆಗಳನ್ನು ಹೊತ್ತುಕೊಂಡು ಹೋದರು.

ಆ ಪುಟ್ಟ ಕಾಣಿಕೆ ಏನು ಗೊತ್ತಾ ? ಕೇವಲ 40 ಲಕ್ಷ ನಗದು. !ಒಂದು ಚಿನ್ನದ ಕತ್ತಿ. ಒಂದುವರೆ ಕೋಟಿ ರೂಪಾಯಿಗಳ ಬೆಲೆಯ ಒಂದು ಕಾರು. ರೆಡ್ಡಿ ಸಹೋದರರನ್ನು ಹೊಗಳದೇ ಇರಲು ಸಾಧ್ಯವೇ ?


★

ಅಲ್ಪಸಂಖ್ಯಾತರೇ ಇಲ್ಲ

ಮಮತಾಜ್ ಆಲಿ ಖಾನ್ ಅಂತ ಒಬ್ಬರು ಬಿಜೆಪಿ ಸರ್ಕಾರದಲ್ಲಿ ಮಂತ್ರಿಗಳಿದ್ದರು. ವಾಚಕರ ವಾಣಿಯಲ್ಲಿ ಆರೆಸ್ಸೆಸ್ ಭಂಡರಿಗಿಂತಲೂ ಕೊಂಚ ಜೋರಾಗಿಯೇ ಜಾತ್ಯತೀತರು, ಮುಂತಾದವರನ್ನು ಕುಟುಕುತ್ತಾ, ಸಂಘಪರಿವಾರವನ್ನು ಕೊಂಡಾಡುತ್ತಾ ಪತ್ರ ಬರೆದೂ ಬರೆದೂ ಗಳಿಸಿದ್ದ 'ಖ್ಯಾತಿ'ಯಿಂದ ಅವರು ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಾಗ ಮಂತ್ರಿಗಳಾಗಿ ಬಿಟ್ಟರು. ನಾಯಿ ಹಸಿದಿತ್ತು, ಅನ್ನ ಹಳಸಿತ್ತು ಅನ್ನುವಂತೆ ಆಗಿತ್ತು. ಪ್ರಥಮ ಬಾರಿಗೆ ಅಧಿಕಾರಕ್ಕೆ ಬಂದ ಬಿಜೆಪಿಗೆ ಯಾವುದಾದರೂ ಒಂದು ಅಲ್ಪಸಂಖ್ಯಾತ 'ಮುಖ'ವು ಖುರ್ಚಿಯಲ್ಲಿ ಕೂರಿಸಲು ಬೇಕಾಗಿತ್ತು. ಈಗ ಪರಿಸ್ಥಿತಿ ಬದಲಾಗಿದೆ. ಸದಾನಂದರ ಹೊಸ ಮಂತ್ರಿ ಮಂಡಳದಲ್ಲಿ ಯಾವ ಅಲ್ಪಸಂಖ್ಯಾತ ಮುಖದ ಅಗತ್ಯವೂ ಇಲ್ಲ ಹಾಗಾಗಿ ಮಮತಾಜ್ ಆಲಿ ಖಾನರಿಗೆ ಕೋಕ್ ಕೊಡಲಾಗಿದೆ. ❐

ಬೆಂಗಳೂರು ನಗರದ ಹೊರವಲಯದ 12 ಗ್ರಾಮ ವ್ಯಾಪ್ತಿಯ 4043 ಎಕರೆಯ ಜಾಗದಲ್ಲಿ ಕೆಂಪೇಗೌಡಬಡಾವಣೆ ನಿರ್ಮಿಸಲು ಬಿಡಿಎ ಯೋಜಿಸಿತ್ತು. ಈ ವ್ಯಾಪ್ತಿಯ ರೈತರು, ರೆವಿನ್ಯೂ ನಿವೇಶನದಾರರು ತಮ್ಮ ಹಕ್ಕು ಸೂಕ್ತ ಪರಿಹಾರಕ್ಕಾಗಿ ತೀವ್ರ ಚಳು ವಳಿಯನ್ನೇ ನಡೆಸಿದ್ದರು; ಚಳುವಳಿ ಒಂದು ಹಂತದ ಮಹತ್ವದ ವಿಜಯ ಸಾಧಿಸಿದೆ. ಹಲವು ಪ್ರಶ್ನೆ ಗಳು ಬಾಕಿ ಇವೆ. ಈ ಹಿನ್ನೆಲೆಯಲ್ಲಿ

ರಾಜ್ಯದಲ್ಲೇ ಅತ್ಯಧಿಕ ಭೂ ಪರಿಹಾರ - ಹೋರಾಟದ ಫಲ



ನಾಡಪ್ರಭು ಕೆಂಪೇಗೌಡ ಬಡಾವಣೆ ವ್ಯಾಪ್ತಿಯ ರೈತರು ನಿವೇಶನದಾರರ ಬೃಹತ್ ಸಮಾವೇಶ

ಭೂ ಸ್ವಾದೀನ ಪರಿಹಾರ ಘೋಷಣೆಗೆ ಸ್ವಾಗತ, ಬಾಕಿ ಉಳಿದ ಬೇಡಿಕೆಗಳ ಈಡೇರಿಕೆಗೆ ಸೆಪ್ಟೆಂಬರ್ 15ರ ಗಡುವು ಘೋಷಣೆ

ಉದ್ದೇಶಿತ ನಾಡಪ್ರಭು ಕೆಂಪೇಗೌಡ ಬಡಾವಣೆಗಾಗಿನ ಭೂ ಸ್ವಾಧೀನದ ಸಂಬಂಧವಾಗಿ ರೈತರು, ಭೂ ಸ್ವಾಧೀನ ವಿರೋಧಿ ಹೋರಾಟಗಾರರು ಮತ್ತು ಬಿಡಿಎ ಆಯುಕ್ತರೊಂದಿಗೆ ನಡೆದ ಮಾತುಕತೆಗಳ ಫಲವಾಗಿ ಸರ್ಕಾರವು ಆಗಸ್ಟ್ 11, 2011 ರಂದು ಭೂ ಸ್ವಾಧೀನದ ಸಂಬಂಧ ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ಈ ವ್ಯಾಪ್ತಿಯ ಮಂಗನಹಳ್ಳಿ ಜಮೀನಿಗೆ ಎಕರೆಗೆ ಒಂದು ಕೋಟಿ, ಹಾಗೂ ಉಳಿದ 11 ಗ್ರಾಮಗಳಲ್ಲಿ ಎಕರೆಗೆ 80 ಲಕ್ಷ ರೂಪಾಯಿಗಳನ್ನು ಪರಿಹಾರ ಮೊತ್ತವನ್ನು ಹಾಗೂ ಭೂಮಿ ನೀಡಿಕೆಗೆ ಪ್ರೋತ್ಸಾಹಕ ಕ್ರಮವಾಗಿ ರೈತರಿಗೆ ನಿವೇಶನವನ್ನು ನೀಡುವ ಬಗೆಗೆ ಸರ್ಕಾರದ ಅಧಿಸೂಚನೆ ಹೊರಬಿದ್ದಿದ್ದು, ನಗದು ಪರಿಹಾರದ ಬದಲಿಗೆ ಅಭಿವೃದ್ಧಿಪಡಿಸಲಾದ ನಿವೇಶನದಲ್ಲಿ ಶೇ.40ರಷ್ಟು ನಿವೇಶನಗಳನ್ನು ಪಡೆದುಕೊಳ್ಳುವ ಅವಕಾಶವನ್ನು ಒದಗಿಸಲಾಗಿದೆ.

. ಈ ಪ್ರಶ್ನೆಯಲ್ಲಿ ಈ ಪ್ರದೇಶ ವ್ಯಾಪ್ತಿಯ ರೈತರು, ರೆವಿನ್ಯೂ ನಿವೇಶನದಾರರು, ಕೃಷಿ ಕೂಲಿಕಾರರು ಮುಂತಾದವರ ಪರವಾಗಿ ಹಲವು ವರ್ಷಗಳಿಂದ ನಿರಂತರ ಹೋರಾಟ ನಡೆಸುತ್ತಾ ಬರುತ್ತಿರುವ ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್‌ಎಸ್) ಹಾಗೂ ನಾಡಪ್ರಭು ಕೆಂಪೇಗೌಡ ಬಡಾವಣೆ ರೈತರ ಭೂ ಸ್ವಾಧೀನ ವಿರೋಧಿ ಹೋರಾಟ ಸಮಿತಿಗಳು ಸರ್ಕಾರದ ಈ ಪರಿಹಾರ ಮೊತ್ತದ ಪ್ರಕಟಣೆಯನ್ನು ಸ್ವಾಗತಿಸಿವೆ ಮತ್ತು ಈ ಬೇಡಿಕೆಗಳಿಗಾಗಿ ನಡೆದ ಹೋರಾಟದಲ್ಲಿ ಪಾಲ್ಗೊಂಡವರನ್ನು ಅಭಿನಂದಿಸಿವೆ. ಇದು ಹೋರಾಟ ನಿರತ ರೈತರ ಮತ್ತು ನಿವೇಶನದಾರರ ಬೇಡಿಕೆಗಳ ಭಾಗಶಃ ಈಡೇರಿಕೆ ಎಂದು ಪರಿಗಣಿಸಿರುವ ಸಂಘಟನೆಗಳು ರೈತರ ಮತ್ತು ಈ ವ್ಯಾಪ್ತಿಯ ರೆವಿನ್ಯೂ ನಿವೇಶನದಾರರ ಮತ್ತು ಕೃಷಿ ಕೂಲಿಕಾರರ ಇನ್ನೂ ಹಲವು ಬಹುಮುಖ್ಯ ಬೇಡಿಕೆಗಳನ್ನು ಈಡೇರಿಸಿ ಸರ್ಕಾರ ತತ್‌ಕ್ಷಣ ಲಿಖಿತ ಆದೇಶ ಹೊರಡಿಸಬೇಕೆಂದು ಆಗ್ರಹಿಸಿದೆ.

ಈ ಸಂಬಂಧವಾಗಿ ರೈತರ ಮತ್ತು ನಿವೇಶನದಾರರ ಬೃಹತ್ ಸಮಾವೇಶವು ಆಗಸ್ಟ್ 21, 2011ರಂದು ಬೆಂಗಳೂರು ಉತ್ತರ ತಾಲ್ಲೂಕು ವ್ಯಾಪ್ತಿಯ ಕನ್ನಲ್ಲಿ ಗ್ರಾಮದಲ್ಲಿ ನಡೆಯಿತು. ಉದ್ದೇಶಿತ ಬಡಾವಣೆ ವ್ಯಾಪ್ತಿಯ ಗ್ರಾಮಗಳಾದ ಮಂಗನಹಳ್ಳಿ, ಶೀಗೇಹಳ್ಳಿ, ಕನ್ನಲ್ಲಿ, ಕೊಡಿಗೇಹಳ್ಳಿ, ಕೊಮ್ಮಘಟ್ಟ, ಭೀಮನಕುಪ್ಪೆ, ಭೀಮನಕುಪ್ಪೆ, - ಹನುಮಸಾಗರ ಮತ್ತು ಚಳ್ಳಘಟ್ಟ ಗ್ರಾಮಗಳ ನೂರಾರು ರೈತರು ಹಾಗೂ ರೆವಿನ್ಯೂ ನಿವೇಶನದಾರರು ಕೃಷಿ ಕೂಲಿಕಾರರು ಸಮಾವೇಶದಲ್ಲಿ ಪಾಲ್ಗೊಂಡಿದ್ದರು.

ಹೋರಾಟ ಸಮಿತಿಯ ಉಪಾಧ್ಯಕ್ಷರಾದ ಶಾಂತರಾಜು ಅವರು ಅಧ್ಯಕ್ಷತೆ ವಹಿಸಿದ್ದ ಸಭೆಯಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ಸಿ.ಬಯ್ಯಾರೆಡ್ಡಿ, ಹೋರಾಟ ಸಮಿತಿಯ ಮುಖಂಡರಾದ ಕೃಷ್ಣಪ್ಪ, ಚನ್ನಪ್ಪ, ಅಧ್ಯಕ್ಷರಾದ ಎನ್.ವೆಂಕಟಾಚಲಯ್ಯ, ಕಾರ್ಯದರ್ಶಿ ಮೋಹನ್‌ರಾಜ್ ಮುಂತಾದವರು ಮಾತನಾಡಿದರು.

ದಿನಾಂಕ:25.10.2010ರಲ್ಲಿ ಬಿಡಿಎ ಆಯುಕ್ತರು ಮತ್ತು ಉದ್ದೇಶಿತ ಬಡಾವಣೆ ವ್ಯಾಪ್ತಿಯ ರೈತರುಗಳು ಹಾಗೂ ಹೋರಾಟ ಸಮಿತಿಯ ಮುಖಂಡರುಗಳ ಜೊತೆ ನಡೆದ ಮಾತುಕತೆಯಲ್ಲಿ ಚರ್ಚಿಸಿ ಒಮ್ಮತಕ್ಕೆ ಬಂದ ಹಲವು ವಿಚಾರಗಳು ಸರ್ಕಾರಿ ಆದೇಶದಲ್ಲಿ ಉಲ್ಲೇಖಿತಗೊಂಡಿಲ್ಲ. ಆದ್ದರಿಂದ ಈ ಕೆಳಕಂಡ ಬೇಡಿಕೆಗಳನ್ನು ಸರ್ಕಾರ ಒಪ್ಪಿ ಲಿಖಿತ ಅಧಿಸೂಚನೆ ಹೊರಡಿಸಬೇಕೆಂದು ಸರ್ವಾನುಮತದ ನಿರ್ಣಯವನ್ನು ಅಂಗೀಕರಿಸಿತು.

1. ರೈತರಿಗೆ ನಗದು ಪರಿಹಾರ ಅಲ್ಲದೇ ಒಂದು ಎಕರೆಗೆ ನೀಡುವ 60X40ರ ನಿವೇಶನವನ್ನು ಉಚಿತವಾಗಿ ನೀಡುವ ಬಗ್ಗೆ ಖಚಿತವಾದ ಸ್ಪಷ್ಟ ಆದೇಶ ನೀಡಬೇಕು. ಅಧಿಸೂಚನೆಯಲ್ಲಿನ ಅಸ್ಪಷ್ಟತೆಯನ್ನು ನಿವಾರಿಸಬೇಕು.
2. ಈ ಪ್ರದೇಶದಲ್ಲಿರುವ ರೆವಿನ್ಯೂ ನಿವೇಶನಗಳನ್ನು ಮತ್ತು ಕಟ್ಟಡಗಳನ್ನು ಭೂ ಸ್ವಾಧೀನ ಅಧಿಸೂಚನೆಯಿಂದ ಕೈಬಿಡುವ ಬಗ್ಗೆ ಮತ್ತು ಅಭಿವೃದ್ಧಿ ಶುಲ್ಕ ಕಟ್ಟಿಸಿಕೊಂಡು ಅಭಿವೃದ್ಧಿಪಡಿಸುವ ಬಗ್ಗೆ. ಬಿಡಿಎ ಮಾತುಕತೆಯ ವೇಳೆ ಸಮ್ಮತಿ ಸೂಚಿಸಿದ್ದು, ಆ ಕುರಿತು ಲಿಖಿತ ಆದೇಶ ಹೊರಡಿಸಬೇಕು. ಇದಲ್ಲದೇ...
3. ರೈತರ ಜಮೀನಿನಲ್ಲಿರುವ ಮರಗಿಡಗಳು ಮತ್ತು ಬೆಳೆ ಕಟ್ಟಡಗಳ ಪರಿಹಾರದ ಬಗ್ಗೆ, ಇಂದಿನ ವೈಜ್ಞಾನಿಕ ಬೆಲೆಯಲ್ಲಿ ನೀಡುವ ಬಗ್ಗೆ.
4. ಸರ್ಕಾರಿ ಭೂಮಿಯಲ್ಲಿ ಸುಮಾರು 40–50 ವರ್ಷಗಳಿಂದ ಸಾಗುವಳಿ ಮಾಡುತ್ತಿರುವ ರೈತರಿಗೆ ಮತ್ತು ಬಡವರಿಗೆ, ಪರಿಹಾರದ ವಿಚಾರವಾಗಿ ಅಥವಾ ಪರ್ಯಾಯ ವ್ಯವಸ್ಥೆ ಮಾಡುವ ಬಗೆಗೆ
5. ಈ ಪ್ರದೇಶದಲ್ಲಿ ವಾಸ ಮಾಡುತ್ತಿರುವ ಕೃಷಿ ಕಾರ್ಮಿಕರಿಗೆ ನಿವೇಶನ ಮತ್ತು ಮನೆ ಕಟ್ಟಿಕೊಡುವ ವಿಚಾರವಾಗಿ
6. 12 ಗ್ರಾಮಗಳ ಮೂಲಭೂತ ಸೌಕರ್ಯವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವೇ ವಹಿಸಿಕೊಂಡು ಅಭಿವೃದ್ಧಿ ಪಡಿಸುವ ವಿಚಾರವಾಗಿ
7. ಅಧಿಸೂಚನೆ ಪ್ರದೇಶದಲ್ಲಿರುವ ನರ್ಸರಿ ಮತ್ತು ಇಟ್ಟಿಗೆಗೂಡುಗಳ ಜಾಗವನ್ನು ಭೂ ಸ್ವಾಧೀನದಿಂದ ಕೈಬಿಡುವ ವಿಚಾರವಾಗಿ
8. ಪರಿಹಾರ ತೆಗೆದುಕೊಳ್ಳುವ ರೈತರಿಗೆ ದಾಖಲೆಗಳನ್ನು ಸರಳೀಕರಣಗೊಳಿಸಿ ಅವರಿಗೆ ಪರಿಹಾರ ನೀಡುವ ಬಗ್ಗೆ.
9. ಭೂ ಸ್ವಾಧೀನಕ್ಕೆ ಒಳಪಟ್ಟ ರೈತರು ತೆಗೆದುಕೊಳ್ಳುವ ಪರಿಹಾರಕ್ಕೆ ಒಂದು ಎಕರೆಗಿಂತ ಕಡಿಮೆ ಇದ್ದರೆ ಹಣ ಅಥವಾ ಪರಿಹಾರ ರೂಪದಲ್ಲಿ ಪರಿಹಾರ ನೀಡುವ ಬಗ್ಗೆ
10. ಭೂಮಿ ಕಳೆದುಕೊಂಡ ರೈತರಿಗೆ ಬೇರೆ ಕಡೆ ಭೂಮಿ ಖರೀದಿಸಿದರೆ ಸುಂಕ ರಹಿತ ನೋಂದಣಿ (ರಿಜಿಸ್ಟ್ರೇಷನ್)ಗೆ ಅವಕಾಶ ಕಲ್ಪಿಸುವ ಬಗ್ಗೆ



ಪೋಲೀಸ್ ದೌರ್ಜನ್ಯವನ್ನು ದಿಟ್ಟವಾಗಿ ಎದುರಿಸಿದವರಲ್ಲಿ ಒಬ್ಬರಾದ ಮಲ್ಲೇಶಪ್ಪನವರಿಗೆ ಅಭಿನಂದನೆ ಜಿ.ಸಿ.ಬಯ್ಯಾರೆಡ್ಡಿಯವರಿದ

25.10.2010ರ ಸಭೆಯಲ್ಲಿ ವಿವರವಾಗಿ ಚರ್ಚಿಸಿ ಬಹುತೇಕ ಅಂಶಗಳ ಬಗೆಗೆ ಬಿಡಿಎ ಸಮ್ಮತಿ ಸೂಚಿಸಿತ್ತು. ಕೆಲವೊಂದು ಪ್ರಶ್ನೆಗಳ ಬಗೆಗೆ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ನಿರ್ಧರಿಸಲಾಗಿತ್ತು.ಈ ಕುರಿತು ಸರ್ಕಾರವು ತತ್‌ಕ್ಷಣದಲ್ಲಿ ಕ್ರಮವಹಿಸಬೇಕೆಂದು ಆಗ್ರಹಿಸಿದ ಸಮಾವೇಶವು ಸರ್ಕಾರವು ಈ ನಿಟ್ಟಿನಲ್ಲಿ ನಿರ್ಲಕ್ಷ್ಯ ಅಥವಾ ವಿಳಂಬ ಧೋರಣೆ ತೋರಿದರೆ ಸೆಪ್ಟೆಂಬರ್ 15 ರ ನಂತರ ಪ್ರತಿಭಟನೆಯನ್ನು ತೀವ್ರಗೊಳಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದೆ. ❑

ಪೋಲೀಸ್ ದೌರ್ಜನ್ಯಕ್ಕೆ ತುತ್ತಾದವರಿಗೆ ಅಭಿನಂದನೆ


ಈ ಚಳುವಳಿಯ ಸಂದರ್ಭದಲ್ಲಿ ಪೋಲೀಸರ ತೀವ್ರ ದೌರ್ಜನ್ಯಕ್ಕೆ ತುತ್ತಾಗಿ ಜೈಲುವಾಸ ಅನುಭವಿಸಿದ ಎಂಟು ಜನ ಹೋರಾಟಗಾರರಿಗೆ ಈ ಸಮಾವೇಶದಲ್ಲಿ ಹಾರ ಅರ್ಪಿಸಿ ಅಭಿನಂದಿಸಲಾಯಿತು. ದಂಪತಿಗಳಾದ ಗಂಗಾ ಪ್ರಸಾದ್–ಗಜಲಕ್ಷ್ಮಿ ದೇವಯ್ಯ–ಲಕ್ಷ್ಮಮ್ಮ, ಮಂಜುಳಮ್ಮ–ಹನುಮಯ್ಯ ಇವರಲ್ಲದೆ ಮಲ್ಲೇಶಪ್ಪ, ವೆಂಕಟೇಶ್‌ರವರನ್ನು ಈ ಸಂದರ್ಭದಲ್ಲಿ ವೇದಿಕೆಯಲ್ಲಿ ವಿವಿಧ ಮುಖಂಡರು ಅಭಿನಂದಿಸಿ ಗೌರವಿಸಿದರು.

ಸಮಾವೇಶದಲ್ಲಿ



ಅಣ್ಣಾ ಹಜ಼ಾರೆಯವರ ಉಪವಾಸ ಸತ್ಯಾಗ್ರಹ ದೇಶದ್ಯಂತ ಭಾರೀ ಜನಬೆಂಬಲ ಗಳಿಸುತ್ತಿದ್ದು, ಭ್ರಷ್ಟಾಚಾರದ ವಿರುದ್ಧ ಜನಗಳ ಆಕ್ರೋಶ ಸ್ಪಷ್ಟವಾಗಿ ವ್ಯಕ್ತವಾಗುತ್ತಿರುವಾಗ, ಕೊನೆಗೂ ಪ್ರಧಾನಿಗಳು ಮೌನ ಮುರಿದು ಅಣ್ಣಾರವರಿಗೆ ಪತ್ರ ಬರೆದು ಉಪವಾಸ ಸತ್ಯಾಗ್ರಹವನ್ನು ಹಿಂತೆಗೆದುಕೊಳ್ಳುವಂತೆ ಮನವಿ ಮಾಡಿದ್ದಾರೆ. ಅವರೊಂದಿಗೆ ಮಾತುಕತೆಗೆ ಹಿರಿಯ ಮಂತ್ರಿ ಪ್ರಣಬ್ ಮುಖರ್ಜಿಯವರ ನೇತೃತ್ವದಲ್ಲಿ ಒಂದು ಸಮಿತಿ ನೇಮಿಸಿದ್ದಾರೆ. ಈ ನಡುವೆ ಏನು ಮಾಡಬೇಕೆಂದು ತೋಚದ ಯುಪಿಎ–2 ಸರಕಾರ ಅಣ್ಣಾ ತಂಡದ 'ಜನಲೋಕಪಾಲ ಮಸೂದೆ'ಯನ್ನೂ ಸಂಸತ್ತಿನ ಸ್ಥಾಯೀ ಸಮಿತಿಗೆ ಕಳಿಸಿದೆ. ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ಉಪವಾಸ ಹತ್ತನೇ ದಿನ ಪ್ರವೇಶಿಸಿದೆ, ಮಾತುಕತೆ ಮುರಿದು ಬಿದ್ದಿದೆ ಎಂದು ಅಣ್ಣಾ ತಂಡದ ವಕ್ತಾರರು ಹೇಳಿದ್ದಾರೆ. ಸರಕಾರ ಕರೆದ ಸರ್ವಪಕ್ಷ ಸಭೆಯಲ್ಲೂ ಸರಕಾರದ ನಿಲುವಿನಿಂದಾಗಿ ಯಾವ ನಿರ್ಣಯವೂ ಆಗಲಿಲ್ಲ, ಅಣ್ಣಾರವರಿಗೆ ಉಪವಾಸವನ್ನು ನಿಲ್ಲಿಸುವಂತೆ ಮನವಿ ಮಾಡಲಾಗಿದೆಯಷ್ಟೇ. ಜನಾಭಿಪ್ರಾಯಕ್ಕೆ ತಲೆಬಾಗಿ, ಪರಿಣಾಮಕಾರಿ ಲೋಕಪಾಲ ವ್ಯವಸ್ಥೆಯನ್ನು ತರುವಂತೆ ಮಾರ್ಪಾಡುಗೊಳಿಸಿದ ಅಥವ ಹೊಸದಾದ ಮಸೂದೆಯನ್ನು ಮಂಡಿಸುವಂತೆ ಎಡಪಕ್ಷಗಳು ಹೇಳಿವೆ. ಯುಪಿಎ–2 ನೇತೃತ್ವ ವಹಿಸಿರುವ ಕಾಂಗ್ರೆಸಿನ ಕೆಲವು ಸಂಸತ್ ಸದಸ್ಯರು ಕೂಡ ಈಗಿನ ಪರಿಸ್ಥಿತಿಗೆ ತಮ್ಮ ಸರಕಾರ ಮತ್ತು ಅದರ 'ತಂತ್ರಗಾರರ' ವಿಫಲತೆಯೇ ಹೊಣೆಯೆಂದು ಹೇಳುತ್ತಿದ್ದಾರಂತೆ. ಆದರೂ ಯುಪಿಎ–2 ಸರಕಾರದ ನಿಷ್ಕ್ರಿಯತೆ ಮುಂದುವರೆದಿದೆ.


ಇದರ ನಡುವೆಯೇ ಈ ಭ್ರಷ್ಟಾಚಾರಕ್ಕೆ ನೀರೆರೆದು ಪೋಷಿಸಿದ 'ಆರ್ಥಿಕ ಸುಧಾರಣೆ'ಗಳ ಮಂತ್ರೋಚ್ಚಾರಣೆ ಮಾತ್ರ ನಿಂತಿಲ್ಲ. ಸ್ವತಂತ್ರ ಭಾರತದ ಅತ್ಯಂತ ಭ್ರಷ್ಟ ಸರಕಾರದ ನೇತೃತ್ವ ವಹಿಸಿರುವ 'ಸುಧಾರಣೆಗಳ ಹರಿಕಾರ' ಪ್ರಧಾನಿಗಳು ಈ ಬಗ್ಗೆ ಮಾತ್ರ ಎಂದೂ ಮೌನ ತಳೆಯುವವರಲ್ಲ. ಇನ್ನೊಂದೆಡೆ ಪ್ರಧಾನಿಗಳನ್ನು 2ಜಿ ಹಗರಣದಲ್ಲಿ ಸಾಕ್ಷಿಯಾಗಿಸುವುದಾಗಿ ಈ ಹಗರಣದಲ್ಲಿ ಆಪಾದಿತರಾಗಿ ನ್ಯಾಯಾಂಗ ಕಸ್ಟಡಿಯಲ್ಲಿರುವ ಡಿಎಂಕೆ ಸಂಸದರು ಹೇಳಿದ್ದಾರೆ. ಯುಪಿಎ–2 ಸರಕಾರ ಸುಪ್ರಿಂ ಕೋರ್ಟ್ ಕಪ್ಪು ಹಣದ ತನಿಖೆಗೆ ವಿಶೇಷ ತನಿಖಾ ದಳ ನೇಮಿಸುವ ಆದೇಶವನ್ನು ಹಿಂತೆಗೆದುಕೊಳ್ಳಬೇಕೆಂಬ ತನ್ನ ನಿಲುವು ಸರಿಯೆಂದು ವಾದಿಸಿದೆ.



ವೇದರಾಜ ಎನ್.ಕೆ.

ಮತ್ತೆ ಅದೇ '9% ದರ', 'ಆರ್ಥಿಕ ಸುಧಾರಣೆ' ಇತ್ಯಾದಿ ಇತ್ಯಾದಿ

ದೇಶ ಭ್ರಷ್ಟಾಚಾರದ ನಿಗ್ರಹದ ಬಗ್ಗೆ ತೀವ್ರ ಆತಂಕದಿಂದ ಚರ್ಚಿಸುತ್ತಿರುವ ನಡುವೆಯೇ ಯೋಜನಾ ಆಯೋಗ 12ನೇ ಪಂಚವಾರ್ಷಿಕ ಯೋಜನೆಯ ನಿಲುವು ಪತ್ರವನ್ನು ಅಂಗೀಕರಿಸಿದೆ. 9% ಬೆಳವಣಿಗೆ ದರದ



ಗುರಿಯನ್ನು ಅನುಮೋದಿಸಿದ ಯೋಜನಾ ಆಯೋಗದ ಈ ಸಭೆಯಲ್ಲಿ ಮಾತಾಡುತ್ತ ಪ್ರಧಾನ ಮಂತ್ರಿಗಳು ಆರ್ಥಿಕ ಸುಧಾರಣೆಗಳ ಕಾರ್ಯಕ್ರಮಕ್ಕೆ ಮತ್ತಷ್ಟು ಒತ್ತು ಕೊಡುವುದೇ ತಮ್ಮ ಸರಕಾರದ ಪ್ರಥಮ ಆದ್ಯತೆ ಎಂದು ಹೇಳಿದ್ದಾರೆ. ಎರಡು ದಶಕಗಳ ಹಿಂದೆ ತಾವು ಈ ಕಾರ್ಯಕ್ರಮವನ್ನು ಆರಂಭಿಸಿದಾಗ ಬಲಪಂಥೀಯರು ಮತ್ತು ಎಡಪಂಥೀಯ ಇಬ್ಬರಿಂದಲೂ ವಿರೋಧ ವ್ಯಕ್ತವಾದರೂ ಈ ಇಪ್ಪತ್ತು ವರ್ಷಗಳಲ್ಲಿ ಅವರೆಲ್ಲರೂ ಸುಮಾರಾಗಿ ತಾವು ಹಾಕಿದ ಮಾರ್ಗದಲ್ಲೇ ಸಾಗಿದ್ದಾರೆ ಎಂದು ಅವರು ಬೆನ್ನು ತಟ್ಟಿಕೊಂಡಿದ್ದಾರೆ. ಆದರೆ ಈ ಎರಡು ದಶಕಗಳ ನಂತರದ ಪರಿಸ್ಥಿತಿಯೇನು, ತಮ್ಮ 'ಉದಾರೀಕರಣ'ವನ್ನು ಸ್ವಾಗತಿಸಿದ, ಅದರಿಂದ ಲಾಭ ಪಡೆದ ಮಧ್ಯಮ ವರ್ಗಗಳ ಜನಗಳೇ ತಮ್ಮ ಸರಕಾರದ ವಿರುದ್ಧ ಆಕ್ರೋಶ ಏಕೆ ವ್ಯಕ್ತಪಡಿಸುತ್ತಿದ್ದಾರೆ ಎಂದು ಮಾತ್ರ ಅವರು ಹೇಳಿಲ್ಲ. ಅದೇ ವೇಳೆಗೆ ಈಗಲೂ ಈ ಕಾರ್ಯಕ್ರಮದ ಬಗ್ಗೆ ವಿಶಾಲ ರಾಷ್ಟ್ರೀಯ ಒಮ್ಮತ ಇಲ್ಲ ಎಂದು ಅವರು ಒಪ್ಪಿಕೊಂಡಿದ್ದಾರೆ. ಇದರಿಂದಾಗಿ 'ಎರಡನೇ ತಲೆಮಾರಿನ' ಸುಧಾರಣೆಗಳನ್ನು ಮುಂದೊತ್ತಲು ಕಷ್ಟವಾಗುತ್ತಿದೆ ಎಂದಿದ್ದಾರೆ, ಜಗತ್ತು ಹಣಕಾಸು ಬಂಡವಾಳದ ದುಷ್ಕೃತ್ಯಗಳಿಂದಾಗಿ ಮೂರು ವರ್ಷಗಳಲ್ಲಿ ಎರಡನೇ ಬಾರಿ ತತ್ತರಿಸುತ್ತಿರುವಾಗಲೂ ಅದರ ಪರಿವೆಯೇ ಇಲ್ಲದಂತೆ ಮತ್ತೆ ಹಣಕಾಸು ಉದಾರೀಕರಣದ ಮಾತಾಡಿದ್ದಾರೆ.

ಅತ್ತ ಯುಪಿಎ–2 ಹಣಕಾಸು ಮಂತ್ರಿಗಳು ಭಾರತದ 'ಬೆಳವಣಿಗೆ ಗಾಥೆ'ಗೆ ಏನೇನೂ ಬಾಧೆಯಿಲ್ಲ ಎಂದು ಪುನರುಚ್ಚರಿಸಿದ್ದಾರೆ. ಅಮೆರಿಕಾದ ಸಾಲ ಬಿಕ್ಕಟ್ಟಿನ ಫಲವಾಗಿ ಹಣಕಾಸು ಮಾರುಕಟ್ಟೆಗಳಲ್ಲಿ ಹಬ್ಬಿರುವ ಕೋಲಾಹಲದ ಬಗ್ಗೆ ಅವರು ದಿಲ್ಲಿಯಲ್ಲಿ ರಿಝರ್ವ್ ಬ್ಯಾಂಕ್ ಗವರ್ನರ್ ಮತ್ತು ಪ್ರಧಾನ ಮಂತ್ರಿಗಳ ಆರ್ಥಿಕ ಸಲಹಾ ಮಂಡಳಿಯ ಅಧ್ಯಕ್ಷರೊಂದಿಗೆ ಸಮಾಲೋಚನೆ ನಡೆಸುತ್ತಿರುವಾಗಲೇ, ಅತ್ತ ಮುಂಬೈಯ ದಲಾಲ್ ಸ್ಟ್ರೀಟಿನಲ್ಲಿ ಶೇರು ಸೂಚ್ಯಂಕ ಕಳೆದ ಹದಿನೈದು ತಿಂಗಳಲ್ಲಿ ಕಾಣದಷ್ಟು ಕೆಳಗೆ ಕುಸಿದು ಹೂಡಿಕೆದಾರರ ಸಂಪತ್ತು 2ಲಕ್ಷ ಕೋಟಿ ರೂ.ಗಳಷ್ಟು ಕ್ಷೀಣಿಸಿದೆ ಎಂದು ಲೆಕ್ಕ ಹಾಕಲಾಗಿದೆ. ಆದರೂ "ನಮ್ಮ ಮೂಲಭೂತ ಅಂಶಗಳು ಬಲಿಷ್ಠವಾಗಿವೆ, ಅವೀಗ ಸಮಸ್ಯಾಗ್ರಸ್ತ ಜಗತ್ತಿಗೆ ಹೆಚ್ಚು ಆಕರ್ಷಕವಾಗಿ ಕಾಣುತ್ತಿವೆ' ಎಂದು ಪುನರುಚ್ಚರಿಸಿದ್ದಾರೆ!

ಮುಂಬೈ ಶೇರುಮಾರುಕಟ್ಟೆಯಲ್ಲಿ ಈ ಕುಸಿತಕ್ಕೆ ಕಾರಣ ಶೇರುಗಳ ಹತಾಶ ಮಾರಾಟ, ಮತ್ತು ಇದರ ನೇತೃತ್ವ ವಹಿಸಿರುವವರು ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಎಂಬುದು ಸ್ಪಷ್ಟವಾಗಿ ಕಾಣುತ್ತಿದ್ದರೂ ಯುಪಿಎ–2 ಸಂಪುಟ ಬಹುಬ್ರಾಂಡ್ ಚಿಲ್ಲರೆ ವ್ಯಾಪಾರದಲ್ಲಿ 51% ವಿದೇಶಿ ನೇರ ಹೂಡಿಕೆ (ಎಫ್‌ಡಿಐ)ಗೆ ಅವಕಾಶ ನೀಡಲಿದೆ ಎಂದು ವರದಿಯಾಗಿದೆ. 'ಒಸ್ಟೆಲ್ಲ ಮೂಲರಚನೆ ಹೂಡಿಕೆ'ಯ ನಿರೂಪಣೆಯನ್ನು ಬದಲಿಸಿ ಇದಕ್ಕೆ ಅವಕಾಶ ಕಲ್ಪಿಸಲಾಗುವುದು. ಇದನ್ನು ಪ್ರಸಕ್ತ ಸಂಸತ್ತಿನ ಅಧಿವೇಶನ ಮುಗಿದ ನಂತರ ಮಾಡಲಾಗುವುದು ಎಂದು ಹೇಳಲಾಗಿದೆ. ಯುಪಿಎ–2 ರ 'ಆರ್ಥಿಕ ಸುಧಾರಣೆ'ಗಳ ಪ್ರಜಾಪ್ರಭುತ್ವ ಸ್ವರೂಪ ಹೀಗಿದೆ!

★

2ಜಿ ಹಗರಣ: ಪ್ರಧಾನಿಗಳನ್ನು ಸಾಕ್ಷಿ ಮಾಡುವ ಬೆದರಿಕೆ

'ಪ್ರಧಾನ ಮಂತ್ರಿಗಳು ಮತ್ತು ಮಾಜಿ ಹಣಕಾಸು ಮಂತ್ರಿಗಳೊಳ್ಳೆಯ ಸಾಕ್ಷಿಗಳು' – ಇದು 2ಜಿ ಹಗರಣದಲ್ಲಿ ಆಪಾದಿತರಾಗಿರುವ ಯುಪಿಎ–2 ಅಂತಪಕ್ಷ ಡಿಎಂಕೆಯ ರಾಜ್ಯಸಭಾ ಸದಸ್ಯೆ ಕನ್ನಿಮೋಳಿಯವರ ವಕೀಲರು ಈ ಕುರಿತ ವಿಶೇಷ ಕೋರ್ಟಿನಲ್ಲಿ ಹೇಳಿರುವ ಮಾತು. 2008ರಲ್ಲಿ ಒಂಭತ್ತು ಹೊಸ ಕಂಪನಿಗಳಿಗೆ ತರಂಗಾಂತರ ಹಂಚಿಕೆ ಪ್ರಧಾನ ಮಂತ್ರಿಗಳು ಮತ್ತು ಆಗಿನ ಹಣಕಾಸು ಮಂತ್ರಿಗಳಿಗೆ ಗೊತ್ತಿದ್ದೇ ನಡೆದಿದೆ ಎಂದು ಮತ್ತೆ ಹೇಳಿರುವ ವಕೀಲರು "2ಜಿ ತರಂಗಾಂತರದ ಪರವಾನಿಗೆಯನ್ನು ಮಾರಬೇಕಾಗಿಲ್ಲ/ ಹರಾಜುಮಾಡಬೇಕಾಗಿಲ್ಲ ಎಂದು ನಿರ್ಧರಿಸಿದ ಸಭೆಯ ಕಲಾಪವನ್ನು

ಪುಟ 15ಕ್ಕೆ

ಕಪ್ಪು ಹಣದಲ್ಲಿ 1.2ಲಕ್ಷ ಕೋಟಿ ಬಾಲದುಡಿಮೆಯ ಪಾಲು

ಮಕ್ಕಳನ್ನು ದುಡಿಸಿಕೊಳ್ಳುವ ಕಾನೂನು ಬಾಹಿರ ಕ್ರಮದಿಂದ ಈ ದೇಶದ ಉದ್ಯಮಿಗಳು ಪ್ರತಿ ವರ್ಷ 1.2 ಲಕ್ಷ ಕೋಟಿ ರೂ.ಗಳ ಲಾಭವನ್ನು ಜೇಬಿಗಿಳಿಸುತ್ತಿದ್ದಾರೆ. ಇದನ್ನು ಎಂದೂ ಆದಾಯವಾಗಿ ತೋರಿಸದೆ ಅವರು ಸರಕಾರಕ್ಕೆ ತೆರಿಗೆ ವಂಚನೆಯನ್ನೂ ಮಾಡುತ್ತಿದ್ದಾರೆ– ಇದು ಬಾಲದುಡಿಮೆ ನಿಲ್ಲಿಸುವ ಉದ್ದೇಶದಿಂದ ಕೆಲಸ ಮಾಡುತ್ತಿರುವ 'ಬಚ್‌ಪನ್ ಬಚಾವೋ ಆಂದೋಲನ್' (ಬಾಲ್ಯವನ್ನು ಉಳಿಸಿ ಆಂದೋಲನ) ಎಂಬ ಸಂಸ್ಥೆಯ ಪ್ರಾಥಮಿಕ ವರದಿ ಹೇಳಿರುವ ಸಂಗತಿ.

ಈ ವರದಿಯ ಪ್ರಕಾರ ದೇಶದಲ್ಲೀಗ ಆರು ಕೋಟಿ ಬಾಲದುಡಿಮೆಗಾರರಿದ್ದಾರೆ. ಸರಕಾರದ ಅಂದಾಜಿನ ಪ್ರಕಾರ ವಯಸ್ಕ ದುಡಿಮೆಗಾರರಿಗೆ 115ರೂ. ಕೂಲಿ ಕೊಡಬೇಕಾಗಿದ್ದರೆ, ಇವರಿಗೆ ಕೊಡುವುದು 15ರೂ. ಕೂಲಿ. ಅಂದರೆ ಪ್ರತಿಯೊಂದು ದುಡಿಯುವ ಬಾಲಕಾರ್ಮಿಕನಿಂದ ಉದ್ಯಮಿಗಳು ದಿನಕ್ಕೆ 100ರೂ. ಉಳಿಸುತ್ತಾರೆ. ವರ್ಷಕ್ಕೆ 200ದಿನಗಳ ಸರಾಸರಿ ಕೆಲಸ ಎಂದಿಟ್ಟುಕೊಂಡರೆ ಇದು 1.2ಲಕ್ಷ ಕೋಟಿಯಾಗುತ್ತದೆ. ದುಡಿಮೆಗಾರರಿಗೆ ಸಲ್ಲಬೇಕಾದ ಇಷ್ಟು ಹಣ ಉದ್ಯಮಿಗಳ ಜೇಬಿಗೆ ಹೋಗುತ್ತದೆ. ಇದು ಎಲ್ಲೂ ಲೆಕ್ಕಕ್ಕೆ ಬರದಿರುವುದರಿಂದ ಸರಕಾರದ ಆದಾಯ ತೆರಿಗೆ ಬಲೆಗೂ ಬರದೆ ಕಪ್ಪು ಹಣವಾಗಿ ಮಾರುಕಟ್ಟೆ ಯಲ್ಲಿ ಇರುತ್ತದೆ.

ಅಂತರಾಷ್ಟ್ರೀಯ ಕಾರ್ಮಿಕ ಸಂಘಟನೆ (ಐಎಲ್‌ಒ) ಪ್ರಕಾರ ವಿಶ್ವದಲ್ಲಿ ಬಾಲ ಕಾರ್ಮಿಕರ ಸಂಖ್ಯೆ ಸುಮಾರು 21.5 ಕೋಟಿ. ಇದರಲ್ಲಿ 11.5 ಕೋಟಿ ಮಕ್ಕಳು ಅಪಾಯಕಾರಿ ಕೆಲಸಗಳಲ್ಲಿ ತೊಡಗಿದ್ದಾರೆ. ಇವರಲ್ಲಿ ಹೆಚ್ಚಿನವರು ಭಾರತ ದಂತಹ ಅಭಿವೃದ್ಧಿಶೀಲ ದೇಶಗಳಿಗೆ ಸೇರಿದವರು. ಭಾರತದಲ್ಲಿ ಬಾಲ ಕಾರ್ಮಿಕರ ಸಂಖ್ಯೆ 2007ರಲ್ಲಿ 4.52 ಕೋಟಿ ಎಂದು 'ರಾಷ್ಟ್ರೀಯ ಅಸಂಘಟಿತ ವಲಯದ ಉದ್ದಿಮೆಗಳ ಆಯೋಗ' ಲೆಕ್ಕ ಹಾಕಿತ್ತು. ವಾಸ್ತವವಾಗಿ ಇದೀಗ 6 ಕೋಟಿಗೆ ಕಡಿಮೆಯಿಲ್ಲ ಎಂದು ಕೆಲವು ಸರ್ಕಾರೇತರ ಸಂಘಟನೆಗಳು ಹೇಳುತ್ತಿವೆ.

ನಿಜಸಂಖ್ಯೆ ಎಷ್ಟೇ ಇರಲಿ, ಬಂಡವಾಳಗಾರರ ಲಾಭಕೋರತನದ, ಶೋಷಣಾ ವ್ಯವಸ್ಥೆಯ ಒಂದು ಅಭಿವ್ಯಕ್ತಿಯಾದ ಬಾಲ ದುಡಿಮೆ ವಯಸ್ಕರಲ್ಲಿ ನಿರುದ್ಯೋಗಕ್ಕೆ ಕಾಣಿಕೆ ನೀಡುವುದಲ್ಲದೆ ಅಗಾಧ ಪ್ರಮಾಣದ ಕಪ್ಪು ಹಣವನ್ನೂ ಸೃಷ್ಟಿಸುವ ಸಾಧನವಾಗಿದೆ ಎಂಬುದಂತೂ ಸ್ಪಷ್ಟ. ○

ಜಗದಗಲ

ಶರತ್‌ಚಂದ್ರ


ಲಿಬ್ಯಾ ಇರಾಕಿನಂತೆ ಜಾರುಹಾದಿಯಲ್ಲಿ

ನಾಟೋ ವಿಮಾನಗಳ ಭಾರೀ ಬಾಂಬ್ ದಾಳಿಯ ರಕ್ಷಣೆಯಲ್ಲಿ ಲಿಬ್ಯಾದ ಗದ್ದಾಫಿ-ವಿರೋಧಿ ಗೆರಿಲ್ಲಾಗಳು ರಾಜಧಾನಿ ಟ್ರಿಪೋಲಿ ಪ್ರವೇಶಿಸಿವೆ. ಗದ್ದಾಫಿ ಸರ್ಕಾರ ಬಿದ್ದು ಹೋಯಿತು. ಗದ್ದಾಫಿ ಎರಡನೇ ಮಗನನ್ನು ವಶ ಪಡಿಸಿಕೊಳ್ಳಲಾಗಿದೆ ಎಂದು ಘೋಷಿಸಿದವು. ಬ್ರಿಟನ್ ಮತ್ತು ಫ್ರಾನ್ಸ್ ಮತ್ತು ಅಮೆರಿಕನ್-ಯುರೋಪಿಯನ್ ಮಾಧ್ಯಮಗಳೂ ಅದೇ ತುತ್ತೂರಿ ಊದಿವೆ. ಈ ರೀತಿ ಹೇಳಿಕೆ ಕೊಟ್ಟ ಮರುದಿನವೇ ಗದ್ದಾಫಿ ಎರಡನೇ ಮಗ ವಿದೇಶೀ ಮಾಧ್ಯಮಗಳ ಎದುರು ಪ್ರತ್ಯಕ್ಷನಾಗಿ ಗದ್ದಾಫಿ-ವಿರೋಧಿಗಳ ಹೇಳಿಕೆಗಳನ್ನು ಎಷ್ಟು ನಂಬಬಹುದು ಎಂದು ತೋರಿಸಿದ. ಅಮೆರಿಕನ್-ಯುರೋಪಿಯನ್ ಮಾಧ್ಯಮಗಳು ಗದ್ದಾಫಿ ಸರ್ಕಾರದ ಜೀವಾವಧಿ ಬೆರಳೆಣಿಕೆಯ ದಿನಗಳು ಎನ್ನುತ್ತಿವೆ. ಆದರೆ ಇನ್ನೂ ಈ ವರದಿ ಬರೆಯುವ ಹೊತ್ತಿಗೆ (ಅಗಸ್ಟ 25) ರಾಜಧಾನಿ ಟ್ರಿಪೋಲಿಯಲ್ಲಿ ಗದ್ದಾಫಿ ಪರ ಮತ್ತು ವಿರೋಧಿ ಪಡೆಗಳು ಭಾರೀ ಕದನದಲ್ಲಿ ತೊಡಗಿವೆ. ಗದ್ದಾಫಿ ಎಲ್ಲಿದ್ದಾನೆ ಎಂಬುದು ಯಾರಿಗೂ ಗೊತ್ತಿಲ್ಲ. 'ಜೀವಂತ ಅಥವಾ ಹೆಣ' ಗದ್ದಾಫಿ ಹಿಡಿದು ಅಥವಾ ಸುಳಿವು ಕೊಟ್ಟವರಿಗೆ ಗದ್ದಾಫಿ-ವಿರೋಧಿ ಪಡೆಗಳು 13 ಲಕ್ಷ ಡಾಲರುಗಳ ಬಹುಮಾನ ಘೋಷಿಸಿವೆ.

ನಾಟೋ ವಿಮಾನ ದಾಳಿಯ ಪ್ರಮುಖ ಪಾತ್ರ

ಗದ್ದಾಫಿ-ವಿರೋಧಿ ಗೆರಿಲ್ಲಾಗಳು ಆಂತರಿಕ ಯುದ್ಧ ಆರಂಭಿಸಿದ ನಂತರದ ಆರು ತಿಂಗಳುಗಳಲ್ಲಿ ಲಿಬ್ಯಾದಿಂದ ಬರುತ್ತಿರುವ ಎಲ್ಲಾ ಸುದ್ದಿಗಳನ್ನು ನೋಡಿದರೆ ಎರಡು ಲಿಬ್ಯಾಗಳು ಇವೆಯೆನೋ ಎಂಬಂತೆ ಕಾಣುತ್ತಿದೆ. ಲಿಬ್ಯಾದ ಮೇಲೆ ವಿಮಾನ ಹಾರಾಟ ನಿಷೇಧಿಸಿ ವಿಶ್ವಸಂಸ್ಥೆ ಭದ್ರತಾ ಸಮಿತಿ ನಿರ್ಣಯದ ನಂತರವಂತೂ ಸತ್ಯ ಮೊದಲ ಬಲಿಪಶು ಆಗಿದೆ. ಗದ್ದಾಫಿ-ವಿರೋಧಿ ಗೆರಿಲ್ಲಾಗಳು ಪೂರ್ವದ ಪಟ್ಟಣ ಗೆದ್ದು ಟ್ರಿಪೋಲಿಗೆ ಕೆಲವೇ ದಿನದಲ್ಲಿ ಬಂದು ಗದ್ದಾಫಿ ಸರ್ಕಾರ ಉರುಳಿಸಿ ಬಿಡುತ್ತಾರೆ ಎಂಬ ಅಮೆರಿಕನ್-ಯುರೋಪಿಯನ್ ಮಾಧ್ಯಮಗಳ ಸುದ್ದಿಯಂತೂ ನಿಜವಾಗಲಿಲ್ಲ. ಈ ನಿರ್ಣಯದ 'ಜಾರಿ' ನೆಪದಲ್ಲಿ ನಾಟೋ ವಿಮಾನಗಳು ಬಾಂಬ್ ದಾಳಿ ಆರಂಭಿಸಿದ ನಂತರವಂತೂ - ತಮ್ಮ ವಿರೋಧಿಗಳು ನರಮೇಧ ಮಾಡುತ್ತಿದ್ದಾರೆ, ನಾವು ರಕ್ಷಣೆ ಮಾಡುತ್ತಿದ್ದೇವೆ - ಎಂದು ಎರಡೂ ಪಡೆಗಳು ಆಪಾದನೆಗಳ ಯುದ್ಧದಲ್ಲಿ ತೊಡಗಿವೆ. ಆದರೆ ಇಷ್ಟಂತೂ ನಿಜ. ನಾಟೋ ವಿಮಾನಗಳ ದಾಳಿ ಗದ್ದಾಫಿ ಮಿಲಿಟರಿ ಮೇಲೆ ಮಾತ್ರ ಎಂದಿದ್ದರೂ, ಅವು ಆರಂಭವಾದ ಮೇಲೆ ಭಾರೀ ಪ್ರಮಾಣದ ಸಾವು-ನೋವುಗಳು ಆಗಿವೆ. ಈ ವರೆಗೆ ಈ ಆಂತರಿಕ ಯುದ್ಧದಲ್ಲಿ ಹತ್ತಾರು ಸಾವಿರ ಜನ ಸತ್ತಿದ್ದಾರೆ. ಅವುಗಳಲ್ಲಿ ದೊಡ್ಡ ಭಾಗ ನಾಟೋ ಮತ್ತು ವಿರೋಧಿ ದಾಳಿಗಳಿಂದ ಆಗಿವೆ. ವಿರೋಧಿ ಗೆರಿಲ್ಲಾ ಪಡೆಗಳು ಟ್ರಿಪೋಲಿ ಪ್ರವೇಶಿಸಿದ ಮೊದಲ 24 ಗಂಟೆಗಳಲ್ಲೇ 1300 ಜನ ಸತ್ತಿದ್ದಾರೆ ಎಂದು ವರದಿಯಾಗಿದೆ. ಮಾಮೂಲಿನಂತೆ, ನಾವಲ್ಲ ಅವರು ಎಂಬ ಆಪಾದನೆಗಳ ಯುದ್ಧವೂ ನಡೆದಿದೆ.

ಗದ್ದಾಫಿಯವರ 42 ವರ್ಷಗಳ ಆಡಳಿತ ಕ್ರೂರ ಸರ್ವಾಧಿಕಾರ ಆಗಿತ್ತು. ಗದ್ದಾಫಿ-ವಿರೋಧಿ ಗೆರಿಲ್ಲಾಗಳು ಜನರ ಪರವಾಗಿ 'ಅರಬ್ ವಸಂತದ' ಸ್ಫೂರ್ತಿಯಲ್ಲಿ ಪ್ರಜಾಪ್ರಭುತ್ವಕ್ಕಾಗಿ ಹೋರಾಡುತ್ತಿದ್ದಾರೆ ಎಂಬುದು ಎರಡೂ ನಿಜವಲ್ಲ. ವಿಶ್ವಸಂಸ್ಥೆ ರೂಪಿಸಿದ (ಅದರದೇ ಅಂಕೆ ಸಂಖ್ಯೆಗಳ ಪ್ರಕಾರವೇ) ಸಾಮಾಜಿಕ-ಆರ್ಥಿಕ ಬೆಳವಣಿಗೆಯ ಸೂಚಕಗಳಲ್ಲಿ ಆಫ್ರಿಕಾದಲ್ಲೇ ಲಿಬ್ಯಾ ಅತ್ಯಂತ ಉತ್ತಮ ರೆಕಾರ್ಡ್ ಹೊಂದಿತ್ತು. ಅರಬ್ ದೇಶಗಳಲ್ಲೇ ಅತ್ಯಂತ ಕಡಿಮೆ ಆರ್ಥಿಕ ಅಸಮಾನತೆ ಇರುವ ದೇಶ ಲಿಬ್ಯಾ ಆಗಿತ್ತು. ಪ್ರಜಾಪ್ರಭುತ್ವ ಸಂಸ್ಥೆಗಳನ್ನು ಸ್ಥಾಪಿಸಿ ಗಟ್ಟಿಗೊಳಿಸದೆ, ಕುಟುಂಬ ಮತ್ತು ನಿಕಟವರ್ತಿಗಳ ನಿರಂಕುಶ ಆಳ್ವಿಕೆ ನಡೆಸಿದ್ದು ಒಂದೇ ಲಿಬ್ಯಾದ ಜನತೆಯ ಅತೃಪ್ತಿಗೆ ಕಾರಣವಾಗಿತ್ತು. ಅರಬ್ ವಸಂತದ ಸನ್ನಿವೇಶದಲ್ಲಿ ಹೆಚ್ಚಿನ ಪ್ರಜಾಪ್ರಭುತ್ವಕ್ಕೆ ಬೇಡಿಕೆ ಆಗಿ ಹೊಮ್ಮಿತ್ತು. ಆದರೆ ಅದು ಸರ್ಕಾರ ಬದಲಾವಣೆ ಮಾಡುವಷ್ಟು ಅಥವಾ ಸಶಸ್ತ್ರ ಹೋರಾಟಕ್ಕೆ ಇಳಿಯುವಷ್ಟು ತೀವ್ರ ಚಳುವಳಿ ಆಗಿತ್ತು ಎಂಬುದಕ್ಕೆ ಯಾವುದೇ ಆಧಾರಗಳಿಲ್ಲ. ಈಗ ಗದ್ದಾಫಿ ಸರ್ಕಾರದ ವಿರುದ್ಧ ಹೋರಾಡುತ್ತಿರುವವರು ಅಂತಹ ಯಾವುದೇ ಚಳುವಳಿ ಹುಟ್ಟುಹಾಕಿದ್ದು ಅಥವಾ ಅದಕ್ಕೆ ನಾಯಕತ್ವ ಕೊಟ್ಟಿದ್ದೂ ಕಂಡು ಬಂದಿಲ್ಲ. ಅವರು ಪ್ರಜಾಪ್ರಭುತ್ವಕ್ಕೆ ಬದ್ಧರಾಗಿದ್ದಾರೆ ಎಂಬುದೂ ಸಂದೇಹಾಸ್ಪದ. ಗದ್ದಾಫಿ-ವಿರೋಧಿಗಳಲ್ಲಿ ಹಲವು ಬಣಗಳಿದ್ದು ವಿವಿಧ ಬುಡಕಟ್ಟು ಮತ್ತು ಇಸ್ಲಾಮಿಕ್ ಆಧಾರದ ಮೇಲೆ ಸಂಘಟಿತ ಬಣಗಳದ್ದೇ ಪ್ರಾಬಲ್ಯ. ಪ್ರಜಾಪ್ರಭುತ್ವದ ಬೇಡಿಕೆ ಮುಂದೆ ಇಟ್ಟವರು ಕಡಿಮೆ. ಈ ಬಣಗಳಿಗೆ ಭಾರೀ ಜನಬೆಂಬಲ ಇದೆ ಎನ್ನುವುದಕ್ಕೂ ಯಾವುದೇ ಆಧಾರಗಳಿಲ್ಲ. ಗೆರಿಲ್ಲಾ ಪಡೆಗಳು ಈವರೆಗೆ ಸಾಧಿಸಿದ ಮಿಲಿಟರಿ ಮುನ್ನಡೆಯಲ್ಲಿ - ನಾಟೋ ವಿಮಾನ ದಾಳಿ, ಬ್ರಿಟಿಷ್-ಫ್ರೆಂಚ್ ವಿಶೇಷ ಅಧಿಕಾರಿಗಳ ತರಬೇತಿ, ನೇರ ಮಿಲಿಟರಿ ನಾಯಕತ್ವ ಮತ್ತು ವಿಶೇಷ ಪಡೆಗಳ ನೇರ ಭಾಗವಹಿಸುವಿಕೆ, ವಿದೇಶೀ ಬಾಡಿಗೆ ಸೈನಿಕರ ಭಾಗವಹಿಸುವಿಕೆ - ಇವುಗಳೇ ದೊಡ್ಡ ಪಾತ್ರ ವಹಿಸಿವೆ ಎಂದು ಹಲವು



ಕೃಪೆ: ದಿ ಹಿಂದೂ

ವರದಿಗಳಿಂದ ಬೆಳಕಿಗೆ ಬಂದಿದೆ. ಅಮೆರಿಕ ಮತ್ತು ಯುರೋಪಿಯನ್ ದೇಶಗಳು 100 ಕೋಟಿ ಡಾಲರಷ್ಟು ಈ ಯುದ್ಧದ ಮೇಲೆ ಖರ್ಚು ಮಾಡಿದೆ ಎಂದು ಹೇಳಲಾಗಿದೆ. ವಿರೋಧಿ ಗೆರಿಲ್ಲಾ ಪಡೆಗಳ ಸಾಮರ್ಥ್ಯ ಅಥವಾ ಜನಬೆಂಬಲ ದೊಡ್ಡ ಪಾತ್ರ ವಹಿಸಿಲ್ಲ ಎಂದು ಹಲವು ಬ್ರಿಟಿಷ್-ಫ್ರೆಂಚ್ ಪತ್ರಿಕೆಗಳೇ ಹೇಳಿವೆ.

ಲಿಬ್ಯಾದ ಜನತೆ ಸ್ಥಿತಿ ಇನ್ನಷ್ಟು ದುರ್ಭರ

ಆದ್ದರಿಂದ ಲಿಬ್ಯಾದಲ್ಲಿ ನಡೆಯುತ್ತಿರುವುದು ಅಮೆರಿಕನ್-ಯುರೋಪಿಯನ್ ನಾಟೋ ಕೂಟದ ಮಿಲಿಟರಿ ಅತಿಕ್ರಮಣ, ಅಲ್ಲದೆ ಮತ್ತೇನೂ ಅಲ್ಲ. ವಿರೋಧಿ ಗೆರಿಲ್ಲಾ ಪಡೆಗಳು ತೋರಿಕೆಗೆ ಇರುವ ಪ್ರಾಕ್ಸಿಗಳು ಮಾತ್ರ. ಅಮೆರಿಕ-ಯುರೋಪಿಯನ್ ಕೂಟ ಲಿಬ್ಯಾದ ಸರ್ಕಾರ ಬದಲಾವಣೆಗೆ ಮಿಲಿಟರಿ ಅತಿಕ್ರಮಣ ನಡೆಸಿದೆ. ಇರಾಕ್ ಯುದ್ಧದಿಂದ ಪಾಠ ಕಲಿತು, ಅಲ್ಲಿನಂತೆ ದೊಡ್ಡ ಪ್ರಮಾಣದಲ್ಲಿ ವಿದೇಶೀ ಪಡೆಗಳನ್ನು ಇಳಿಸಿ ಸಂಕಷ್ಟಕ್ಕೆ ಸಿಕ್ಕಿ ಹಾಕಿಕೊಂಡಿಲ್ಲ ಅಷ್ಟೇ. ಆದರೆ ಯುದ್ಧ ನಂತರದ ಇರಾಕಿನಂತೆ ಸಾಮಾಜಿಕ-ಆರ್ಥಿಕ ವ್ಯವಸ್ಥೆ ಮತ್ತು ದೊಡ್ಡ ಪ್ರಮಾಣದಲ್ಲಿ ಆಸ್ತಿ ಪಾಸ್ತಿಗಳನ್ನು ನಾಶ ಮಾಡಲಾಗಿದೆ. ಇರಾಕಿನಂತೆಯೇ ಜನಾಂಗೀಯ-ಧಾರ್ಮಿಕ ವೈಷಮ್ಯ ಮತ್ತು ದ್ವೇಷಗಳನ್ನು ಉತ್ತೇಜಿಸಲಾಗಿದೆ. ಗದ್ದಾಫಿ ಸರ್ಕಾರ ಉರುಳಿದರೆ, ಈ ಜನಾಂಗೀಯ-ಧಾರ್ಮಿಕ ಬಣಗಳು ತಮ್ಮೊಳಗೆ ಕಚ್ಚಾಡಲಿವೆ. ಲಿಬ್ಯಾದಲ್ಲಿ ತೀವ್ರ ಹಿಂಸಾತ್ಮಕ ಬುಡಕಟ್ಟು ದಂಗೆಗಳು ಮತ್ತು ಆಂತರಿಕ ಘರ್ಷಣೆ ನಡೆಯಲಿವೆ. ವಿರೋಧಿ ಬಣಗಳು ಅಧಿಕಾರಕ್ಕೆ ಕಚ್ಚಾಡಲಿವೆ. ಈಗಲೇ ಒಂದು ಪ್ರಮುಖ ಬಣದ ಹಿರಿಯ ಮಿಲಿಟರಿ ನಾಯಕನ ಕೊಲೆ ಆಗಿದೆ. ಇದನ್ನು ಮಾಡಿದ್ದು ಇತರ ಬಣಗಳು ಅಂತಲೂ ಬಹಿರಂಗ ಗುಟ್ಟು.

ಈಗಾಗಲೇ ಇರುವ ಸಾಮಾಜಿಕ ಕಲ್ಯಾಣ ಯೋಜನೆಗಳಿಗೆ ತಿಲಾಂಜಲಿ ಕೊಡಲಾಗುತ್ತದೆ. ವಿರೋಧಿ ಬಣಗಳಿಗೆ ಯಾವುದೇ ರೀತಿಯ ಆಡಳಿತದ ಅನುಭವವಾಗಲೀ ಸಂಪನ್ಮೂಲವಾಗಲಿ ಇಲ್ಲದಿರುವುದರಿಂದ, ಜನತೆಯಲ್ಲಿ ಯಾವುದೇ ನೆಲೆ ಇಲ್ಲದಿರುವುದರಿಂದ 'ಶಾಂತಿ ಸುವ್ಯವಸ್ಥೆ' ಸ್ಥಾಪಿಸಲು 'ದೇಶದ ಪುನರ್ರಚನೆಗೆ' ಮತ್ತು 'ದೇಶದ ಭದ್ರತೆ ಕಾಪಾಡಲು' ಅಮೆರಿಕನ್-ಯುರೋಪಿಯನ್ ನಾಟೋ ಕೂಟಕ್ಕೆ ಆಹ್ವಾನ ಕೊಡುತ್ತವೆ. ಅಲ್ಲದೆ ಈಗಾಗಲೇ ಮಿಲಿಟರಿ-ಧನ ಸಹಾಯಕ್ಕೆ ಶರತ್ತು ಆಗಿರುವಂತೆ, ಲಿಬ್ಯಾದ ತೈಲ ಮುಂತಾದ ಸಂಪತ್ತನ್ನು ಲೂಟಿ ಹೊಡೆಯಲು ಅಮೆರಿಕನ್-ಯುರೋಪಿಯನ್ ಕಂಪನಿಗಳಿಗೆ ಮುಕ್ತ ಅವಕಾಶ ಕೊಡಲಿವೆ. ಲಿಬ್ಯಾದಲ್ಲೂ ಇರಾಕಿನಂತೆ ಪಾಶ್ಚಿಮಾತ್ಯ ಕೈಗೊಂಬೆ ಸರ್ಕಾರ ಅಸ್ತಿತ್ವಕ್ಕೆ ಬರಲಿದೆ. ಇವೆಲ್ಲದರಿಂದ ಲಿಬ್ಯಾ ಇರಾಕಿನ ಜಾರುಹಾದಿಯಲ್ಲಿ ನಡೆದಿದೆ ಎಂಬುದಕ್ಕೆ ಸಂಶಯ ಇಲ್ಲ.

ಗದ್ದಾಫಿಯ 'ಮಹಾಪಾಪ'

ಲಿಬ್ಯಾದ ಜನತೆಯ ಸ್ಥಿತಿ ಯಾವುದೇ ರೀತಿಯಲ್ಲಿ ಉತ್ತಮಗೊಳ್ಳುವ ಸಾಧ್ಯತೆ ಕಡಿಮೆ. ಔಪಚಾರಿಕವಾಗಿಯೂ ಪ್ರಜಾಪ್ರಭುತ್ವ ಸ್ಥಾಪಿತವಾಗುವ ಸಾಧ್ಯತೆ ಸಹ ಬಹಳ ಕಡಿಮೆ. ಒಂದು ವೇಳೆ ಅಂತಹ ಪ್ರಯತ್ನ ನಡೆದರೂ ಅರಾಜಕತೆಯ ನೆಪ ಮಾಡಿ ಅಮೆರಿಕ-ಪರ ಪ್ರಾಕ್ಸಿ ಸರ್ವಾಧಿಕಾರ ಜಾರಿಗೆ ಬರುವ ಸಾಧ್ಯತೆಗಳೇ ಹೆಚ್ಚು. ಆದ್ದರಿಂದ ಲಿಬ್ಯಾದ ಜನತೆ ಸ್ಥಿತಿ ಈಗ ಇರುವುದಕ್ಕಿಂತ ಶೋಚನೀಯವಾಗುವ ಸಾಧ್ಯತೆ ಹೆಚ್ಚು. ಲಿಬ್ಯಾದಲ್ಲಿ ಪ್ರಜಾಪ್ರಭುತ್ವ ಸ್ಥಾಪಿಸುವುದು

ಪುಟ 15ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಸೂರಿ 87ನೇ ಹುಟ್ಟುಹಬ್ಬ

ಪುಟ 16 ರಿಂದ

ನಡೆಯುತ್ತಿರುವ ಹೋರಾಟದ ಬಗೆಗೆ ಮಾಧ್ಯಮಗಳಲ್ಲಿ ವಿಪರೀತವಾದ ಪ್ರಚಾರವನ್ನು ನೀಡಲಾಗುತ್ತಿದೆ. ಬೆಂಗಳೂರಿನಲ್ಲಿ ಫ್ರೀಡಂ ಪಾರ್ಕಿನಲ್ಲಿ ನಡೆಯುತ್ತಿರುವ ಚಳುವಳಿಯಲ್ಲಿ ಭಾಗವಹಿದರೆ ಮಾತ್ರವೇ ಜೀವನ ಸಾರ್ಥಕ ಇಲ್ಲವಾದರೆ ಇಲ್ಲ ಎಂಬ ಭಾವನೆಯನ್ನು ತುಂಬಲಾಗುತ್ತಿದೆ. ಹಲವು ಕಾರ್ಮಿಕರಲ್ಲೂ ಇಂತಹ ಭಾವನೆ ಹುಟ್ಟು ಹಾಕಲಾಗಿದೆ.

ಕನಿಷ್ಠ ಕೂಲಿಯನ್ನೇ ಕೊಡದೇ ವಂಚಿಸುವ, ಕಾರ್ಮಿಕ ಕಾಯ್ದೆಗಳನ್ನೆಲ್ಲ ಉಲ್ಲಂಘಿಸಿ ಕಾರ್ಮಿಕರಿಗೆ ಅನ್ಯಾಯ ಮಾಡುವ ಬಂಡವಾಳಗಾರರ ವಿರುದ್ಧ ನಿರಂತರವಾಗಿ ನಡೆಯುತ್ತಿರುವ ಹೋರಾಟಗಳಿಗೆ ಇದೇ ಮಾಧ್ಯಮಗಳು ಪ್ರಚಾರವನ್ನೇ ಕೊಡುವುದಿಲ್ಲ. ಇದರ ಹಿಂದಿನ ಕುತಂತ್ರವೇನು ಎಂದು ಅವರು ಪ್ರಶ್ನಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಿ.ಐ.ಟಿ.ಯು. ರಾಜ್ಯ ಅಧ್ಯಕ್ಷರೂ ಟ್ರಸ್ಟ್‌ನ ವ್ಯವಸ್ಥಾಪಕ ಟ್ರಸ್ಟಿಯಾದ ಕಾಂ. ವಿಜೆಕೆ ನಾಯರ್ ರವರು ಚುನಾವಣಾ ಸುಧಾರಣಗಳ ಅಗತ್ಯದ ಕುರಿತು ಗಮನ ಸೆಳೆದರು. ಬಂಡವಾಳಶಾಹಿ ರಾಜಕೀಯ ಪಕ್ಷಗಳು ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ, ಭ್ರಷ್ಟ ವಿಧಾನದಲ್ಲಿ ಚುನಾವಣೆ ಗೆಲ್ಲುತ್ತವೆ. ಹಣಬಲದಲ್ಲಿ ಬಂಡವಾಳಶಾಹಿ ಪಕ್ಷಗಳೊಂದಿಗೆ ಎಡಪಕ್ಷಗಳು ಸ್ಪರ್ಧಿಸಲಾರವು. ಈ ಚುನಾವಣೆ ಪ್ರಕ್ರಿಯೆ ಈ ಭ್ರಷ್ಟಾಚಾರ ನಿಯಂತ್ರಿಸುವ ದೃಷ್ಟಿಯಿಂದ, ಚುನಾವಣಾ ಫಲಿತಾಂಶವು ನಿಜವಾದ ಜನರ ಒಲವನ್ನು ಬಿಂಬಿಸುವಂತಾಗ ಬೇಕಾದ ದೃಷ್ಟಿಯಿಂದ ಪ್ರಾತಿನಿಧಿಕ ಅಥವಾ ಅನುಪಾತ ಆಧರಿತ ಪ್ರಾತಿನಿಧ್ಯದ ಚುನಾವಣಾ ವ್ಯವಸ್ಥೆ ಜಾರಿಗೆ ಬರಬೇಕು ಎಂದರು. ಒಟ್ಟಾರೆ ದೇಶದಲ್ಲಿ ಸಿಪಿಐ(ಎಂ) ಒಟ್ಟು ಶೇ 5 ಅಥವಾ 6 ಶೇ. ಮತ ಗಳಿಸಿದರೆ ಲೋಕಸಭೆಯಲ್ಲಿ ಸಿಪಿಐ(ಎಂ)ಗೆ ಶೇ. 5-6 ಸ್ಥಾನಗಳು ಸಿಗಬೇಕು. ಈಗ ಅಂತಹ ವ್ಯವಸ್ಥೆ ಇಲ್ಲ. ಒಂದೊಮ್ಮೆ ಸಿಪಿಐ(ಎಂ) ಕರ್ನಾಟಕ ರಾಜ್ಯದೊಳಗೆ ಒಟ್ಟಾರೆ ಶೇ. 2 ಮತಗಳನ್ನು ಗಳಿಸಿದರೆ ಆಗ ರಾಜ್ಯದ ವಿಧಾನ ಸಭೆಯೊಳಗೆ ಶೇ. 2 ಸ್ಥಾನಗಳು ಅಂದರೆ ಕನಿಷ್ಠ 3 ಶಾಸಕರ ಪ್ರಾತಿನಿಧ್ಯ ಸಿಗುವಂತಾಗಬೇಕು ಎಂದರು.

ಅಣ್ಣಾ ಹಜಾರೆಯವರ ಹೋರಾಟದ ಮರೆಯಲ್ಲಿ ಯಾರನ್ನು ಬಚಾವು ಮಾಡಲು ಪ್ರಯತ್ನಿಸಲಾಗುತ್ತಿದೆ ಎಂದು ಗಮನಿಸಬೇಕು. ಚಮಚಾ ಬಂಡವಾಳಶಾಹಿ (ಕ್ರೋನಿ ಕ್ಯಾಪಿಟಲಿಸಂ-ಕೈಗಾರಿಕಾ ಉತ್ಪಾದನೆಯ ಬದಲಿಗೆ ಪ್ರಭುತ್ವದೊಂದಿಗೆ ಆಪ್ತವಾಗಿದ್ದುಕೊಂಡು ನೈಸರ್ಗಿಕ ಮತ್ತು ಮಾನವ ಸಂಪನ್ಮೂಲಗಳನ್ನು ಲೂಟಿಮಾಡುವ ಬಂಡವಾಳಶಾಹಿ)ಯ ಬೃಹತ್ ಭ್ರಷ್ಟಾಚಾರವನ್ನು, ಗುತ್ತೇದಾರಿ ಬಂಡವಾಳಗಾರರ ಲೂಟಿಯನ್ನು ಮರೆ ಮಾಚಲಾಗುತ್ತಿದೆ. ಅವರೇ ಈ ಚಳುವಳಿಯ ಹಿಂದೆ ಇದ್ದಾರೆ. ಅಣ್ಣಾ ಹಜಾರೆಯವರ ಹೋರಾಟವು ಬಂಡವಾಳಗಾರರ 'ಉತ್ಪಾದನೆ'ಯೇ ಆಗಿದೆ. ಬಂಡವಾಳಗಾರರ ಉತ್ಪಾದನೆಯನ್ನು ಬಂಡವಾಳಶಾಹಿಯೇ ಸವಕಲು ಕೂಡ ಮಾಡುತ್ತದೆ. ಹಾಗಾಗಿ ಅಣ್ಣಾ ಅವರ ಹೋರಾಟವು ಬೇಗನೆ ಸವಕಲಾಗಲಿದೆ ಎಂದೂ ವಿಜೆಕೆ ನಾಯರ್ ಹೇಳಿದರು.

ಪ್ರತಿನಿತ್ಯವೂ ಭ್ರಷ್ಟಾಚಾರದ ವಿರುದ್ಧ, ಅನ್ಯಾಯದ ವಿರುದ್ಧ ಹೋರಾಟ ನಡೆಸುತ್ತಿರುವ ನಮ್ಮಲ್ಲಿಯೇ ಅಪರಾಧಿ ಭಾವನೆ ಸೃಷ್ಟಿಸುವಂತಹ ಸಮೂಹ ಸನ್ನಿಯ ವಾತಾವರಣವನ್ನು ಸೃಷ್ಟಿಸಲು ಪ್ರಯತ್ನಿಸಲಾಗುತ್ತಿದೆ. ಅಣ್ಣಾ ಅವರ ಜೊತೆಗಾರ ಕ್ರೇಜಿವಾಲ್ ಅವರ ಸಂಸ್ಥೆಗೆ ಅಮೇರಿಕ ಮೂಲದ ಫೋರ್ಡ್ ಫೌಂಡೇಷನ್ ನಿಂದ 4 ಕೋಟಿ ರೂಪಾಯಿಗಳಷ್ಟು ಹಣ ಬಂದಿದೆ ಎಂದು ದಿ ಹಿಂದೂ ಪತ್ರಿಕೆಯ ಲೇಖನದಲ್ಲಿ ಪ್ರಸ್ತಾಪವಾಗಿದೆ. ಇದರ ಅರ್ಥವೇನು ? ಈ ಹಣ ಯಾಕಾಗಿ ಬಂದಿದೆ ಎಂದು ದತ್ತಿ ಉಪನ್ಯಾಸದ ಸಂಚಾಲಕರಾದ ಕೆ. ಪ್ರಕಾಶ್ ರವರು ಪ್ರಶ್ನಿಸಿದರು.

ಸಂವಿಧಾನದ 102ನೇ ಪರಿಚ್ಛೇದದನ್ವಯ ಸೋಮನಾಥ ಚಟರ್ಜಿಯವರು ಲೋಕಸಭಾ ಸ್ಪೀಕರ್ ಆಗಿ ಸಂಸತ್ ನಲ್ಲಿ ಪ್ರಶ್ನೆ ಕೇಳಲು ಲಂಚ ತೆಗೆದುಕೊಂಡ 11 ಜನ ಸಂಸದರನ್ನು ವಜಾ ಮಾಡಿದ್ದರು. ಅದರಲ್ಲಿ ಬಿಜೆಪಿ, ಬಿಎಸ್‌ಪಿ, ಸಂಸದರು ಇದ್ದರು. ಅಂದರೆ ಈಗಿರುವ ಕಾನೂನಿನಲ್ಲಿ ಭ್ರಷ್ಟಾಚಾರದ ವಿರುದ್ಧ ಕ್ರಮವಹಿಸಲು ಅವಕಾಶ ಇವೆ. ಆದರೆ ಅದನ್ನು ಬಳಸುವ ಇಚ್ಛಾಶಕ್ತಿ ಬೇಕು ಎಂದರು.

ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ.ಎನ್. ಉಮೇಶ್ ವಂದನಾರ್ಪಣೆ ಮಾಡಿದರು. ಈ ಮೊದಲು ಪಣಿಕ್ಕರ್ ಅವರು ಸಂವಾದದಲ್ಲಿ ಪಾಲ್ಗೊಂಡು ಕೇಳುಗರ ಪ್ರಶ್ನೆಗಳಿಗೆ ಉತ್ತರಿಸಿದರು. ವೇದಿಕೆಯಲ್ಲಿ ಸಿ.ಐ.ಟಿ.ಯು. ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್. ಪ್ರಸನ್ನ ಕುಮಾರ್ ಮುಂತಾದವರು ಹಾಜರಿದ್ದರು.

ಕಾಂ.ಎಸ್.ಸೂರ್ಯನಾರಾಯಣರಾವ್ 87ನೇ ಜನ್ಮದಿನಾಚರಣೆ ಸಮಿತಿ, ಕಾಂ.ಎಸ್.ಸೂರ್ಯನಾರಾಯಣರಾವ್ ದತ್ತಿ ಉಪನ್ಯಾಸ ಸಮಿತಿ, ಕಾಂ.ಎಸ್.ಸೂರ್ಯನಾರಾಯಣರಾವ್ ಸಾಮಾಜಿಕ ಶೈಕ್ಷಣಿಕ ಟ್ರಸ್ಟ್‌ಗಳು ಈ. ಕಾರ್ಯಕ್ರಮವನ್ನು ಸಂಘಟಿಸಿದ್ದವು.

ಬೆಂಗಳೂರಿನ ಕಾರ್ಮಿಕ ಚಳುವಳಿಯ ಕಾರ್ಯಕರ್ತರು, ಸೂರಿಯವರು ಕುಟುಂಬದ ಸದಸ್ಯರು ಮುಂತಾದವರು ಗಣನೀಯ ಸಂಖ್ಯೆಯಲ್ಲಿ ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ○

ಯುಪಿಎ ದರ್ಬಾರ್

ಪುಟ 13 ರಿಂದ

ನಿಮಗೆ ತೋರಿಸುತ್ತೇನೆ. ಈ ವ್ಯವಹಾರದಲ್ಲಿ ಯಾವುದೇ ನಷ್ಟ ಇಲ್ಲ ಎಂಬುದಕ್ಕೆ ಮೂವರು ಸಾಕ್ಷಿಗಳು ಬೇಕಾದಷ್ಟಾಯಿತು' ಎಂದು ನ್ಯಾಯಾಲಯಕ್ಕೆ ಹೇಳಿದ್ದಾರೆ.

ಈ ಮೂವರು ಎಂದರೆ ಪ್ರಧಾನ ಮಂತ್ರಿಗಳು, ಆಗಿನ ಹಣಕಾಸು ಮಂತ್ರಿ ಚಿದಂಬರಂ ಮತ್ತು ಈಗಿನ ದೂರಸಂಪರ್ಕ ಮಂತ್ರಿ ಸಿಬಾಲ್. ಇವರೆಲ್ಲ ಈ ವ್ಯವಹಾರದಲ್ಲಿ ಸರಕಾರದ ಖಜಾನೆಗೆ ಏನೂ ನಷ್ಟವಾಗಿಲ್ಲ ಎನ್ನುತ್ತಿರುವಾಗ ತಮ್ಮ ಕಕ್ಷಿದಾರರು (ಕನ್ನಿಮೋಳಿ) ಮೋಸ ಮಾಡಿರುವ ಪ್ರಶ್ನೆಯೇ ಏಳುವುದಿಲ್ಲ, ಆದರಿಂದಾಗಿ ಈ ಸಿಬಿಐ ಆಪಾದನೆ 'ಅಲ್ಪತನದ್ದು, ದುರುದ್ದೇಶಪೂರಿತವಾದದ್ದು' ಎಂಬುದು ಅವರ ತರ್ಕ. ಯುಪಿಎ-2 ಸರಕಾರದ ನಿಲುವಿನ ಹಿನ್ನೆಲೆಯಲ್ಲಿ ಇದು ಸಹಜ ತರ್ಕ ಎನ್ನೋಣವೇ?

★

ಕಪ್ಪು ಹಣದ ತನಿಖೆ: ಸುಪ್ರಿಂ ಕೋರ್ಟ್ ಆದೇಶಕ್ಕೆ ಸರಕಾರದ ಆಕ್ಷೇಪ

ವಿದೇಶಗಳಲ್ಲಿ ಪೇರಿಸಿಟ್ಟ ಕಪ್ಪು ಹಣದ ಹಿಡುಗಿನ ಕುರಿತು ಈ ಸರಕಾರ ನಿಷ್ಕ್ರಿಯವಾಗಿದೆ ಎಂದು ಅದರ ತನಿಖೆ ಮಾಡಲು ನಿವೃತ್ತ ಸುಪ್ರಿಂ ಕೋರ್ಟ್ ನ್ಯಾಯಾಧೀಶ ಬಿ.ಪಿ.ಜೀವನ ರೆಡ್ಡಿಯವರ ಮುಖಂಡತ್ವದಲ್ಲಿ ಒಂದು ವಿಶೇಷ ತನಿಖಾ ತಂಡ(ಎಸ್‌ಐಟಿ) ರಚಿಸಬೇಕೆಂಬ ಸುಪ್ರಿಂ ಕೋರ್ಟ್ ಆದೇಶವನ್ನು ಪಾಲಿಸುವುದು ಕಷ್ಟಸಾಧ್ಯ, ಅದನ್ನು ಹಿಂತೆಗೆದು ಕೊಳ್ಳಬೇಕೆಂದು ಈಗ ಯುಪಿಎ-2 ಸರಕಾರ ಕೇಳಿದೆ.

ಅದರ ಪರ ಸುಪ್ರಿಂ ಕೋರ್ಟಿನಲ್ಲಿ ವಾದ ಮಂಡಿಸಿರುವ ಅಟಾರ್ನಿ ಜನರಲ್ ಈ ಆದೇಶ ಸರಕಾರದ ಆರ್ಥಿಕ ತತ್ವಗಳನ್ನು ತಟ್ಟಿದ್ದು ಈ ಬಗ್ಗೆ ಎಂದೂ ವಾದ ನಡೆದಿಲ್ಲ, ಆದ್ದರಿಂದ ಈ ಆದೇಶವನ್ನು ಹಿಂತೆಗೆದುಕೊಳ್ಳುವಂತೆ ಸರಕಾರ ಕೇಳಬಹುದು ಎಂದಿದ್ದಾರೆ. ತನಿಖೆಯನ್ನು ಶಾಸನಬದ್ಧ ಸಂಸ್ಥೆ ಮಾತ್ರ ಮಾಡಲು ಸಾಧ್ಯ, ಎಸ್‌ಐಟಿಯನ್ನು ಅಂತಹ ಸಂಸ್ಥೆಯಾಗಿ ಪರಿವರ್ತಿಸಲಾಗದು ಎಂಬುದು ಯುಪಿಎ-2 ಸರಕಾರದ ವಾದ. ○

ಲಿಬ್ಯಾ ಜಾರುಹಾದಿಯಲ್ಲಿ

ಪುಟ 14 ರಿಂದ

ನಾಟೋ ಕೂಟ ಅಥವಾ ವಿರೋಧಿಗಳ ಉದ್ದೇಶವೂ ಆಗಿರಲಿಲ್ಲ. ಅವರ ಮೂಗಿನ ನೇರಕ್ಕೆ ಕುಣಿಯುವ ಗದ್ದಾಫಿ ಸರ್ಕಾರವನ್ನು ಬದಲಾಯಿಸುವುದೇ ಆಗಿತ್ತು. ಸರ್ವಾಧಿಕಾರಿಗಳು ಅವರ ಪರ ಇದ್ದರೆ ಅವರಿಗೆ ಪೂರ್ಣ ಬೆಂಬಲ ಕೊಡುತ್ತಾರೆ. ಜನರ ಪ್ರಜಾಪ್ರಭುತ್ವ ಚಳುವಳಿ ಹೊಸಕಿ ಹಾಕಲು ಎಂತಹ ಮಿಲಿಟರಿ ದಮನಕ್ಕೆ ಕುಮ್ಮಕ್ಕು ಕೊಡಲೂ ಹೇಸುವುದಿಲ್ಲ ಅಂತ ಯೆಮೆನ್, ಸೌದಿ ಅರೇಬಿಯ, ಬಹ್ರೈನುಗಳಲ್ಲಿ ಸಿದ್ಧವಾಗಿದೆ. ಗದ್ದಾಫಿಯವರ ಒಂದು 'ಮಹಾ ಪಾಪ' ನಾಟೋ ಕೂಟದ ಈ ಮಿಲಿಟರಿ ಅತಿಕ್ರಮಣಕ್ಕೆ ಕಾರಣವಾಯಿತು. ಆಫ್ರಿಕನ್ ಒಕ್ಕೂಟದ ಅಧ್ಯಕ್ಷರಾಗಿ ಗದ್ದಾಫಿಯವರ ಕೆಲವು ಗಂಭೀರ ಪ್ರಸ್ತಾವಗಳು ಅವರಿಗೆ ದಿಗಿಲು ಹುಟ್ಟಿಸಿದ್ದವು. ಅದರಲ್ಲಿ ಡಾಲರ್ ಮತ್ತು ಯುರೋಗೆ ಬದಲಿಯಾಗಿ ಚಿನ್ನದ ಬೆಂಬಲ ಇರುವ ಆಫ್ರಿಕನ್ ದಿನಾರನ್ನು ಎಲ್ಲಾ ಆಫ್ರಿಕನ್ ದೇಶಗಳು ಎಲ್ಲಾ ವಿದೇಶೀ ವ್ಯಾಪಾರಕ್ಕೆ (ಮುಖ್ಯವಾಗಿ ತೈಲ ರಫ್ತು) ಬಳಸುವುದು ಪ್ರಮುಖವಾಗಿತ್ತು. ಲಿಬ್ಯಾ ಕೇಂದ್ರೀಯ ಬ್ಯಾಂಕಿನ ಬಳಿ 144 ಟನ್ನುಗಳ ಚಿನ್ನ ಇದ್ದು, ಇದು ಕಾರ್ಯಸಾಧ್ಯ ಪ್ರಸ್ತಾವವಾಗಿತ್ತು. ಇದು ಈಗಾಗಲೇ ಡಾಲರು, ಯುರೋಗಳ ಅಂತರಾಷ್ಟ್ರೀಯ ಸ್ಥಾನಮಾನ ಮತ್ತೂ ಆ ಮೂಲಕ ಅಮೇರಿಕ-ಯುರೋಪುಗಳ ಆರ್ಥಿಕ ಯಜಮಾನಿಕೆಗೆ ತೀವ್ರ ಸವಾಲಾಗುತ್ತಿತ್ತು. ಇರಾಕಿನ ಸದ್ದಾಂ ಹುಸೇನ್ ಎಲ್ಲಾ ತೈಲ ರಫ್ತು ಯುರೋದಲ್ಲಿ ಮಾಡಹೊರಟದ್ದೇ ಇರಾಕ್ ಅತಿಕ್ರಮಣಕ್ಕೆ ಮುಖ್ಯ ಕಾರಣ ಎಂದು ಇಲ್ಲಿ ನೆನಪಿಸಿ ಕೊಳ್ಳಬಹುದು.

ಲಿಬ್ಯಾದ ಈ ಬೆಳವಣಿಗೆ ಆ ದೇಶಕ್ಕೆ ಮಾತ್ರವಲ್ಲ ಇಡೀ ಅರಬ್ ಪ್ರದೇಶಕ್ಕೆ ಅರಬ್ ವಸಂತದಲ್ಲಿ ವ್ಯಕ್ತವಾದ ಪ್ರಜಾಪ್ರಭುತ್ವದ ಸ್ವಾತಂತ್ರ್ಯ ಸಮಾನತೆಗಳ ಆಕಾಂಕ್ಷೆಗೆ ಮಾರಕವಾದ ಬೆಳವಣಿಗೆ. ಜಾಗತಿಕ ಶಾಂತಿಗೂ ಮಾರಕವಾದದ್ದು. ○



ಸೂರಿ 87ನೇ ಹುಟ್ಟುಹಬ್ಬ

ಲೋಕಪಾಲ್: ಭ್ರಷ್ಟ ವ್ಯವಸ್ಥೆಯನ್ನು ಹಾಗೆ ಬಿಟ್ಟು ಮೇಲು ಮೇಲಿನ ಅಂಶಗಳನ್ನಷ್ಟೇ ಪರಿಗಣಿಸುವುದೇ ಮಸೂದೆಗಳ ಮಿತಿ

– ಪ್ರೊ. ಕೆ.ಎನ್.ಫಣಿಕ್ಕರ್



ಕಾಮ್ರೇಡ್ ಸೂರಿ ಎಂದೇ ಹೆಸರಾಗಿದ್ದ ರಾಜ್ಯದ ಜನಪ್ರಿಯ ಕಮ್ಯುನಿಸ್ಟ್ ನಾಯಕ, ಕಾರ್ಮಿಕ ಚಳುವಳಿಯ ಹಿರಿಯ ಮುಂದಾಳು, ಶೋಷಿತರ ಪರವಾದ ರಾಜಿ ರಹಿತ ಹೋರಾಟಕ್ಕೆ ಒಂದು ಸಂಕೇತವೇ ಆಗಿದ್ದ ಎಸ್. ಸೂರ್ಯನಾರಾಯಣ ರಾವ್ ಅವರು ನಮ್ಮನ್ನು ಅಗಲಿ 9 ವರ್ಷಗಳಾದವು. ಆದರೆ ಅವರು ಬಿಟ್ಟು ಹೋಗಿರುವ ಹೋರಾಟದ ಕೆಚ್ಚು ಇಂದಿಗೂ ಹೋರಾಟಗಾರರ, ಕಾರ್ಮಿಕರ ಮನಸಿನಲ್ಲಿ ಹಚ್ಚ ಹಸಿರಾಗಿದೆ.

ಆಗಸ್ಟ್ 24, 2011 ಸೂರಿಯವರ 87 ನೇ ಹುಟ್ಟಿದ ಹಬ್ಬ. ಬದುಕಿದ್ದಾಗಲೂ ಅವರೆಂದೂ ತಮಗೆ ವೈಭವದ ಹುಟ್ಟಿದ ಹಬ್ಬದ ಆಚರಣೆ ಬಯಸಿದವರಲ್ಲ. ಆದರೆ ಸೂರಿಯವರ ಪ್ರಖರ ಹೋರಾಟದ ವೈಖರಿಯನ್ನು ಕಂಡವರಿಗೆ, ಅವರೊಂದಿಗೆ ಒಡನಾಡಿದ ಸಂಗಾತಿಗಳಿಗೆ ಆ ದಿನವನ್ನು ಒಂದು ಅರ್ಥಪೂರ್ಣವಾಗಿ ಆಚರಿಸುವ ಆಸೆ ಮತ್ತು ಹೊಣೆಗಾರಿಕೆ ಎರಡೂ ಇದ್ದೇ ಇದೆ. ಇಂತಹ ಆಶಯಗಳೊಂದಿಗೆ ಕೆಲಸ ಮಾಡುತ್ತಿರುವುದೇ ಕಾಮ್ರೇಡ್ ಸೂರ್ಯನಾರಾಯಣರಾವ್ ಮೆಮೋರಿಯಲ್ ಟ್ರಸ್ಟ್. ಅಗಸ್ಟ್ 24, 2011 ರಂದು ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್‌ನ ಕೃಷ್ಣರಾಜೇಂದ್ರ ಪರಿಷನ್ಮಂದಿರದಲ್ಲಿ ಕಾಂ. ಸೂರ್ಯನಾರಾಯಣ ರಾವ್ ಸ್ಮಾರಕ ದತ್ತಿ ಉಪನ್ಯಾಸ ಏರ್ಪಡಿಸಲಾಗಿತ್ತು.

ವಿಷಯ; ಭ್ರಷ್ಟಾಚಾರ; ಭಾರತೀಯ ಪ್ರಜಾಪ್ರಭುತ್ವಕ್ಕೆ ಒಂದು ಸವಾಲು ಹಾಗೂ ಚುನಾವಣಾ ಸುಧಾರಣೆಗಳ ಅಗತ್ಯ.

ಈ ದತ್ತಿ ಉಪನ್ಯಾಸ ನೀಡಿದವರು ಖ್ಯಾತ ಇತಿಹಾಸಕಾರರು, ಮಾಜಿ ಉಪಕುಲಪತಿಗಳು ಆದ ಕೆ.ಎನ್. ಪಣಿಕ್ಕರ್.

ಆರಂಭದಲ್ಲಿ ಕಾರ್ಮಿಕ ಮುಖಂಡರೂ ಟ್ರಸ್ಟ್‌ನ ಸದಸ್ಯರೂ ಆದ ಮೀನಾಕ್ಷಿ ಸುಂದರಂ ಪ್ರಸ್ತಾವಿಕ ಮಾತುಗಳನ್ನಾಡಿದರು. ಅಣ್ಣಾ ಹಜಾರೆಯವರ ನೇತೃತ್ವದಲ್ಲಿ

ಪುಟ 15 ಕ್ಕೆ

ಮೂಲಭೂತ ಪ್ರಶ್ನೆಗಳು ಮತ್ತು ಪರಿಹಾರಗಳು

ಫಣಿಕ್ಕರ್ ಉಪನ್ಯಾಸದ ಆಯ್ದ ಭಾಗ

ಅಣ್ಣಾ ತಂಡದ ಕರಡು ಜನ ಲೋಕಪಾಲ್ ಮಸೂದೆ ಮತ್ತು ಸರಕಾರ ಮುಂದಿಟ್ಟಿರುವ ಲೋಕಪಾಲ ಮಸೂದೆಯನ್ನು ಹೋಲಿಸಿದಾಗ ಹಲವು ಸಮಾನ ಲಕ್ಷಣಗಳನ್ನು ಕಾಣಬಹುದು. ಭಿನ್ನತೆ ಇರುವುದು ಈ ಮಸೂದೆಗಳ ಮೂಲಭೂತ ಸ್ವರೂಪದಲ್ಲಿ ಅಲ್ಲ, ಬದಲಾಗಿ ಇದರ ವ್ಯಾಪ್ತಿಗೆ ನ್ಯಾಯಾಂಗವನ್ನು ತರುವುದು ಮುಂತಾದ ಕೆಲವು ವಿಧಿಗಳಿಗೆ ಸಂಬಂಧಪಟ್ಟಂತೆ ಮಾತ್ರ. ಸರಕಾರ ಭ್ರಷ್ಟಾಚಾರವನ್ನು ಎದುರಿಸುವಲ್ಲಿ ಪ್ರಾಮಾಣಿಕವಾಗಿಲ್ಲ, ಏಕೆಂದರೆ ಅದು ಹಲವಾರು ಸಂಗತಿಗಳನ್ನು ಮರೆಮಾಚಬೇಕಾಗಿದೆ ಎಂದು 'ನಾಗರಿಕ ಸಮಾಜ' ಕಾರ್ಯಕರ್ತರು ನಂಬಿದ್ದಾರೆ. ಅವರ ಪ್ರಕಾರ ಸರಕಾರಕ್ಕೆ ಭ್ರಷ್ಟರನ್ನು ಶಿಕ್ಷಿಸುವುದಕ್ಕಿಂತ ಅವರನ್ನು ರಕ್ಷಿಸುವ ಕಾಳಜಿಯೇ ಹೆಚ್ಚು. ಈ ಮಸೂದೆಯ ಪ್ರಧಾನ ದೌರ್ಬಲ್ಯವೆಂದರೆ ಭ್ರಷ್ಟಾಚಾರವನ್ನು ಎದುರಿಸುವಲ್ಲಿ ಇದರಲ್ಲಿ ಗುಣಾತ್ಮಕವಾಗಿ ಉತ್ತಮವಾದುದೇನೂ ಕಾಣುತ್ತಿಲ್ಲ.

ಭ್ರಷ್ಟರಿಗೆ ಶಿಕ್ಷೆಗಿಂತ ಭ್ರಷ್ಟಾಚಾರದ ನಿರೋಧ ಮುಖ್ಯ ಪ್ರಶ್ನೆ. ಜನ ಲೋಕಪಾಲ ಮತ್ತು ಲೋಕಪಾಲ ಕರಡುಗಳೆರಡೂ ಈ ಅಂಶವನ್ನು ಉಪೇಕ್ಷಿಸಿವೆ. ಸರಕಾರದ ಮಸೂದೆಯ ಪೀಠಿಕೆಯಲ್ಲಿ 'ಭ್ರಷ್ಟಾಚಾರ ನಿರೋಧ' ಎಂಬ ಪದವನ್ನೇ ಕೈಬಿಡಲಾಗಿದೆ, ಅದರ ಸ್ಥಾನದಲ್ಲಿ 'ಭ್ರಷ್ಟಾಚಾರ ತಡೆ' ಎಂಬ ಪದವನ್ನು ಹಾಕಲಾಗಿದೆ. ಹೀಗೆ ಈ ಮಸೂದೆಗಳು ವ್ಯವಸ್ಥೆಗೆ ಸಂಬಂಧಪಟ್ಟ ಪ್ರಶ್ನೆಗಳನ್ನು ಪರಿಶೀಲಿಸುವುದಿಲ್ಲ, ಬದಲಿಗೆ ಮೇಲುಮೇಲಿನ ವಿಷಯಗಳನ್ನಷ್ಟೇ ಪರಿಶೀಲಿಸುವ ಗುರಿ ಹೊಂದಿವೆ. ಆದ್ದರಿಂದ ಈ ಮಸೂದೆಗಳು ಭ್ರಷ್ಟಾಚಾರವನ್ನು ನಿರೋಧಿಸಲಾರವು ಎಂಬುದು ಸ್ಪಷ್ಟ. ಭ್ರಷ್ಟರನ್ನು ಶಿಕ್ಷಿಸಲು ಹೊಸದೊಂದು ಕಾನೂನಿನ ಅಗತ್ಯವೇನಿಲ್ಲ, ಅದರತ್ತ ಲಕ್ಷ್ಯ ಕೊಡಲು ಈಗಾಗಲೇ ಸಾಕಷ್ಟು ಸಂಖ್ಯೆಯಲ್ಲಿ ಕಾನೂನುಗಳಿವೆ.

ಅಣ್ಣಾರವರು ಪ್ರಾಯೋಜಿಸಿರುವ ಚಳುವಳಿಯಲ್ಲಿ ಕಾಣಬರುತ್ತಿರುವ ಕೆಲವು ಪ್ರವೃತ್ತಿಗಳು ಉದಾರ ಮನೋಭಾವದ ಮತ್ತು ಜಾತ್ಯಾತೀತ ಬೌದ್ಧಿಕರಲ್ಲಿ ಕೆಲವು ಆತಂಕಗಳನ್ನು ಎಬ್ಬಿಸಿವೆ. ಈ ಆಂದೋಲನವನ್ನು ರಾಷ್ಟ್ರೀಯ ಸ್ವಯಂಸೇವಕ ಸಂಘ ಬೆಂಬಲಿಸುತ್ತಿದೆ, ಸಾಧುಗಳು, ಸಂತರು ಇದರ ಮುಂಚೂಣಿಯಲ್ಲಿದ್ದಾರೆ. ಉಪವಾಸದ ವೇಳೆಗೆ ಜಂತರ್ ಮಂತರ್‌ನಲ್ಲಿದ್ದ ಜನಜಂಗುಳಿ ಸಮೃದ್ಧ ಮಧ್ಯಮ ವರ್ಗದವರು ಮತ್ತು ಆರೆಸ್ಸೆಸ್ ಕಾರ್ಯಕರ್ತರ ಒಂದು ಕುತೂಹಲಕಾರೀ ಮಿಶ್ರಣವಾಗಿತ್ತು. ಈ ಹಿಂದೆ ಭ್ರಷ್ಟ ವ್ಯವಸ್ಥೆಯ ಭಾಗವಾಗಿದ್ದ ಕಿರಣ್ ಬೇಡಿಯಂತಹ ನಿವೃತ್ತ ಅಧಿಕಾರಶಾಹಿಗಳು ಮತ್ತು ಪ್ರಶಾಂತ್ ಭೂಷಣ್‌ರಂತಹ ಮಾಜಿ ಮಂತ್ರಿಗಳು ಮುಖಂಡತ್ವದಲ್ಲಿದ್ದಾರೆ. ಅಣ್ಣಾ ಹಝಾರೆಯವರು ತಮ್ಮ ಆಂದೋಲನ ಎರಡನೇ ಸ್ವಾತಂತ್ರ್ಯ ಹೋರಾಟ, ತಾವು ಗಾಂಧೀಜಿಯಂತೆ ದೇಶದ ಚೈತನ್ಯದ ಪ್ರತಿಮೆ ಎಂಬ ಭ್ರಮೆಯಲ್ಲಿದ್ದಾರೆ.

'ಭ್ರಷ್ಟಾಚಾರದ ನಿರೋಧ'ಕ್ಕೆ ಸಂಪೂರ್ಣವಾಗಿ ಭಿನ್ನವಾದ ಪರಿಹಾರೋಪಾಯಗಳ ಅಗತ್ಯವಿದೆ. ಈ ಸಂದರ್ಭದಲ್ಲಿ ನಿರ್ದಿಷ್ಟವಾಗಿ ಎರಡು ಕ್ರಮಗಳು ಮಹತ್ವದ್ದಾಗುತ್ತವೆ. ಮೊದಲನೆಯದು, ಆಡಳಿತಾತ್ಮಕ ವಿಧಾನಗಳಲ್ಲಿ ಒಂದು ಮೂಲಭೂತ ಬದಲಾವಣೆ. ಈಗ ಆಡಳಿತವನ್ನು ಅತ್ಯಂತ ರಹಸ್ಯದ ಭಾವನೆಯಿಂದ ನಡೆಸಲಾಗುತ್ತಿದೆ, ನಿರ್ಣಯ ಪ್ರಕ್ರಿಯೆ ಸಾರ್ವಜನಿಕರಿಗೆ ತಿಳಿದಿಲ್ಲ. ಇದು ಅಧಿಕಾರಶಾಹಿಗೆ ಮತ್ತು ರಾಜಕೀಯ ಮಂದಿಗೆ ವ್ಯವಸ್ಥೆಯಲ್ಲಿ ತಮಗೆ ಅನುಕೂಲವಾಗುವಂತೆ ಕೈವಾಡ ನಡೆಸಲು ಸಾಕಷ್ಟು ಅವಕಾಶ ಕಲ್ಪಿಸುತ್ತದೆ. ಇದರ ಸ್ಥಾನದಲ್ಲಿ ಒಂದು ಪಾರದರ್ಶಕ ವ್ಯವಸ್ಥೆಯನ್ನು ತರಬೇಕು. ಈ ಮೂಲಕ ಸಾರ್ವಜನಿಕರಿಗೆ ಪ್ರಕ್ರಿಯೆಗಳು ಮತ್ತು ವಿಧಾನಗಳ ಬಗ್ಗೆ ಘಟನೆ ಸಂಭವಿಸಿದ ಮೇಲೆ ತಿಳಿಯುವ ಮೊದಲು ಅದು ನಡೆಯುತ್ತಿರುವಾಗಲೇ ತಿಳಿಯುವಂತಾಗಬೇಕು. ಸಾರ್ವಜನಿಕ ಉದ್ದಿಮೆಗಳ ಹೂಡಿಕೆಗಳ ಹಿಂಪಡಿಕೆಯಲ್ಲಿ ಅರುಣ್ ಶೌರಿ ಕುದುರಿಸಿದ ವ್ಯವಹಾರದ ಶರತ್ತುಗಳ ಬಗ್ಗೆ ಸಾರ್ವಜನಿಕರಿಗೆ ಗೊತ್ತಾಗುವಂತಿದ್ದರೆ, ಅದರಲ್ಲಿ ಒಳಗೊಂಡಿದ್ದ ಭ್ರಷ್ಟಾಚಾರವನ್ನು ನಿರೋಧಿಸಬಹುದಿತ್ತು. ಅದೇ ರೀತಿ ದೂರಸಂಪರ್ಕ ಮತ್ತು ಕಾಮನ್ವೆಲ್ತ್ ಕ್ರೀಡಾಕೂಟದ ವಿಷಯಗಳಲ್ಲೂ ಸಾಧ್ಯವಿತ್ತು.

ಎರಡನೆಯದಾಗಿ, ಅಧಿಕಾರದ ಮತ್ತು ನಿರ್ಣಯ ಪ್ರಕ್ರಿಯೆಯ ವಿಕೇಂದ್ರೀಕರಣ, ಆಮೂಲಕ ಜವಾಬ್ದಾರಿಕೆ ವೈಯಕ್ತಿಕವಾಗದೆ, ಸಾಮೂಹಿಕವಾಗುವುದು ಭ್ರಷ್ಟಾಚಾರವನ್ನು ನಿರೋಧಿಸಲು ಅಗತ್ಯವಾದ ಪೂರ್ವಭಾವಿ ಶರತ್ತು. ವ್ಯಕ್ತಿಗೆ ಕೊಟ್ಟಿರುವ ವಿವೇಚನಾ ಅಧಿಕಾರ ಭ್ರಷ್ಟಾಚಾರದ ಮೂಲದಲ್ಲಿದೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಪ್ರಜಾಪ್ರಭುತ್ವವನ್ನು ಆಳಗೊಳಿಸುವುದೇ ಏಕೈಕ ಪರಿಹಾರ. ಜನ ಲೋಕಪಾಲ ಮಸೂದೆಯಾಗಲೀ, ಲೋಕಪಾಲ ಮಸೂದೆಯಾಗಲೀ ಈ ಮೂಲಭೂತ ಸಮಸ್ಯೆಗಳನ್ನು ಪರಿಶೀಲಿಸಿಯೇ ಇಲ್ಲ.

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12, 18th Cross, S.R.Nagar, BANGALORE - 560027 Karnataka (State) and Published at BANGALORE No. 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH